ಅಖಿಲ ಭಾರತ ಪತ್ರಿಕೆ
ಜೂನ್ 2018

# ಎಲ್ಲ ಜೀವನ ಯೋಗವಾಗಿದೆ

ಶ್ರೀ ಅರವಿಂದರು

## ಯೋಗ ಸಮನ್ವಯ
## ಗ್ರಂಥದಿಂದ ಆಯ್ದ ಭಾಗಗಳು
## ಭಾಗ *I*

ಬೆಲೆ : 15/–



*It is he who wants to take*
*that is unhappy, he who gives*
*himself is never so.*

- The Mother

| ಅಖಿಲ ಭಾರತ ಪತ್ರಿಕೆ | ಪರಿವಿಡಿ |
|---|---|

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## “ಎಲ್ಲ ಜೀವನ ಯೋಗವಾಗಿದೆ”

**ಭಾಗ I**

**ಅನು : ಡಾ. ಕೆ.ಎಸ್. ಆಮೂರ ಮತ್ತು ಶ್ರೀ ಪುಟ್ಟು ಕುಲಕರ್ಣಿ**
ಪಾರಂಪರಿಕ ಯೋಗ: ಒಂದು ಸ್ಥೂಲಾವಲೋಕನ 4

**ಅನು : ಡಾ. ಕೆ.ಎಸ್. ಆಮೂರ**
ಸಮಗ್ರ ಯೋಗದ ತತ್ವ 16
ದೈವೀ ಕರ್ಮಗಳ ಯೋಗ 32
ಶ್ರೀಮಾತೆಯವರ ನುಡಿಗಳು 59

**ವಾರ್ತಾಪತ್ರ** 72

## (All India Magazine) ಸಂಪಾದಕೀಯ:

ಶ್ರೀ ಅರವಿಂದರು ಆರ್ಯ ಪತ್ರಿಕೆಯಲ್ಲಿ ಪ್ರಕಟಿಸಿದ ಪ್ರಧಾನ ಕೃತಿಗಳಲ್ಲಿ ಯೋಗ ಸಮನ್ವಯ (Synthesis of Yoga) ಒಂದಾಗಿದೆ. ಇದನ್ನು ಅವರು 1914 ಮತ್ತು 1919ರ ನಡುವೆ ರಚಿಸಿದ್ದರು. ಅದು ಯೋಗದ ಸರ್ವಸಾಧಾರಣ ಸ್ಥೂಲರೂಪವನ್ನು ಅದರ ಸಮನ್ವಯ ರೀತಿಯಲ್ಲಿ ಹಾಗೆಯೇ ಬೀಗದ ಕೈರೂಪದಲ್ಲಿರುವ ವಿಧಾನಗಳು ಹಾಗೂ ಪರಿಣಾಮಗಳಲ್ಲಿ ಕೊಡುತ್ತದೆ. ಹಾಗಿದ್ದರೂ ಗಮನಿಸಬೇಕಾದ ಸಂಗತಿ ಎಂದರೆ ಯೋಗ ಉತ್ಕ್ರಾಂತಿ ರೂಪದ ಸರಣಿಯಲ್ಲಿ ಬೆಳೆದು ಬಂದಿತು. ಮೊದಲನೆಯದು ಶ್ರೀಮಾತೆಯವರು ಕೊನೆಯದಾಗಿ ಪಾಂಡೀಚೇರಿಗೆ ಬಂದ ನಂತರದ ವಿಷಯ, ನಂತರದ್ದು ಫೆ.29, 1956ರಂದು ಆದ ಅತಿಮಾನಸದ ಪ್ರಕಟಣೆ ಕುರಿತಾದದ್ದು, ಅದೇನೇ ಇರಲಿ ಯೋಗ ಸಮನ್ವಯ ಯೋಗದ ಬೀಗದಕೈರೂಪದ ಅಂಶಗಳ ಹೆಚ್ಚಿನ ರೂಪದಲ್ಲಿ ಗ್ರಹಿಸಬಲ್ಲ ಸ್ಥೂಲಾವಲೋಕನವನ್ನು ಕೊಡುತ್ತದೆ. ಸಾಧಕ ತನ್ನ ಪ್ರಯಾಣವನ್ನು ಪ್ರಾರಂಭಿಸಲು ಮತ್ತು ಅದರಲ್ಲಿ ಬಹಳ ದೂರ ಹಾಗೂ ಆಳಗಳಲ್ಲಿ ಪ್ರಯಾಣ ಮಾಡಲು ಅತಿ ಕಡಿಮೆ ಚೌಕಟ್ಟುಗಳನ್ನು ಒದಗಿಸುತ್ತದೆ. ಈ ಸಂಚಿಕೆಯಲ್ಲಿ ಹಾಗೂ ಅದರ ಮುಂದಿನ ಸಂಚಿಕೆಯಲ್ಲಿ ಆ ಅದ್ಭುತವಾದ ಪುಸ್ತಕದಿಂದ ಪ್ರಾಮುಖ್ಯತೆಯುಳ್ಳ ಹಾಗೂ ಗ್ರಹಿಸಬಲ್ಲ ಪದಚ್ಛೇದಗಳನ್ನು ಆಯ್ದುಕೊಳ್ಳಲು ಪ್ರಯತ್ನಿಸಿದ್ದೇವೆ. ಆದಾಗ್ಯೂ ಯೋಗದ ಎಲ್ಲ ಪ್ರಧಾನ ಹಾಗೂ ಮಹತ್ವದ ಅಂಶಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನ ಮಾಡಿದಾಗಲೂ ಇಡಿಯಾದ ಪಠ್ಯವನ್ನು ಅದರ ಎಲ್ಲ ವಿವರಗಳಲ್ಲಿ ಶಿಸ್ತುಬದ್ಧತೆಯಿರುವ ಅಭ್ಯಾಸ ಮಾಡುವುದನ್ನು ಬೇರೆ ಯಾವುದರಿಂದಲೂ ಮಾಡಲಾಗುವುದಿಲ್ಲ. ಇವೆರಡು ಸಂಚಿಕೆಗಳು ಓದುಗರಲ್ಲಿ ಅಭಿರುಚಿಯನ್ನು ಪ್ರಾರಂಭಿಸುವುದಕ್ಕಾಗಿವೆ. ನಂತರ ಮೂಲ ಪಠ್ಯದತ್ತ ಹೊರಳಲು ಪ್ರಯತ್ನ ಮಾಡಬಹುದು, ಅದರಿಂದಾಗಿ “ಯೋಗ ಸಮನ್ವಯ”ದ ಆಳವಾದ ಅಭ್ಯಾಸವನ್ನು ಮಾಡುವಂತಾಗುವುದು.

*



ಇಲ್ಲಿ ಯಶಸ್ಸು ಹಾಗೂ ಅಪಜಯ ಇವೆರಡೂ ತಮ್ಮ ವರ್ತಮಾನ ಕಾಲದ ಅರ್ಥಗಳನ್ನು ಕಳೆದುಕೊಳ್ಳುತ್ತವೆ. ಅಲ್ಲಿ ಅಪಜಯವೆನ್ನುವುದು ಇಲ್ಲವೇ ಇಲ್ಲ, ಏಕೆಂದರೆ ಏನೇ ಘಟಿಸಿದರೂ ಸಹಿತ ಜಗತ್ತುಗಳನ್ನು ಸೃಷ್ಟಿಸಿದ ದೈವೀ ಪ್ರಭುವಿನ ಉದ್ದೇಶದಿಂದಲೇ ಆಗಿರುತ್ತದೆ, ಆದರೆ ಅದೇ ಅಂತಿಮವಲ್ಲ, ಅವನ ಪಥದಲ್ಲಿ ಒಂದು ಹೆಜ್ಜೆ ಮಾತ್ರವಾಗಿರುತ್ತದೆ, ಒಂದುವೇಳೆ ಅದು ವಿರೋಧಾತ್ಮಕವೆಂದು, ಒಂದು ವಿಫಲತೆ, ನಿರಾಕರಣೆ ಎಂದು ಆಗಿದ್ದಾಗ, ಒಂದು ಕ್ಷಣಕಾಲ ಉಪಕರಣ ರೂಪದ ಸತ್ತೆಯ ಮುಂದೆ ಇರಿಸಿಕೊಂಡ ಗುರಿಯ ನಿರಾಕರಣೆ ಆಗಿದ್ದಾಗಲೂ ಕೂಡ, ಅದು ಕೇವಲ ತೋರಿಕೆಯ ಹಂತದಲ್ಲಿರುತ್ತದೆ. ನಂತರ ಅವನ ಕ್ರಿಯೆಯ ಮಿತವ್ಯಯದಲ್ಲಿ ಅದು ಸರಿಯಾದ ಸ್ಥಾನದಲ್ಲಿ ತೋರಿಬರುತ್ತದೆ– ಹೆಚ್ಚು ಪೂರ್ಣವಾದ ಅತಿಮಾನಸ ದೃಷ್ಟಿ ಒಮ್ಮೆಗೆ ಇಲ್ಲವೆ ಇನ್ನೂ ಮೊದಲೇ ಅದರ ಆವಶ್ಯಕತೆ ಮತ್ತು ಕೊನೆಯ ಪರಿಣಾಮದೊಂದಿಗೆ ಅದರ ನಿಜವಾದ ಸಂಬಂಧ, ನೋಡಬಹುದು, ಆ ಪರಿಣಾಮ ಎಷ್ಟೊಂದು ವಿರೋಧಾತ್ಮಕವಾದದ್ದು ಮತ್ತು ಬಹುಶಃ ಅದರ ನಿಶ್ಚಿತ ನಿಷೇಧವಾದದ್ದೂ ಕೂಡ ಆಗಿರಬಹುದು.

**(CWSA, 24/726–27)** **– ಶ್ರೀ ಅರವಿಂದರು**

*

# ಪಾರಂಪರಿಕ ಯೋಗ: ಒಂದು ಸ್ಥೂಲಾವಲೋಕನ

## ಭಾರತೀಯ ಯೋಗದ ಹೊರಹೊಮ್ಮುವಿಕೆ

ನಾವು ಪ್ರಸವವೇದನೆಯಂತಹ ವೇದನೆಗಳಿಂದ ತುಂಬಿಕೊಂಡ ಯುಗದಲ್ಲಿದ್ದೇವೆ, ಯೋಚನೆಯ ಎಲ್ಲ ರೂಪಗಳು ಹಾಗೂ ಚಟುವಟಿಕೆ, ಅವುಗಳಲ್ಲಿಯೇ ಸ್ವತಃ ಯಾವುದೇ ಬಲವತ್ತರವಾದ ಉಪಯುಕ್ತತೆಯ ಸಾಮರ್ಥ್ಯ ಇಲ್ಲವೆ ಪಟ್ಟುಹಿಡಿಯುವಿಕೆಯ ಸದ್ಗುಣ ಇದ್ದರೆ, ಅವುಗಳನ್ನು ಪರಮೋಚ್ಚ ಪರೀಕ್ಷೆಯ ಅಧೀನಕ್ಕೊಳಪಡಿಸಲಾಗುತ್ತದೆ ಮತ್ತು ಮರುಜನ್ಮ ತಾಳಲು ಅವುಗಳಿಗೆ ಅವಕಾಶ ಒದಗಿಸಲಾಗುತ್ತದೆ. ಜಗತ್ತು ಇಂದು ಮಾಧ್ಯಮಗಳ ಭವ್ಯ ಕರಂಡಕವಾಗಿರುವ ಮುಖವನ್ನು ನಮ್ಮ ಮುಂದಿರಿಸುತ್ತದೆ, ಅದರಲ್ಲಿ ಎಲ್ಲ ವಿಷಯಗಳನ್ನು ಎಸೆಯಲಾಗುತ್ತದೆ, ತುಂಡು ತುಂಡಾಗುವಂತೆ ಕತ್ತರಿಸಿ ಇಡಲಾಗುತ್ತದೆ, ಪ್ರಯೋಗಕ್ಕೆ ಒಳಪಡಿಸಲಾಗುತ್ತದೆ, ಸಂಯೋಜಿಸಲಾಗುತ್ತದೆ, ಮರುಸಂಯೋಜನೆ ಮಾಡಲಾಗುತ್ತದೆ, ಅದು ನಾಶವಾಗಲು ಮತ್ತು ಹರಡಿಕೊಂಡ ಸಲಕರಣೆಗೆ ಹೊಸ ರೂಪಗಳನ್ನು ಕೊಡಲು ಇಲ್ಲವೆ ಪುನರುಜ್ಜೀವನ ಹೊಂದಿ ಹೊಸ ಅವಧಿಗಾಗಿ ಅಸ್ತಿತ್ವದಲ್ಲಿರಲು ಹೊರಹೊಮ್ಮುವುದಕ್ಕೆ ಅವಕಾಶ ಒದಗಿಸಲಾಗುತ್ತದೆ. ಭಾರತೀಯ ಯೋಗ ಅದರ ಸಾರದಲ್ಲಿ ವಿಶಿಷ್ಟ ಕ್ರಿಯೆಯಾಗಿದೆ ಇಲ್ಲವೆ ಪ್ರಕೃತಿಯ ಶ್ರೇಷ್ಠ ಸಾಮರ್ಥ್ಯಗಳಿಗೆ ರೂಪಕೊಡುವಿಕೆ–ಯಾಗಿದೆ, ಅದೇ ವಿಶಿಷ್ಟ ರೂಪತಾಳಿದೆ, ವಿಭಜನೆಗೊಂಡಿದೆ ಮತ್ತು ಹಲವಾರು ರೀತಿಯಲ್ಲಿ ರೂಪತಾಳಿದೆ ಮತ್ತು ಮನುಕುಲದ ಭವಿಷ್ಯತ್ತಿನ ಜೀವನದ, ಕಾರ್ಯರೂಪಕ್ಕೆ ಬರುವ ಸಾಧ್ಯತೆಗಳಲ್ಲಿರುವ ಕ್ರಿಯಾಶೀಲ ಅಂಶಗಳಲ್ಲಿ ಒಂದು ಅಂಶವಾಗಿದೆ. ನೆನಪಿಡಲು ಸಾಧ್ಯವಾಗದಷ್ಟು ಯುಗಗಳ ಮಗು, ಅದರ ಜೀವಶಕ್ತಿ ಹಾಗೂ ಸತ್ಯ ಇವುಗಳಿಂದ ನಮ್ಮ ಆಧುನಿಕ ಕಾಲದಲ್ಲಿ ರಕ್ಷಣೆಗೊಳಗಾಗಿದೆ, ಅದು ಈಗ ಅದರ ರಹಸ್ಯ ಶಾಖೆಗಳಿಂದ ಹಾಗೂ ವೈರಾಗ್ಯದ ಏಕಾಂತ ಸ್ಥಳಗಳಿಂದ ಹೊರಹೊಮ್ಮುತ್ತಿದೆ, ಅದರ ಸ್ಥಾನವನ್ನು ಜೀವಿಸುವ ಮಾನವ ಸಾಮರ್ಥ್ಯ ಹಾಗೂ ಉಪಯುಕ್ತತೆಗಳು ಇವುಗಳ ಭವಿಷ್ಯತ್ತಿನಲ್ಲಿ ಅರಸುತ್ತದೆ. ಆದರೆ ಮೊದಲು ಅದು ತನ್ನನ್ನೇ ಪುನಃ ಶೋಧಮಾಡಬೇಕು, ಆ ಸರ್ವಸಾಧಾರಣ ಸತ್ಯ ಮತ್ತು ಅದು ಪ್ರತಿನಿಧಿಸುವ ಪ್ರಕೃತಿಯ ನಿಂತುಹೋಗದ ಗುರಿ ಇವುಗಳಿರುವುದಕ್ಕೆ ಅತ್ಯಂತ ಗಾಢವಾದ ತರ್ಕವನ್ನು ಮೇಲ್ಮೈಗೆ ತರಬೇಕು ಮತ್ತು ಈ ಹೊಸ

ಸ್ವ–ಜ್ಞಾನ, ಸ್ವ–ಮೆಚ್ಚುಗೆಯಿರುವಿಕೆ ಇವುಗಳ ಪ್ರಭಾವದಿಂದ ತನ್ನದೇ ಮರಳಿ ಕಂಡುಕೊಂಡ ಹಾಗೂ ಹೆಚ್ಚು ಭವ್ಯವಾದ ಸಮನ್ವಯವನ್ನು ಕಂಡುಕೊಳ್ಳಬೇಕು. ತನ್ನನ್ನು ಪುನಃ ಸಂಘಟಿಸಿಕೊಂಡು ಬಹಳ ಸುಲಭವಾಗಿ ಹಾಗೂ ಸಾಮರ್ಥ್ಯಪೂರ್ಣವಾಗಿ ಕುಲದ ಮರು ಸಂಘಟಿಸಿಕೊಂಡ ಜೀವನದಲ್ಲಿ ಅದು ಪ್ರವೇಶಿಸುತ್ತದೆ, ಆ ಜೀವನದ ವಿಧಾನಗಳು ಅಂತರಂಗದಲ್ಲಿ ಅತ್ಯಂತ ರಹಸ್ಯ ಹಾಗೂ ಅತ್ಯಂತ ಗುಪ್ತವಾದ ಭಾಗಗಳು ಮತ್ತು ಮೇಲ್ಗಡೆಗೆ ಅಸ್ತಿತ್ವದ ಹಾಗೂ ವ್ಯಕ್ತಿತ್ವದ ಎತ್ತರಗಳು ಇವುಗಳತ್ತ ಕರೆದೊಯ್ಯುವ ಹಕ್ಕನ್ನು ಸಾಧಿಸುತ್ತವೆ.

**(CWSA, 23/5–6)** **– ಶ್ರೀ ಅರವಿಂದರು**

*

**ಯೋಗ ಮನುಷ್ಯನ ಉತ್ಕ್ರಾಂತಿಯನ್ನು ಸಂಕುಚಿತಗೊಳಿಸುತ್ತದೆ**

ಸರಿಯಾದ ದೃಷ್ಟಿಕೋನದಲ್ಲಿ ಎಲ್ಲ ಜೀವನ ಹಾಗೂ ಯೋಗ ಇವೆರಡೂ ಪ್ರಜ್ಞಾಪೂರ್ವಕವಾಗಿ ಇಲ್ಲವೆ ಸುಪ್ತ–ಪ್ರಜ್ಞೆಯಲ್ಲಿ ಒಂದು ಯೋಗವಾಗಿರುತ್ತದೆ. ಏಕೆಂದರೆ ನಾವು ಈ ಶಬ್ದಕ್ಕೆ ಕೊಡುವ ಅರ್ಥವೆಂದರೆ ಸತ್ತೆಯಲ್ಲಿ ಸುಪ್ತವಾಗಿರುವ ರಹಸ್ಯ ಕಾರ್ಯಗಳನ್ನು ಸಾಧ್ಯಗೊಳಿಸುವ ಅಭಿವ್ಯಕ್ತಿಯ ಮೂಲಕ ವಿಧಾನ–ಕ್ಕೊಳಪಡಿಸಿದ ಸ್ವ–ಪರಿಪೂರ್ಣತೆಯ ಒಂದು ಪ್ರಯತ್ನ ಎಂದಾಗಿರುತ್ತದೆ– ಆ ಪ್ರಯತ್ನದಲ್ಲಿ ಜಯಸಾಧಿಸುವ ಅತ್ಯುಚ್ಚ ಸ್ಥಿತಿ–ಮಾನವ ವ್ಯಕ್ತಿ ವಿಶ್ವಂಭರ ಹಾಗೂ ವಿಶ್ವಾತೀತ ಅಸ್ತಿತ್ವದೊಂದಿಗೆ ಏಕತೆ ಪಡೆಯುವುದಾಗಿದೆ, ಅದು ಮನುಷ್ಯನಲ್ಲಿ ಹಾಗೂ ವಿಶ್ವದಲ್ಲಿ ಭಾಗಶಃ ಅಭಿವ್ಯಕ್ತಗೊಂಡದ್ದನ್ನು ನಾವು ನೋಡುತ್ತೇವೆ. ಆದರೆ ತೋರಿಕೆಗಳ ಹಿಂದೆ ನೋಡಿದಾಗ ಅದು ಪ್ರಕೃತಿಯ ಒಂದು ವಿಶಾಲ ಯೋಗವಾಗಿರುತ್ತದೆ, ಅದು ತನ್ನ ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳಲು ಪ್ರಜ್ಞೆಯಲ್ಲಿ ಹಾಗೂ ಅವಚೇತನದಲ್ಲಿ ಪ್ರಯತ್ನಮಾಡುತ್ತದೆ, ಅದರ ಇನ್ನೂ ಕಾರ್ಯರೂಪಕ್ಕೆ ಬರುವ ಸಾಧ್ಯತೆಗಳ ಶಕ್ತಿ ಮತ್ತು ತನ್ನದೇ ದೈವೀ ನೈಜತೆ ಇವು ಏಕವಾಗುವುದಿರುತ್ತದೆ, ಅದಕ್ಕಾಗಿ ಎಂದೆಂದಿಗೂ ಹೆಚ್ಚಾಗುತ್ತಿರುವ ಅಭಿವ್ಯಕ್ತಿ–ಯಿರುತ್ತದೆ. ಪ್ರಕೃತಿ ಮನುಷ್ಯನಲ್ಲಿ ತನಗಾಗಿ ಯೋಚಿಸುವವನನ್ನು ಪೃಥ್ವಿಯ ಮೇಲೆ ಮೊದಲಬಾರಿಗೆ ಸ್ವ–ಅರಿವುಳ್ಳ ಸಾಧನ ಮತ್ತು ಚಟುವಟಿಕೆಯ ಸಂಕಲ್ಪಿಸಿದ ವ್ಯವಸ್ಥೆಗಳು ಇವುಗಳನ್ನು ಯೋಜಿಸುತ್ತದೆ, ಇವುಗಳ ಮೂಲಕ ಈ ಶ್ರೇಷ್ಠ ಉದ್ದೇಶವನ್ನು ಹೆಚ್ಚು ಶೀಘ್ರಗತಿಯಲ್ಲಿ ಹಾಗೂ ಅಪಾರ ಸಾಮರ್ಥ್ಯದಿಂದ

ಸಿದ್ಧಿಸಿಕೊಳ್ಳುವಂತಾಗುವುದು. ಸ್ವಾಮಿ ವಿವೇಕಾನಂದರು ಹೇಳಿದ ಹಾಗೆ ಯೋಗ ಮನುಷ್ಯನ ಉತ್ಕ್ರಾಂತಿಯನ್ನು ದೇಹದ ಅಸ್ತಿತ್ವವಿರುವ ಒಂದೇ ಜೀವನದ ಅವಧಿಯಲ್ಲಿ ಇಲ್ಲವೆ ಅದರ ಕೆಲವೇ ವರ್ಷಗಳಲ್ಲಿ ಇಲ್ಲವೆ ಕೆಲವೇ ತಿಂಗಳುಗಳಲ್ಲಿ ಸಂಕುಚಿತಗೊಳಿಸಬಹುದು. ಕೊಡಲಾದ ಯೋಗದ ಒಂದು ಪದ್ಧತಿ ಒಂದು ಆಯ್ದುಕೊಳ್ಳುವಿಕೆ ಇಲ್ಲವೆ ಸಂಕುಚಿತಗೊಳಿಸುವಿಕೆ ಇವುಗಳಿಗಿಂತ ಹೆಚ್ಚಿನದೇನೂ ಆಗಿರುವುದಿಲ್ಲ, ಅದು ಈಗಾಗಲೆ ಸಡಿಲಾದ ಸರ್ವಸಾಧಾರಣ ಸ್ಥಿತಿಯಲ್ಲಿ ಉಪಯೋಗಿಸಲಾಗುತ್ತಿರುವ ಇನ್ನೂ ಹೆಚ್ಚು ಸಂಕುಚಿತ ಆದರೆ ಹೆಚ್ಚು ಚೈತನ್ಯಯುಕ್ತ ಗಾಢತೆಯ ರೂಪಗಳಲ್ಲಿರುತ್ತದೆ, ಇನ್ನೂ ಹೆಚ್ಚು ಭವ್ಯ ರೀತಿಯ ಸಾವಧಾನದ ಚಲನೆಯಲ್ಲಿ, ಭೌತದ್ರವ್ಯ ಹಾಗೂ ಚೈತನ್ಯ ಇವುಗಳ ತೋರಿಕೆಯ ಧಾರಳವಾದ ಹಾಳುಮಾಡುವಿಕೆಯಿರುತ್ತದೆ, ಆದರೆ ಜಗನ್ಮಾತೆಯ ವಿಶಾಲ ಮೇಲ್ಗಡೆಯತ್ತ ಇರುವ ಶ್ರಮದಲ್ಲಿ ಹೆಚ್ಚು ಸಂಪೂರ್ಣವಾದ ಸಂಯೋಜನೆ ಕೂಡಿಕೊಂಡಿರುತ್ತದೆ. ಯೋಗದ ಈ ದೃಷ್ಟಿಕೋನ ಮಾತ್ರ ಯೌಗಿಕ ವಿಧಾನಗಳ ಸುಭದ್ರವಾದ ತರ್ಕಬದ್ಧ ಸಮನ್ವಯ ಆಧಾರ ರೂಪಿಸಬಹುದು.

**(CWSA, 23/6–7)** **– ಶ್ರೀ ಅರವಿಂದರು**

*

**ಯೌಗಿಕ ವಿಧಾನಗಳು ಹಾಗೂ ವಿಜ್ಞಾನ**

ವಿದ್ಯುತ್ ಹಾಗೂ ಉಗಿ ಇವುಗಳ ಶಕ್ತಿ ಪ್ರಕೃತಿಯಲ್ಲಿ ಅವುಗಳ ಸಾಮಾನ್ಯ ಕಾರ್ಯಾಚರಣೆಗಾಗಿ ಇರುವಂತೆ ಯೌಗಿಕ ವಿಧಾನಗಳು ಅದೇ ಬಗೆಯ ಏನೋ ಒಂದು ಸಂಪ್ರದಾಯ ಸಂಹಿತೆಯ ಮನೋವೈಜ್ಞಾನಿಕ ಕಾರ್ಯಗತಿಗಳಿಗಾಗಿ ಇರುತ್ತವೆ. ಮತ್ತು ಅವುಗಳೂ ಕೂಡ ವಿಜ್ಞಾನದ ಕಾರ್ಯಾಚರಣೆಗಳು ಇದ್ದ ಹಾಗೆ. ಒಂದು ಜ್ಞಾನದ ಮೇಲೆ ರೂಪುಗೊಂಡಿರುತ್ತವೆ, ಆ ಜ್ಞಾನವನ್ನು ಕ್ರಮಬದ್ಧ ಪ್ರಯೋಗಗಳಿಂದ, ಪ್ರಾಯೋಗಿಕ ವಿಶ್ಲೇಷಣೆ ಹಾಗೂ ಸತತ ದೊರಕಿಸುವ ಪರಿಣಾಮಗಳಿಂದ ಅಭಿವೃದ್ಧಿಪಡಿಸಲಾಗಿರುತ್ತದೆ ಹಾಗೂ ದೃಢೀಕರಿಸಲಾಗುತ್ತದೆ: ಉದಾಹರಣೆಗೆ ಎಲ್ಲ ರಾಜಯೋಗ ಈ ಗ್ರಹಿಕೆ ಹಾಗೂ ಅನುಭವದ ಮೇಲೆ ಅವಲಂಬಿಸಿದೆ, ಅವೆಂದರೆ ನಮ್ಮ ಆಂತರಿಕ ಅಂಶಗಳು, ಸಂಯೋಜನೆಗಳು, ಕಾರ್ಯವಿಧಾನಗಳು, ಶಕ್ತಿಗಳು ಇವುಗಳನ್ನು ಪ್ರತ್ಯೇಕಿಸಬಹುದು ಇಲ್ಲವೆ ಕರಗಿಸಬಹುದು, ಹೊಸ ಸಂಯೋಜನೆ ಮಾಡಬಹುದು, ಮೊದಲು

ಅಸಾಧ್ಯವಾಗಿದ್ದ ಕಾರ್ಯಗತಿಗಳಿಗಾಗಿ ಇರಿಸಬಹುದು ಇಲ್ಲವೆ ಗಟ್ಟಿಯಾಗಿ ಇರಿಸಿದ ಆಂತರಿಕ ವಿಧಾನಗಳಿಂದ ಒಂದು ಸರ್ವಸಾಧಾರಣ ಸಮನ್ವಯದಲ್ಲಿ ಪರಿವರ್ತಿಸಬಹುದು, ದೃಢನಿಶ್ಚಯಕ್ಕೆ ಬರಬಹುದು. ಹಠಯೋಗ ಕೂಡ ಅದೇ ರೀತಿಯ ಈ ಗ್ರಹಿಕೆ ಹಾಗೂ ಅನುಭವಗಳ ಮೇಲೆ ಅವಲಂಬಿಸಿರುತ್ತದೆ, ಅವುಗಳೆಂದರೆ ಪ್ರಾಣಿಕ ಶಕ್ತಿಗಳು ಹಾಗೂ ಕಾರ್ಯವಿಧಾನಗಳು ಇವುಗಳಿಗೆ ಸಾಮಾನ್ಯವಾಗಿ ನಮ್ಮ ಜೀವನ ಅಧೀನವಾಗಿರುತ್ತದೆ ಮತ್ತು ಅವುಗಳ ಸಾಮಾನ್ಯ ಕಾರ್ಯಾಚರಣೆಗಳನ್ನು ಇರಿಸಲಾಗಿರುವಂತೆ ಮತ್ತು ಅತ್ಯಗತ್ಯವಾಗಿರುವಂತೆ ತೋರಿ ಬರುತ್ತದೆ, ಅವುಗಳ ಮೇಲೆ ಪ್ರಭುತ್ವ ಪಡೆಯಬಹುದು ಮತ್ತು ಕಾರ್ಯಾಚರಣೆಗಳನ್ನು ಬದಲು ಮಾಡಬಹುದು ಇಲ್ಲವೆ ಹಂಗಾಮಿಯಾಗಿ ನಿಲ್ಲಿಸಬಹುದು (suspendes) ಪರಿಣಾಮಗಳು ಹಾಗೆ ಮಾಡದಿದ್ದರೆ ಅಸಾಧ್ಯವಾಗುತ್ತಿದ್ದವು ಮತ್ತು ಅವುಗಳ ತಾರ್ಕಿಕ ವಿವರಣೆ ಹಾಗೂ ವಿಧಾನಗಳನ್ನು ಹಿಡಿದುಕೊಳ್ಳದ ಜನರಿಗೆ ಅದು ಪವಾಡಸದೃಶವೆನಿಸಬಹುದು. ಬೇರೆ ಇತರ ರೂಪಗಳಲ್ಲಿ ಯೋಗದ ಈ ಗುಣಲಕ್ಷಣ ಕಡಿಮೆ ರೀತಿಯಲ್ಲಿ ತೋರಿಬರುವಂತೆ ಇರುತ್ತದೆ, ಏಕೆಂದರೆ ಅವು ಹೆಚ್ಚು ಅಂತರ್ಬೋಧೆಯವು ಮತ್ತು ಕಡಿಮೆ ಯಾಂತ್ರಿಕವಾದವುಗಳು, ಹೆಚ್ಚು ಹತ್ತಿರವಿರುವಂತಹವು, ಪರಮೋಚ್ಚ ದಿವ್ಯಾನಂದವಿರುವ ಭಕ್ತಿಯೋಗ, ಪರಮೋಚ್ಚ ಪ್ರಜ್ಞೆಯ ಅನಂತತೆ ಇರುವ, ಸತ್ತೆ ಇರುವ ಜ್ಞಾನ ಯೋಗ ಇವುಗಳ ರೀತಿಯವು. ಆದಾಗ್ಯೂ ಅವೂ ಕೂಡ ನಮ್ಮಲ್ಲಿರುವ ಪ್ರಧಾನ ಕಾರ್ಯಗತಿಗಳನ್ನು ಉಪಯೋಗಿಸುವುದರಿಂದ ಪ್ರಾರಂಭಿಸುತ್ತವೆ, ಅವುಗಳನ್ನು ಕುರಿತು ದೈನಂದಿನ ಸ್ವಯಂಪ್ರೇರಣೆಯ ಕಾರ್ಯಗತಿಗಳಲ್ಲಿ ರೀತಿಗಳ ಮೂಲಕ, ಕೊನೆಯವುಗಳಿಗಾಗಿ ಚಿಂತನ ಮಾಡಲಾಗಿರುವುದಿಲ್ಲ. ಯೋಗ ಎಂಬ ಸಾಮಾನ್ಯ ಹೆಸರಿನಡಿಯಲ್ಲಿ ಗುಂಪುಗೂಡಿಸಿದ ಎಲ್ಲ ವಿಧಾನಗಳು ಪ್ರಕೃತಿಯ ದೃಢಪಡಿಸಿದ ಸತ್ಯದ ಮೇಲೆ ಸ್ಥಾಪಿತಗೊಂಡಿರುತ್ತವೆ, ಮತ್ತು ಆ ವಿಧಾನಗಳು ಸಾಮಾನ್ಯ ಕಾರ್ಯವಿಧಾನಗಳು, ಸಾಮರ್ಥ್ಯಗಳು ಪರಿಣಾಮಗಳು ಇವುಗಳಿಂದ ಅಭಿವೃದ್ಧಿ ಪಡೆಯುತ್ತವೆ, ಅವು ಯಾವಾಗಲೂ ಗುಪ್ತವಾಗಿದ್ದವು, ಆದರೆ ಪ್ರಕೃತಿಯ ಸಾಮಾನ್ಯ ಚಲನೆಗಳು ಸುಲಭವಾಗಿ ಪ್ರಕಟಮಾಡುವುದಿಲ್ಲ ಇಲ್ಲವೆ ಪ್ರಕಟಮಾಡುವುದೇ ಇಲ್ಲ.

**(CWSA, 23/7)** **– ಶ್ರೀ ಅರವಿಂದರು**

*

## ಎಲ್ಲ ಜೀವನ ಯೋಗವಾಗಿದೆ

ಯಾವುದೇ ಸಮನ್ವಯ ಅದರ ಗುರಿಯಲ್ಲಿ ಮುಕ್ತ ಹಾಗೂ ಪರಿಪೂರ್ಣಗೊಳಿಸಿದ ಮಾನವ ಜೀವನದಲ್ಲಿ ಇಲ್ಲವೆ ಅದರ ವಿಧಾನಗಳಲ್ಲಿ ಭಗವಂತ ಹಾಗೂ ಪ್ರಕೃತಿ ಮರಳಿ ಏಕವಾಗದಂತೆ ಮಾಡದಿದ್ದಾಗ ತೃಪ್ತಿಕರವಾಗಿರುವುದು ಸಾಧ್ಯವಿಲ್ಲ. ನಮ್ಮ ಆಂತರಿಕ ಹಾಗೂ ಬಾಹ್ಯ ಚಟುವಟಿಕೆಗಳಿಗೆ ಹಾಗೂ ಅನುಭವಗಳಿಗೆ ಪರವಾನಿಗೆ ನೀಡಬೇಕು, ಅವೆರಡರ ದೈವೀ ಪರಾಕಾಷ್ಠೆಯನ್ನು ಅವೆರಡರ ಸಾಮರಸ್ಯವನ್ನು ದಯೆಯಿಂದ ಕಾಣಬೇಕು. ಏಕೆಂದರೆ ಮನುಷ್ಯ, ನಿಖರವಾಗಿ, ಭೌತಿಕ ಜಗತ್ತಿನಲ್ಲಿ ಅವರೋಹಣ ಮಾಡಿದ ಉಚ್ಚತರ ಅಸ್ತಿತ್ವದ ಶಬ್ದ ಹಾಗೂ ಸಂಕೇತವಾಗಿದ್ದಾನೆ, ಅದರಲ್ಲಿ ನಿಮ್ನತರವಾದದ್ದು ತನ್ನನ್ನು ರೂಪಪರಿವರ್ತನೆಗೆ ಒಳಪಡಿಸಬಹುದು ಮತ್ತು ಉಚ್ಚತರವಾದದ್ದನ್ನು ಧಾರಣ ಮಾಡಬಹುದು, ಮತ್ತು ಉಚ್ಚತರವಾದದ್ದು ನಿಮ್ನತರವಾದ ರೂಪಗಳಲ್ಲಿ ತನ್ನನ್ನು ತೆರೆದು ತೋರಿಸಬಹುದು. ಆ ಸಾಧ್ಯತೆಯನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅವನಿಗೆ ಕೊಡಲಾದ ಜೀವನದಿಂದ ತಪ್ಪಿಸಿಕೊಳ್ಳುವುದು ಎಂದೆಂದಿಗೂ ಅತ್ಯಗತ್ಯದ ಸ್ಥಿತಿಯಾಗಿರುವುದಿಲ್ಲ, ಅವನ ಪರಮೋಚ್ಚ ಪ್ರಯತ್ನಕ್ಕಾಗಿ ಇಡಿಯಾದ ಹಾಗೂ ಅಂತಿಮ ಉದ್ದೇಶವಾಗಿರುವುದಿಲ್ಲ ಇಲ್ಲವೆ ಅವನ ಅತ್ಯಂತ ಸಾಮರ್ಥ್ಯಪೂರ್ಣ ಸಾಧನವಾಗಿರುವುದಿಲ್ಲ. ಅದು ಕೆಲವೊಂದು ವಿಶಿಷ್ಟ ಪರಿಸ್ಥಿತಿಗಳಲ್ಲಿ ಕೇವಲ ತಾತ್ಕಾಲಿಕ ಆವಶ್ಯಕತೆಯಾಗಿರಬಹುದು ಇಲ್ಲವೆ ಶ್ರೇಷ್ಠತರ ಸರ್ವಸಾಧಾರಣ ಸಾಧ್ಯತೆಯನ್ನು ಮನುಕುಲಕ್ಕಾಗಿ ತಯಾರು ಮಾಡಲು ವ್ಯಕ್ತಿಯ ಮೇಲೆ ಹೇರಲಾದ ಪ್ರಯತ್ನವಾಗಿರಬಹುದು. ನಿಜವಾದ ಯೋಗದ ಪೂರ್ತಿ ಉದ್ದೇಶ ಹಾಗೂ ಉಪಯುಕ್ತತೆ ಇವುಗಳನ್ನು ಸಿದ್ಧಿಸಿಕೊಳ್ಳಬಹುದು, ಯಾವ ಸ್ಥಿತಿಯಲ್ಲಿ ಎಂದರೆ ಪ್ರಕೃತಿಯಲ್ಲಿರುವ ಅವಚೇತನದ ಯೋಗ ಬಾಹ್ಯದಲ್ಲಿ ಜೀವನದೊಂದಿಗೆ ಸ್ವತಃ ಸಮವ್ಯಾಪ್ತಿ ಹೊಂದಿರುವ ಹಾಗೆ ಮಾರ್ಗದತ್ತ ಹಾಗೂ ಸಿದ್ಧಿಯತ್ತ ಇವೆರಡನ್ನೂ ನೋಡುತ್ತ "ಎಲ್ಲ ಜೀವನ ಯೋಗವಾಗಿದೆ" ಎಂದು ಹೆಚ್ಚು ಪರಿಪೂರ್ಣ ಪ್ರಕಾಶಮಯ ಅರ್ಥದಲ್ಲಿ ಹೇಳಬಹುದು.

**(CWSA, 23/8)** – ಶ್ರೀ ಅರವಿಂದರು

*

ಆತ್ಮದ ಈ ಧ್ವನಿ ನಾವು ಆತ್ಮಸಾಕ್ಷಿ ಎಂದು ಕರೆಯುವುದಲ್ಲ, ಏಕೆಂದರೆ ಕೇವಲ ಮಾನಸಿಕ ಮತ್ತು ಬಹಳಷ್ಟುಸಲ ಸಾಂಪ್ರದಾಯಿಕ ದೋಷವನ್ನುಂಟು ಮಾಡುವ ದ್ರವ್ಯ. ಅದು ಆಳಾತಿಆಳದಿಂದ ಹಾಗೂ ಯಾವಾಗಾದರೊಮ್ಮೆ ಕೇಳಿಸಿಕೊಂಡ ಕರೆ; ಆದಾಗ್ಯೂ ಅದನ್ನು ಕೇಳಿಸಿಕೊಂಡಾಗ ಅದನ್ನು ಅನುಸರಿಸುವುದು ಹೆಚ್ಚು ವಿವೇಕಯುಕ್ತವಾದದ್ದು: ತೋರಿಕೆಗೆ ನೇರವಾಗಿ ತರ್ಕ ಹಾಗೂ ಬಾಹ್ಯದಲ್ಲಿರುವ ಆಪ್ತಸಲಹಾಕಾರ ಇವರೊಡನೆ ಸಾಗುವುದಕ್ಕಿಂತ ಆತ್ಮದ ಕರೆ ಬಂದಾಗ ಅಲೆದಾಡುವುದು ಹೆಚ್ಚು ಒಳ್ಳೆಯದು.

**(CWSA, 23/153–54)** **– ಶ್ರೀ ಅರವಿಂದರು**

*

**ಹಠಯೋಗ**

ಹಠಯೋಗದ ಪ್ರಮುಖ ವಿಧಾನಗಳೆಂದರೆ ಆಸನ ಮತ್ತು ಪ್ರಾಣಾಯಾಮ. ಅನೇಕ ಆಸನಗಳಿಂದ ಇಲ್ಲವೆ ಸ್ಥಿರವಾದ ನಿಲುವುಗಳಿಂದ ದೇಹವನ್ನು ಅದರ ತಳಮಳದಿಂದ ಚಿಕಿತ್ಸೆಗೆ ಒಳಪಡಿಸುತ್ತದೆ, ಆ ತಳಮಳ ಆಸನಗಳನ್ನು ಕ್ರಿಯೆಯಲ್ಲಿ, ಚಲನೆಯಲ್ಲಿ ತರದೆ ದೇಹದ ಮೇಲೆ ವಿಶ್ವಂಭರ ಜೀವನ ಸಮುದ್ರದಿಂದ ಧಾರೆಯಾಗಿ ಸುರಿಯಲಾದ ಪ್ರಾಣಿಕ ಶಕ್ತಿಗಳಿಂದಾಗಿರುತ್ತದೆ. ಆಸನಗಳು ದೇಹಕ್ಕೆ ಅಸಾಧಾರಣ ಆರೋಗ್ಯ, ಶಕ್ತಿ, ನಮ್ಯತೆ ಇವುಗಳನ್ನು ಕೊಡುತ್ತವೆ ಮತ್ತು ಅದನ್ನು ರೂಢಿಗಳಿಂದ ವಿಮೋಚನೆಗೊಳಪಡಿಸಲು ಅರಸುತ್ತವೆ, ಆ ರೂಢಿಗಳಿಂದಾಗಿ ದೇಹ ಸಾಧಾರಣ ಭೌತಿಕ ಪ್ರಕೃತಿಗೆ ಅಧೀನವಾಗಿರುತ್ತದೆ ಮತ್ತು ಪ್ರಕೃತಿಯ ಸಾಮಾನ್ಯ ಕಾರ್ಯಾಚರಣೆಗಳ ಮಿತಿಗಳ ಬಂಧನಕ್ಕೊಳಗಾಗಿರುತ್ತದೆ. ಪ್ರಾಚೀನ ಕಾಲದ ಹಠಯೋಗದ ಸಂಪ್ರದಾಯದಲ್ಲಿ ಈ ಜಯ ಗುರುತ್ವಾಕರ್ಷಣದ ಶಕ್ತಿಯ ಮೇಲೆ ಬಹಳಷ್ಟು ಮಟ್ಟಿಗೆ ಜಯ ಸಾಧಿಸುತ್ತಿದ್ದೆಂದು ತಿಳಿಯಲಾಗಿದೆ. ಹಲವಾರು ಪೂರಕವಾದ ಆದರೆ ವಿವರವಿರುವ ವಿಧಾನಗಳಿಂದ, ಹಠಯೋಗಿ ಅದರ ನಂತರ ದೇಹವನ್ನು ಎಲ್ಲ ಅಶುದ್ಧತೆಗಳಿಂದ ಮತ್ತು ನರವ್ಯೂಹದ ತಡೆಯಿಂದ ದೂರಮಾಡಿ ಕೌಶಲದಿಂದ ರೂಪಿಸುತ್ತಾನೆ. ಉಸಿರಾಟದ ಇಲ್ಲವೆ ಪ್ರಾಣಿಕ ಸಾಮರ್ಥ್ಯವನ್ನು ಪ್ರಾಣಾಯಾಮ ಎಂದು ಕರೆಯುತ್ತಾರೆ, ಏಕೆಂದರೆ ಉಸಿರಾಟ ಪ್ರಾಣಿಕ ಶಕ್ತಿಗಳ ಮುಖ್ಯ ಕಾರ್ಯವಿಧಾನವಾಗಿರುತ್ತದೆ. ಹಠಯೋಗಿಗೆ ಪ್ರಾಣಾಯಾಮ ಎರಡು

ಉದ್ದೇಶಗಳನ್ನು ಕುರಿತು ಸೇವೆ ಸಲ್ಲಿಸುತ್ತದೆ. ಮೊದಲನೆಯದಾಗಿ ಅದು ದೇಹದ ಪರಿಪೂರ್ಣತೆಯನ್ನು ಪೂರ್ಣಗೊಳಿಸುತ್ತದೆ. ಜೀವಶಕ್ತಿ ಭೌತಿಕ ಪ್ರಕೃತಿಯ ಹಲವಾರು ಸಾಧಾರಣ ಆವಶ್ಯಕತೆಗಳಿಂದ ವಿಮೋಚನೆ ಪಡೆಯುತ್ತದೆ, ದಷ್ಟಪುಷ್ಟ ಆರೋಗ್ಯ, ಮುಂದುವರಿಸಿಕೊಂಡು ಹೋಗಲಾಗುವ ತಾರುಣ್ಯ, ಬಹಳಷ್ಟು ಸಲ ಅಸಾಧಾರಣ ದೀರ್ಘಾಯುಷ್ಯ ಇವುಗಳನ್ನು ಸಿದ್ಧಿಸಿಕೊಳ್ಳಲಾಗುತ್ತದೆ. ಇನ್ನೊಂದೆಡೆಗೆ ಪ್ರಾಣಿಕಕೋಶದಲ್ಲಿರುವ ಪ್ರಾಣಿಕ ಕ್ರಿಯಾಶೀಲತೆಯ ಸುರುಳಿಯ ಸುತ್ತಿಹಾಕಿಕೊಂಡ ಸರ್ಪವನ್ನು ಎಚ್ಚರಿಸಲಾಗುತ್ತದೆ, ಮತ್ತು ಯೋಗಿಗೆ, ಸಾಮಾನ್ಯ ಮನುಷ್ಯನಿಗೆ ನಿರಾಕರಿಸಲಾದ ಪ್ರಜ್ಞೆಯ ಕ್ಷೇತ್ರಗಳನ್ನು, ಅನುಭವದ ವ್ಯಾಪ್ತಿಗಳನ್ನು, ಅಸಾಮಾನ್ಯ ಕಾರ್ಯವಿಧಾನಗಳನ್ನು ತೆರೆದಿರಿಸಲಾಗುತ್ತದೆ, ಅದು ಹಾಗಿರುವಾಗ ಅವನು ಮೊದಲೇ ವಶಪಡಿಸಿಕೊಂಡ ಅಂತಹ ಸಾಮಾನ್ಯ ಸಾಮರ್ಥ್ಯಗಳನ್ನು, ಕಾರ್ಯ ವಿಧಾನಗಳನ್ನು ಅದು ಅಧಿಕಬಲದಿಂದ ಗಾಢವಾಗಿಸುತ್ತದೆ.

**(CWSA, 23/34)** **– ಶ್ರೀ ಅರವಿಂದರು**

*

**ರಾಜಯೋಗ**

ರಾಜಯೋಗದ ಪ್ರಾಥಮಿಕ ಚಲನೆ ಕಾಳಜಿಪೂರ್ವಕ ಸ್ವ–ಶಿಸ್ತುಪಾಲನೆಯನ್ನು ಇರಿಸಿಕೊಳ್ಳುವುದಾಗಿದೆ, ಅದರ ಮೂಲಕ ನಿಮ್ನತರ ನರವ್ಯೂಹದ ಸತ್ತೆಯ ನಿಯಮರಹಿತ ಚಲನೆಗಳ ಸ್ಥಾನದಲ್ಲಿ ಮನಸ್ಸಿನ ಒಳ್ಳೆಯ ರೂಢಿಗಳನ್ನು ಇರಿಸಬಹುದಾಗಿದೆ. ಸತ್ಯ ಹೇಳುವುದನ್ನು ಆಚರಣೆಯಲ್ಲಿ ತರುವುದರ ಮೂಲಕ, ಅಹಂಭಾವದ ಎಲ್ಲ ರೂಪಗಳನ್ನು ಅರಸುವುದನ್ನು ನಿರಾಕರಿಸುವುದರ ಮೂಲಕ, ಇತರರಿಗೆ ಗಾಯವನ್ನುಂಟು ಮಾಡದೆ ಇರುವುದರ ಮೂಲಕ ಪರಿಶುದ್ಧತೆ, ಸತತ ಧ್ಯಾನ ಮಾಡುವಿಕೆ, ಮನಸ್ಸಿನ ರಾಜ್ಯದ ನಿಜವಾದ ಪ್ರಭು ಒಲವು ಹೊಂದುವ ಮೂಲಕ, ಒಂದು ಪರಿಶುದ್ಧ, ಸಂತೋಷಕರ ಸ್ಪಷ್ಟ ಇವೆಲ್ಲವುಗಳಿಂದ ಕೂಡಿದ ಮನಸ್ಸಿನ ಹಾಗೂ ಹೃದಯದ ಸ್ಪಷ್ಟ ಸ್ಥಿತಿ ಸ್ಥಾಪಿತಗೊಳ್ಳುವುದು.

ಇದು ಕೇವಲ ಮೊದಲ ಹೆಜ್ಜೆ. ನಂತರ ಮನಸ್ಸಿನ ಹಾಗೂ ಇಂದ್ರಿಯದ ಸಾಧಾರಣ ಚಟುವಟಿಕೆಗಳನ್ನು ಅಚಂಚಲವಾಗಿರಿಸಬೇಕು, ಅದರಿಂದಾಗಿ ಆತ್ಮ ಪ್ರಜ್ಞೆಯ ಉಚ್ಚತರ ಸ್ಥಿತಿಗಳತ್ತ ಆರೋಹಣ ಮಾಡಲು ಮತ್ತು ಪರಿಪೂರ್ಣ ಸ್ವಾತಂತ್ರ್ಯ ಹಾಗೂ ಸ್ವ–ಪ್ರಭುತ್ವ ದೊರಕಿಸಲು ಮುಕ್ತವಾಗಿರುತ್ತದೆ. ಆದರೆ

ಮನಸ್ಸಿನ ಅಶಕ್ತತೆಗಳು ಬಹಳ ಹೆಚ್ಚಿನ ರೀತಿಯಲ್ಲಿ ನರವ್ಯೂಹದ ಹಾಗೂ ದೇಹದ ಪ್ರತಿಕ್ರಿಯೆಗಳಿಗೆ ಅಧೀನವಾಗಿರುವುದರಿಂದ ಮುಂದುವರಿಯುತ್ತವೆ ಎಂಬುದನ್ನು ರಾಜಯೋಗ ಮರೆತಿರುವುದಿಲ್ಲ. ಹಾಗಾಗಿ ಅದು ಹಠಯೋಗದ ಪದ್ಧತಿಯಿಂದ ಅದರ ಉಪಾಯಗಳಾದ ಆಸನ ಹಾಗೂ ಪ್ರಾಣಾಯಾಮ ಇವುಗಳನ್ನು ಆಯ್ದುಕೊಳ್ಳುತ್ತದೆ, ಆದರೆ ಅವುಗಳ ಅನೇಕ ಹಾಗೂ ವಿವರವಾದ ರೂಪಗಳನ್ನು ಪ್ರತಿಯೊಂದು ಸಂದರ್ಭದಲ್ಲಿ ಅತ್ಯಂತ ಸರಳವಾದ ಹಾಗೂ ಅತ್ಯಂತ ನೇರವಾದ ವಿಧಾನಗಳಾಗುವಂತೆ ಕುಗ್ಗಿಸುತ್ತದೆ. ಅದು ಕೂಡಲೆ ಅವಶ್ಯವಾಗಿರುವ ಅದರದೇ ಉದ್ದೇಶಕ್ಕೆ ಸಾಕಷ್ಟಾಗುವಂತಿರುತ್ತದೆ, ಅದು ಹೀಗೆ ಹಠಯೋಗದ ಸಂಕೀರ್ಣತೆಯನ್ನು ಮತ್ತು ಹೊರೆಯನ್ನು ತೊಡೆದು ಹಾಕುತ್ತದೆ. ಹಾಗಿರುವಾಗ ಅದು ಅದರ ವಿಧಾನಗಳ ತೀವ್ರಗತಿಯ ಹಾಗೂ ಸಾಮರ್ಥ್ಯಪೂರ್ಣ ಪರಿಣಾಮಕಾರಿತ್ವವನ್ನು ದೇಹದ ಮತ್ತು ಪ್ರಾಣಿಕ ಕಾರ್ಯವಿಧಾನಗಳ ನಿಯಂತ್ರಣಕ್ಕಾಗಿ ಮತ್ತು ಆಂತರಿಕ ಕ್ರಿಯಾಶೀಲತೆಯನ್ನು ಎಚ್ಚರಿಸುವುದಕ್ಕಾಗಿ ಉಪಯೋಗಿಸುತ್ತದೆ, ಆ ಕ್ರಿಯಾಶೀಲತೆ ಸುಪ್ತ ಅಸಾಮಾನ್ಯ ಕಾರ್ಯವಿಧಾನದಿಂದ ತುಂಬಿಕೊಂಡಿರುತ್ತದೆ, ಯೌಗಿಕ ಮಾದರಿ ರೂಪದ ಶಬ್ದಗಳಲ್ಲಿ ಅದನ್ನು ಕುಂಡಲಿನಿ ಎಂದು ಹೇಳಲಾಗಿದೆ, ಅದು ನಿದ್ರಾವಸ್ಥೆಯಲ್ಲಿರುವ ಅಂತರಂಗದಲ್ಲಿಯ ಸರ್ಪದ ಚೈತನ್ಯ. ಇದನ್ನು ಕೈಕೊಂಡ ನಂತರ ಆ ಪದ್ಧತಿ ತಳಮಳದಲ್ಲಿರುವ ಮನಸ್ಸನ್ನು ಪರಿಪೂರ್ಣವಾಗಿ ಅಚಂಚಲವಾಗಿರಿಸುವುದಕ್ಕೆ ಮತ್ತು ಮಾನಸಿಕ ಶಕ್ತಿಯ ಏಕಾಗ್ರತೆಯ ಮೂಲಕ ಉಚ್ಚಸ್ತರಕ್ಕೆ ಮೇಲ್ಗಡೆ ಕಳಿಸುವುದಕ್ಕೆ ಮುಂದುವರಿಯುತ್ತದೆ, ಒಂದರ ನಂತರ ಒಂದರಂತೆ ಇರುವ ಹಂತಗಳಲ್ಲಿ ಮಾನಸಿಕ ಏಕಾಗ್ರತೆ ಅಂತಿಮ ಆಂತರಿಕ ಏಕಾಗ್ರತೆಯತ್ತ ಇಲ್ಲವೆ ಪ್ರಜ್ಞೆಯ ಆಂತರಿಕವಾದ ಒಟ್ಟುಗೂಡಿದ ಸ್ಥಿತಿಯತ್ತ ಕರೆದೊಯ್ಯುತ್ತದೆ, ಅದನ್ನು ಸಮಾಧಿ ಎಂದು ಕರೆಯಲಾಗಿದೆ.

**(CWSA, 23/36)** **– ಶ್ರೀ ಅರವಿಂದರು**

*

**ಜ್ಞಾನಯೋಗ**

ಜ್ಞಾನದ ಮಾರ್ಗ ಅನನ್ಯವಾದ ಹಾಗೂ ಪರಮೋಚ್ಚನಾದ ದಿವ್ಯಾತ್ಮನನ್ನು ಸಿದ್ಧಿಸಿಕೊಳ್ಳುವ ಗುರಿ ಹೊಂದಿದೆ. ಅದರ ವಿಧಾನ ಬೌದ್ಧಿಕ ಚಿಂತನ ಎಂದರೆ

ವಿಚಾರದಿಂದ ಸರಿಯಾದ ವಿವೇಕದತ್ತ ಮುಂದುವರಿಯುತ್ತದೆ. ನಮ್ಮ ತೋರಿಕೆಯ ಹಾಗೂ ಗೋಚರಿಸುವ ಸತ್ತೆಯ ಭಿನ್ನ ಅಂಶಗಳನ್ನು ಅದು ಅವಲೋಕನ ಮಾಡುತ್ತದೆ ಮತ್ತು ಅವುಗಳಲ್ಲಿರುವ ಭೇದವನ್ನು ಗುರುತಿಸುತ್ತದೆ ಮತ್ತು ಪ್ರತಿಯೊಂದರೊಡನೆ ಗುರುತಿಸಿಕೊಳ್ಳುವುದನ್ನು ತಿರಸ್ಕರಿಸುತ್ತ ಅವುಗಳ ಬಹಿಷ್ಕರಣ ಹಾಗೂ ಪ್ರತ್ಯೇಕಗೊಳಿಸುವಿಕೆಯತ್ತ ತಲುಪುತ್ತದೆ. ಅವುಗಳನ್ನು ಒಂದು ಸಾಮಾನ್ಯ ಶಬ್ದದಲ್ಲಿ ಇರಿಸುವುದಾದರೆ ಅವು ಪ್ರಕೃತಿ ರಚನೆ ಮಾಡುವುದಕ್ಕೆ ಬೇಕಾದವುಗಳು, ಗೋಚರಿಸುವ ಪ್ರಕೃತಿ ಮಾಯೆಯ ಸೃಷ್ಟಿಗಳು, ಗೋಚರಿಸುವ ಪ್ರಜ್ಞೆ, ಹಾಗಾಗಿ ಅದು ಪರಿಶುದ್ಧ ಮತ್ತು ಅನನ್ಯವಾದ ದಿವ್ಯಾತ್ಮದೊಡನೆ ಸರಿಯಾದ ಗುರುತಿಸಿಕೊಳ್ಳುವುದರತ್ತ ತಲುಪಲು ಶಕ್ತವಾಗುತ್ತದೆ. ಆ ದಿವ್ಯಾತ್ಮನನ್ನು ಮಾರ್ಪಡಿಸಲಾಗುವುದಿಲ್ಲ, ನಾಶಮಾಡಲಾಗುವುದಿಲ್ಲ. ಯಾವುದೇ ಗೋಚರ ಸಂಗತಿಯಿಂದ ಇಲ್ಲವೆ ಗೋಚರ ಸಂಗತಿಗಳ ಸಂಯೋಜನೆಯಿಂದ ನಿರ್ಧರಿಸಲಾಗುವುದಿಲ್ಲ. ಈ ದೃಷ್ಟಿಕೋನದಿಂದ ಸಾಧಾರಣವಾಗಿ ಅನುಸರಿಸಲಾದ ಮಾರ್ಗ ಪ್ರಜ್ಞೆಯಿಂದ ಗೋಚರವಾಗುವ ಜಗತ್ತುಗಳನ್ನು ಒಂದು ಭ್ರಮೆಯೆಂದು ತಿರಸ್ಕರಿಸುತ್ತ ಮತ್ತು ಮರಳಿ ಬಾರದ ಹಾಗೆ ಆತ್ಮ ಕೊನೆಗೆ ಪರಮೋಚ್ಚನಲ್ಲಿ ಮುಳುಗು ಹಾಕುವುದರತ್ತ ಕರೆದೊಯ್ಯುತ್ತದೆ.

**(CWSA, 23/38)** **– ಶ್ರೀ ಅರವಿಂದರು**

*

**ಭಕ್ತಿಯೋಗ**

ಭಕ್ತಿಯ ಮಾರ್ಗ ಪರಮೋಚ್ಚ ದೈವೀ ಪ್ರೇಮ ಹಾಗೂ ದಿವ್ಯಾನಂದ ಇವುಗಳನ್ನು ಗುರಿಯಾಗಿರಿಸಿಕೊಂಡಿದೆ ಮತ್ತು ಪರಮೋಚ್ಚ ದೈವೀ ಪ್ರಭುವನ್ನು ಕುರಿತು ಅವನ ವ್ಯಕ್ತಿತ್ವ ದೈವೀ ಪ್ರೇಮಿಯದು ಹಾಗೂ ವಿಶ್ವದ ಸಂತೋಷ ಪಡೆಯುವವನದು ಎಂಬ ಕಲ್ಪನೆಯನ್ನು ಸಾಮಾನ್ಯವಾಗಿ ಉಪಯೋಗಿಸುತ್ತದೆ. ಜಗತ್ತನ್ನು ಆಗ ನಮ್ಮ ಮಾನವ ಜೀವನದೊಡನೆ ಅದು ಕೊನೆಯ ಹಂತವೆಂದು ದೈವೀ ಪ್ರಭುವಿನ ಲೀಲೆ ಎಂಬ ಅರಿವನ್ನು ಪಡೆಯಲಾಗುತ್ತದೆ, ಇದನ್ನು ಸ್ವ–ಮರೆಯಲ್ಲಿರಿಸಿಕೊಳ್ಳುವುದು ಹಾಗೂ ಸ್ವ–ಜ್ಞಾನೋದಯ ಪಡೆಯುವುದು ಇವುಗಳನ್ನು ಬೆಂಬತ್ತುವುದರ ಮೂಲಕ ಭಿನ್ನ ಭಾವೋದ್ರೇಕದಲ್ಲಿ ಪ್ರವೇಶ ಪಡೆಯುವ ಮಾನವ ಜೀವನದ ಎಲ್ಲ ಸಾಮಾನ್ಯ ಸಂಬಂಧಗಳನ್ನು

ಉಪಯೋಗಿಸುವುದಾಗಿದೆ, ಅವುಗಳನ್ನು ಇನ್ನು ಮುಂದೆ ಅಶಾಶ್ವತ ಜಗತ್ತಿನ ಸಂಬಂಧಗಳಿಗೆ ಅನ್ವಯಿಸುವುದಿರುವುದಿಲ್ಲ, ಆದರೆ ಎಲ್ಲವನ್ನೂ ಪ್ರೀತಿಸುವ, ಎಲ್ಲ ರೀತಿಯಲ್ಲಿ ಸುಂದರನಾದವನ ಹಾಗೂ ಎಲ್ಲ ರೀತಿಯಲ್ಲಿ ದಿವ್ಯಾನಂದವಾಗಿರುವವನ ಸಂತೋಷಕ್ಕೆ ಅನ್ವಯಿಸುವುದಿರುತ್ತದೆ. ಪೂಜೆ ಹಾಗೂ ಧ್ಯಾನ ಇವುಗಳನ್ನು ದೈವೀ ಸಂಬಂಧದ ತಯಾರಿಗಾಗಿ ಗಾಢತೆಯನ್ನು ಹೆಚ್ಚಿಸುವುದಕ್ಕಾಗಿ ಮಾತ್ರ ಉಪಯೋಗಿಸಲಾಗುತ್ತದೆ. ಈ ಯೋಗ ಅದರ ಭಾವೋನ್ಮಾದದ ಸಂಬಂಧಗಳಲ್ಲಿ ವಿಶ್ವವ್ಯಾಪಿಯಾಗಿದೆ, ಹಾಗಾಗಿ ಹಗೆತನ, ದೇವನಿಗೆ ವಿರುದ್ಧವಾಗಿರುವುದು ಇವುಗಳನ್ನು ಗಾಢ, ತಾಳ್ಮೆಯಿಲ್ಲದ, ಹಾಗೂ ವಿರೂಪಗೊಂಡ ದೈವೀ ಪ್ರೇಮದ ರೀತಿ ಎಂದು, ಸಿದ್ಧಿಗಾಗಿ ಹಾಗೂ ಮುಕ್ತಿಗಾಗಿ ಅದನ್ನು ಒಂದು ಸಾಧ್ಯತೆ ಎಂದು ಪರಿಗಣಿಸಲಾಗುತ್ತದೆ. ಈ ಮಾರ್ಗ ಕೂಡ ಸಾಧಾರಣವಾಗಿ ಆಚರಿಸುವ ರೀತಿಯಲ್ಲಿ ಜಗತ್ತಿನ ಅಸ್ತಿತ್ವದಿಂದ ದೂರ ಕರೆದೊಯ್ದು ಹೀರಿಕೊಳ್ಳುತ್ತದೆ. ಅದು ಅದ್ವೈತಿಯ ವಿಶ್ವಾತೀತ, ಪರಮೋಚ್ಚ ವಿಶ್ವವ್ಯಾಪಕತ್ವದತ್ತ ಸಾಗುವುದಕ್ಕಿಂತ ಭಿನ್ನ ರೀತಿಯದಾಗಿರುತ್ತದೆ.

**(CWSA, 23/39)** **– ಶ್ರೀ ಅರವಿಂದರು**

*

**ಕರ್ಮಯೋಗ**

ಕರ್ಮಗಳ ಮಾರ್ಗ ಪ್ರತಿಯೊಂದು ಮಾನವ ಚಟುವಟಿಕೆಯನ್ನು ಪರಮೋಚ್ಚ ದೈವೀ ಸಂಕಲ್ಪಕ್ಕೆ ಅರ್ಪಿಸುವುದನ್ನು ಗುರಿಯಾಗಿರಿಸಿಕೊಂಡಿರುತ್ತದೆ, ಅದು ನಮ್ಮ ಕರ್ಮಗಳ ಎಲ್ಲ ಅಹಂಭಾವದ ಗುರಿಯನ್ನು, ಅಭಿರುಚಿ ಹೊಂದಿದ ಗುರಿಗಾಗಿ ಕ್ರಿಯೆಯ ಎಲ್ಲ ಬೆಂಬತ್ತುವಿಕೆಯನ್ನು ಇಲ್ಲವೆ ಜಗತ್ತಿನಲ್ಲಿ ದೊರಕಿಸ–ಬಹುದಾದ ಪರಿಣಾಮವನ್ನು ತ್ಯಾಗ ಮಾಡುವುದರಿಂದ, ಪ್ರಾರಂಭಿಸುತ್ತದೆ. ಈ ತ್ಯಾಗ ಮನಸ್ಸನ್ನು ಹಾಗೂ ಸಂಕಲ್ಪವನ್ನು ಎಷ್ಟೊಂದು ಪರಿಶುದ್ಧಗೊಳಿ–ಸುತ್ತದೆಯೆಂದರೆ ನಾವು ಸುಲಭವಾಗಿ ಆ ಶ್ರೇಷ್ಠ ವಿಶ್ವಂಭರ ಚೈತನ್ಯದ ಬಗ್ಗೆ ಪ್ರಜ್ಞೆಯುಳ್ಳವರಾಗಬಹುದು, ಅದು ನಿಜವಾಗಿ ನಮ್ಮೆಲ್ಲ ಕಾರ್ಯಗಳನ್ನು ಕೈಕೊಳ್ಳುವವನು ಹಾಗೂ ಆ ದೈವೀ ಚೈತನ್ಯದ ಪ್ರಭು, ಅವುಗಳ ಮೇಲೆ ಆಳಿಕೆ ನಡೆಸುವವನು ಹಾಗೂ ನಿರ್ದೇಶಕ, ವ್ಯಕ್ತಿ ಕೇವಲ ಒಂದು ಮುಸುಕಿನಲ್ಲಿದ್ದ ಹಾಗೆ ಇರುತ್ತಾನೆ; ಒಂದು ನಿಮಿತ್ತ, ಒಂದು ಉಪಕರಣ ಇಲ್ಲವೆ ಹೆಚ್ಚು ಧನಾತ್ಮಕವಾಗಿ

ಹೇಳುವುದಾದರೆ ಕ್ರಿಯೆಯ ಗೋಚರ ಸಂಗತಿಯ ಸಂಬಂಧದ ಪ್ರಜ್ಞಾಪೂರ್ಣ ಕೇಂದ್ರವಾಗಿರುತ್ತಾನೆ. ಕ್ರಿಯೆಯ ಆಯ್ಕೆ ಹಾಗೂ ದಿಶೆ ಇವುಗಳನ್ನು ಹೆಚ್ಚು ಹೆಚ್ಚಾಗಿ ಕೊನೆಗೆ ಈ ಪರಮೋಚ್ಚ ದೈವೀ ಸಂಕಲ್ಪಕ್ಕೆ ಮತ್ತು ಈ ವಿಶ್ವಂಭರ ಚೈತನ್ಯಕ್ಕೆ ಬಿಟ್ಟುಕೊಡಲಾಗಿರುತ್ತದೆ.

ಆ 'ತತ್'ಗೆ ನಮ್ಮೆಲ್ಲ ಕರ್ಮಗಳನ್ನು ಹಾಗೂ ಆ ಕರ್ಮಗಳ ಪರಿಣಾಮಗಳನ್ನು ಕೊನೆಗೆ ಬಿಟ್ಟುಕೊಡಲಾಗುತ್ತದೆ. ಉದ್ದೇಶ ತೋರಿಕೆಗಳಿಗೆ ಮತ್ತು ಗೋಚರ ಸಂಗತಿಗಳ ಕಾರ್ಯಗಳಿಂದಾಗುವ ಪ್ರತಿಕ್ರಿಯೆಗಳಿಗೆ ಬಂಧನದಲ್ಲಿರುವ ಆತ್ಮವನ್ನು ಬಿಡುಗಡೆ ಮಾಡುವುದಾಗಿರುತ್ತದೆ.

ಇತರ ಮಾರ್ಗಗಳ ಹಾಗೆ ಕರ್ಮಯೋಗದ ಮಾರ್ಗವನ್ನೂ ಕೂಡ ಗೋಚರ ಸಂಗತಿಗಳಿರುವ ಅಸ್ತಿತ್ವದಿಂದ ಮುಕ್ತಿಯತ್ತ ಕರೆದೊಯ್ಯುವುದಾಗಿದೆ ಮತ್ತು ಪರಮೋಚ್ಚನಲ್ಲಿ ಹೊರಟು ಹೋಗುವುದಾಗಿದೆ.

**(CWSA, 23/40)** **– ಶ್ರೀ ಅರವಿಂದರು**

*

**ತಂತ್ರ**

ನಮ್ಮ ಅವಲೋಕನಕ್ಕೆ ಬರುವುದೇನೆಂದರೆ ಭಾರತದಲ್ಲಿ ಒಂದು ಗಮನಾರ್ಹ ಯೌಗಿಕ ಪದ್ಧತಿ ಇನ್ನೂ ಅಸ್ತಿತ್ವದಲ್ಲಿದೆ, ಅದರ ಸ್ವಭಾವದಲ್ಲಿ ಅದು ಸಮನ್ವಯ ರೂಪದ್ದು ಮತ್ತು ಪ್ರಕೃತಿಯ ಶ್ರೇಷ್ಠ ಕೇಂದ್ರ ತತ್ವದಿಂದ ಹಾಗೂ ಪ್ರಕೃತಿಯ ಶ್ರೇಷ್ಠ ಕ್ರಿಯಾಶೀಲ ಶಕ್ತಿಯಿಂದ ಸುರುವಾಗುತ್ತದೆ. ಅದು ಬೇರೆಯದಾದ ಒಂದು ಯೋಗ, ಇತರ ಶಾಖೆಗಳ ಸಮನ್ವಯ ರೂಪದ್ದಲ್ಲ. ಈ ಪದ್ಧತಿ ತಂತ್ರದ ಮಾರ್ಗವಾಗಿದೆ. ತಂತ್ರದ ಕೆಲವೊಂದು ಅವ್ಯಕ್ತ ಲಕ್ಷಣಗಳು ತಾಂತ್ರಿಕರಲ್ಲದವರೊಂದಿಗೆ ವ್ಯಕ್ತವಾದಾಗ ತಂತ್ರ ಅಪಖ್ಯಾತಿಯಲ್ಲಿ ಬಿದ್ದುಬಿಟ್ಟಿತು. ವಿಶೇಷವಾಗಿ ವಾಮಮಾರ್ಗ ಅಭಿವೃದ್ಧಿ ಹೊಂದುತ್ತ ಹೋದಂತೆ ಅದು ಪಾಪ ಹಾಗೂ ಸದ್ಗುಣ ಇವೆರಡರಿಂದ ತೃಪ್ತಿಗೊಳಗಾಗದೆ, ಅವುಗಳ ಸ್ಥಾನದಲ್ಲಿ ಸ್ವಯಂಪ್ರೇರಿತ ಕ್ರಿಯೆಯ ಸರಿಯಾಗಿರುವಿಕೆಯನ್ನು ಇರಿಸದೆ, ಆ ಮಾರ್ಗ ಸ್ವ–ಲೋಲುಪತೆ, ಹತೋಟಿಯಲ್ಲಿ ಇಟ್ಟುಕೊಳ್ಳಲಾಗದ ಒಂದು ಸಾಮಾಜಿಕ ಅನೈತಿಕತೆಯ ವಿಧಾನ ಎಂದು ತೋರಿಬಂದಿತು. ಹಾಗಿದ್ದಾಗ್ಯೂ ಮೂಲದಲ್ಲಿ

ತಂತ್ರ ಒಂದು ಶ್ರೇಷ್ಠ, ಅಪಾರ ಬಲವುಳ್ಳ ಪದ್ಧತಿಯಾಗಿತ್ತು, ಅದನ್ನು ಕನಿಷ್ಠಪಕ್ಷ ಭಾಗಶಃ ಸತ್ಯವಾದ ವಿಚಾರಗಳ ಆಧಾರದ ಮೇಲೆ ಸ್ಥಾಪಿಸಲಾಗಿತ್ತು. ಅದರ ದಕ್ಷಿಣ ಮಾರ್ಗ ಹಾಗೂ ವಾಮ ಮಾರ್ಗ ಎಂಬ ಎರಡು ಬಗೆಯ ವಿಭಜನೆ ಒಂದು ಬಗೆಯ ಗಾಢ ಗ್ರಹಿಕೆಯಿಂದ ಸುರುವಾಗಿತ್ತು, ವಾಮ ಮಾರ್ಗ ಆನಂದದ ಮಾರ್ಗವಾಗಿತ್ತು, ಹೀಗೆ ಅವುಗಳ ನಡುವೆ ಭೇದವಿತ್ತು.– ತನ್ನದೇ ಚೈತನ್ಯಗಳ ಅಂಶಗಳು ಹಾಗೂ ಸಾಧ್ಯಗೊಳಿಸುವ ಶಕ್ತಿಗಳು ಇವುಗಳ ಸಾಮರ್ಥ್ಯ ಹಾಗೂ ಆಚರಣೆ ಇವುಗಳಲ್ಲಿ ಸರಿಯಾದ ಭೇದ ಮಾಡುವುದರಿಂದ ಮನುಷ್ಯನಲ್ಲಿರುವ ಪ್ರಕೃತಿ ತನ್ನನ್ನು ಮುಕ್ತಗೊಳಿಸುತ್ತಿತ್ತು, ತನ್ನದೇ ಚೈತನ್ಯಗಳ ಅಂಶಗಳು ಹಾಗೂ ಸಾಧ್ಯಗೊಳಿಸುವ ಶಕ್ತಿಗಳು ಇವುಗಳ ಸಾಮರ್ಥ್ಯ ಹಾಗೂ ಆಚರಣೆಗಳನ್ನು ಸಂತೋಷಕರವಾಗಿ ಒಪ್ಪಿಕೊಳ್ಳುವುದರಿಂದ ಮನುಷ್ಯನಲ್ಲಿರುವ ಪ್ರಕೃತಿ ತನ್ನನ್ನು ಮುಕ್ತಗೊಳಿಸಿಕೊಳ್ಳುತ್ತಿತ್ತು. ಆದರೆ ಅವೆರಡೂ ಮಾರ್ಗಗಳಲ್ಲಿ ಕೊನೆಗೆ ತತ್ವಗಳ ಒಂದು ಅಡೆತಡೆ ಉಂಟಾಯಿತು, ಸಂಕೇತಗಳು ವಿರೂಪಗೊಂಡವು, ಹೀಗೆ ಅದು ಪತನಗೊಂಡಿತು.

**(CWSA, 23/42–43)** **– ಶ್ರೀ ಅರವಿಂದರು**

*

ದೃಷ್ಟಿಕೋನದಲ್ಲಿರುವ ತತ್ವ ಸ್ವ–ಶರಣಾಗತಿ, ಮನುಷ್ಯ ತನ್ನ ಸತ್ತೆಯನ್ನು ದಿವ್ಯಾನಂದ ದೈವೀ ಸಾಮರ್ಥ್ಯ ಪ್ರಜ್ಞೆ ಇವುಗಳಿರುವ ದೈವೀ ಸತ್ತೆಗೆ ಅರ್ಪಣ ಮಾಡಿಕೊಳ್ಳುವುದಾಗಿದೆ; ಮನುಷ್ಯನ ಆತ್ಮ ಭೇಟಿ ಮಾಡುವ ಏಕತೆಯ ಇಲ್ಲವೆ ಆಧ್ಯಾತ್ಮಿಕ ಸಂಸರ್ಗದ ಎಲ್ಲ ಬಿಂದುಗಳಲ್ಲಿ, ಮಾನಸಿಕ ಸತ್ತೆಯಲ್ಲಿ ಮಾಡಿಕೊಳ್ಳುವುದಾಗಿದೆ, ಅದರ ಮೂಲಕ ಭಗವಂತನೇ ಸ್ವತಃ ಮತ್ತು ನೇರವಾಗಿ, ಪರದೆಯ ಹಿಂದಿರದೆ ಉಪಕರಣದ ಪ್ರಭುವಾಗುವನು ಹಾಗೂ ವಶದಲ್ಲಿಟ್ಟುಕೊಳ್ಳುವನು ತನ್ನ ಸಾನ್ನಿಧ್ಯದ ಪ್ರಕಾಶದಿಂದ ಹಾಗೂ ಮಾರ್ಗದರ್ಶನದಿಂದ ಮಾನವ ಸತ್ತೆಯನ್ನು ಪ್ರಕೃತಿಯ ಎಲ್ಲ ಶಕ್ತಿಗಳಲ್ಲಿ ದೈವೀ ಜೀವನಕ್ಕಾಗಿ ಪರಿಪೂರ್ಣಗೊಳಿಸುವನು.

**(CWSA, 24/613)** **– ಶ್ರೀ ಅರವಿಂದರು**

*

# ಸಮಗ್ರ ಯೋಗದ ತತ್ವ

## ನಾವು ಬೆಂಬತ್ತಬೇಕಾದ ವಿಧಾನಗಳು

ಮನೋವೈಜ್ಞಾನಿಕ ವಾಸ್ತವತೆಯಲ್ಲಿ ಈ ವಿಧಾನ ಅಹಂಕಾರದ ಪ್ರಗತಿಪರ ಶರಣಾಗತಿ ಎಂಬ ಅರ್ಥ ಪಡೆಯುತ್ತದೆ, ಆ ಶರಣಾಗತಿ ಅದರ ಎಲ್ಲ ಕ್ಷೇತ್ರದೊಂದಿಗೆ, ಅಹಂಕಾರದ ಆಚೆಗಿರುವ ಅದರ ಎಲ್ಲ ಅಂಗಸಮೂಹ–ದೊಂದಿಗೆ, ಅದರ ವಿಶಾಲವಾದ ಎಲ್ಲ ಲೆಕ್ಕಾಚಾರ ಮಾಡಲಾಗದ ಆದರೆ ಅನಿವಾರ್ಯವಾದ ಕಾರ್ಯಗತಿಗಳೊಂದಿಗಿರುತ್ತದೆ. ನಿಶ್ಚಿತವಾಗಿ ಇದು ಸಾಧನೆಗೆ ಒಳದಾರಿಯಲ್ಲ, ಸುಲಭ ಸಾಧನೆಯಲ್ಲ. ಅದಕ್ಕೆ ಬೃಹತ್ ಪ್ರಮಾಣದ ನಂಬಿಕೆ, ಪರಿಪೂರ್ಣ ಧೈರ್ಯ ಹಾಗೂ ಎಲ್ಲದಕ್ಕಿಂತಲೂ ಹೆಚ್ಚಾಗಿ ಹಿಂದೆಗೆಯದ ತಾಳ್ಮೆ ಬೇಕಾಗುತ್ತದೆ. ಏಕೆಂದರೆ ಅದು ಮೂರು ಹಂತಗಳನ್ನು ಒಳಗೊಂಡಿರುತ್ತದೆ, ಅವುಗಳಲ್ಲಿ ಕೊನೆಯದಷ್ಟೆ ಇಡಿಯಾಗಿ ದಿವ್ಯಾನಂದದಿಂದ ಕೂಡಿದ್ದು ಇಲ್ಲವೆ ತೀವ್ರಗತಿಯದು ಆಗಿರುತ್ತದೆ.– ವಿಶಾಲವಾದ, ಪೂರ್ತಿಯಾಗಿರುವ ಭಗವಂತನ ಸಂಪರ್ಕದಲ್ಲಿ ಪ್ರವೇಶಿಸಲು ಅಹಂಕಾರದ ಪ್ರಯತ್ನ, ನಿಮ್ನತರ ಪ್ರಕೃತಿ ಶ್ರಮದಾಯಕ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ದೈವೀಕಾರ್ಯಗತಿಯ ಮೂಲಕ ಸ್ವೀಕರಿಸಲು ಹಾಗೂ ಉಚ್ಚತರ ಪ್ರಕೃತಿಯಾಗಲು ಹಾಗೂ ಕೊನೆಗೆ ಪರಿವರ್ತನೆ ಹೊಂದಲು ಕೂಡ ತಯಾರಿ ಮಾಡಿಕೊಳ್ಳುವುದಿರುತ್ತದೆ. ಅದೇನೇ ಇದ್ದರೂ, ವಾಸ್ತವದಲ್ಲಿ ದೈವೀ ಬಲ, ಬಹಳಷ್ಟು ಸಲ ಅವಲೋಕನೆಗೆ ಬಾರದೆ, ಪರದೆಯ ಹಿಂದಿದ್ದುಕೊಂಡು ದೌರ್ಬಲ್ಯವಿರುವಲ್ಲಿ ತನ್ನನ್ನಿರಿಸುತ್ತದೆ ಮತ್ತು ನಮ್ಮ ನಂಬಿಕೆಯ, ಧೈರ್ಯದ ಹಾಗೂ ತಾಳ್ಮೆಯ ಎಲ್ಲ ವಿಫಲತೆಗಳಾದ್ಯಂತ ಆಧಾರ ನೀಡುತ್ತದೆ. ಅದು "ಕುರುಡ ನೋಡಲು ಶಕ್ತನಾಗುವಂತೆ, ಕುಂಟ ಗುಡ್ಡಗಳ ಮೇಲೇರಿ ಅಲೆದಾಡುವಂತೆ" ಮಾಡುತ್ತದೆ. ಬುದ್ಧಿಮತ್ತೆ ಒಂದು ದೈವೀ ನಿಯಮವಿರುವುದರ ಅರಿವು ಪಡೆಯುತ್ತದೆ, ಆ ನಿಯಮ ಉಪಕಾರ ಬುದ್ಧಿಯಿಂದ ಒತ್ತಾಯಕ್ಕೊಳಪಡಿಸುತ್ತದೆ ಮತ್ತು ಮೇಲಕ್ಕೆತ್ತಿ ಹಿಡಿಯಲು ಸಹಾಯ ನೀಡುತ್ತದೆ. ಹೃದಯ ಎಲ್ಲ ವಿಷಯಗಳ ಪ್ರಭು, ಮನುಷ್ಯನ ಮಿತ್ರ ಇಲ್ಲವೆ ಎಲ್ಲ ಎಡವುವಿಕೆಗಳಾದ್ಯಂತ ಮೇಲಕ್ಕೆತ್ತಿ ಹಿಡಿಯುವ ವಿಶ್ವಂಭರ ಜಗನ್ಮಾತೆ ಇವರನ್ನು ಕುರಿತು ಮಾತನಾಡುತ್ತದೆ, ಹಾಗಾಗಿ ಈ ಮಾರ್ಗ ಒಮ್ಮೆಗೆ ಕಲ್ಪಿಸಿಕೊಳ್ಳಬಹುದಾದಷ್ಟು ಕಠಿಣವಾದದ್ದು, ಆದಾಗ್ಯೂ ಅದರ ಪ್ರಯತ್ನ ಹಾಗೂ

ಉದ್ದೇಶಗಳ ಬೃಹತ್ವಕ್ಕೆ ಹೋಲಿಸಿದರೆ, ಅತ್ಯಂತ ಸುಲಭವಾದದ್ದು ಮತ್ತು ಎಲ್ಲದಕ್ಕೂ ನಿಶ್ಚಿತವಾದದ್ದು.

**(CWSA, 23/45–46)** **– ಶ್ರೀ ಅರವಿಂದರು**

*

**ಮೂರು ಮಹೋನ್ನತ ಗಮನ ಸೆಳೆಯುವ ಲಕ್ಷಣಗಳು**

ಉಚ್ಚತರವಾದ ಈ ಕ್ರಿಯೆಯ ಮೂರು ಮಹೋನ್ನತ, ಗಮನ ಸೆಳೆಯುವ ಲಕ್ಷಣಗಳಿವೆ, ಆ ಕ್ರಿಯೆ ನಿಮ್ನ ಸ್ವಭಾವದ ಮೇಲೆ ಸಮಗ್ರವಾಗಿ ಕಾರ್ಯಕೈಕೊಳ್ಳುತ್ತಿರುವಾಗ ಕಂಡು ಬರುತ್ತವೆ: ಮೊದಲನೆಯದಾಗಿ ಅದು ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿದ ಯೋಗದ ಹಾಗೆ ಮತ್ತು ಅವುಗಳಲ್ಲಿರುವ ಅನುಕ್ರಮದ ಹಾಗೆ ಮತ್ತು ಸ್ಥಿರಗೊಂಡ ಪದ್ಧತಿಯ ಹಾಗೆ ಕಾರ್ಯ ಕೈಕೊಳ್ಳುವುದಿಲ್ಲ, ಆದರೆ ಒಂದು ಬಗೆಯ ಮುಕ್ತ, ಹರಡಿಕೊಂಡ, ಆದಾಗ್ಯೂ ಕ್ರಮೇಣ ಗಾಢತೆಯುಳ್ಳದ್ದಾಗಿರುವ ಮತ್ತು ಉದ್ದೇಶಪೂರ್ವಕವಾಗಿರುವ ಕಾರ್ಯಗತಿಯಿಂದ ಕೈಕೊಳ್ಳುತ್ತದೆ, ಆ ಕಾರ್ಯಗತಿಯನ್ನು ಅದು ಯಾರ ಮೇಲೆ ಕಾರ್ಯಚರಣೆ ನಡೆಸಲಾಗುವುದೋ ಅವನ ಮನೋಧರ್ಮದಿಂದ, ಅವನ ಸ್ವಭಾವ ಅರ್ಪಿಸುವ ಸಹಾಯಕ ಮೂಲದ್ರವ್ಯದಿಂದ ಮತ್ತು ಪರಿಶುದ್ಧತೆಗೆ ಹಾಗೂ ಪರಿಪೂರ್ಣತೆಗೆ ಅದು ಮುಂದಿರಿಸುವ ಅಡೆತಡೆಗಳಿಂದ ನಿರ್ಧರಿಸಲಾಗುತ್ತದೆ. ಹಾಗಾಗಿ ಒಂದರ್ಥದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಈ ಮಾರ್ಗದಲ್ಲಿ ಅವನದೇ ಆದ ಯೋಗವಿರುತ್ತದೆ.

ಎರಡನೆಯದಾಗಿ ವಿಧಾನ ಸಮಗ್ರವಾಗಿರುವುದರಿಂದ ನಮ್ಮ ಗತಕಾಲದ ಉತ್ಕ್ರಾಂತಿಯನ್ನು ಸಾರಭೂತವಾದ ಏನನ್ನೂ ತಿರಸ್ಕರಿಸದೆ ಕೂಡಿಕೊಂಡು ಸಂಘಟಿತಗೊಂಡಿರುವ ನಮ್ಮ ಸ್ವಭಾವವನ್ನು ಒಪ್ಪಿಕೊಳ್ಳುತ್ತದೆ. ಎಲ್ಲವೂ ದೈವೀ ಬದಲಾವಣೆ ಹೊಂದಲೆಂದು ಒತ್ತಾಯಪಡಿಸುತ್ತದೆ. ನಮ್ಮಲ್ಲಿರುವ ಎಲ್ಲವನ್ನೂ ಅಧಿಕಬಲದ ಕುಶಲಕರ್ಮಿಯ ಹಸ್ತಗಳು ಹಿಡಿದುಕೊಂಡಿರುತ್ತವೆ ಮತ್ತು ಈಗ ಗೊಂದಲಕ್ಕೀಡಾಗಿರುವ ಮುಂದಿರಿಸುವಿಕೆಯನ್ನು ಸ್ಪಷ್ಟವಾದ ಪ್ರತೀಕವಾಗುವ ಹಾಗೆ ಪರಿವರ್ತನೆಗೀಡಾಗುವಂತೆ ಮಾಡುತ್ತವೆ. ಆ ಎಲ್ಲ ಪ್ರಗತಿಪರ ಅನುಭವದಲ್ಲಿ ಈ ನಿಮ್ನತರ ಪ್ರಕಟಣೆ ಹಾಗೂ ಅದರಲ್ಲಿ ರಚನೆಗೊಂಡ ಎಲ್ಲವೂ ಹೇಗಾಯಿತು ಎಂಬುದನ್ನು ಗ್ರಹಿಸಲು ಪ್ರಾರಂಭಿಸುತ್ತೇವೆ, ಅದರಲ್ಲಿ ರಚನೆಗೊಂಡ

ಎಲ್ಲವೂ ತೋರಿಕೆಗೆ ವಿರೂಪಗೊಂಡಿದ್ದು, ಕ್ಷುದ್ರ, ತುಚ್ಛವಾಗಿರಬಹುದು, ಅದು ದೈವೀ ಪ್ರಕೃತಿಯ ಸಾಮರಸ್ಯದಲ್ಲಿ ಹೆಚ್ಚು ಕಡಿಮೆ ವಿರೂಪಗೊಂಡ ಇಲ್ಲವೆ ಯಾವುದೋ ಅಂಶದ ಇಲ್ಲವೆ ಕ್ರಿಯೆಯ ಅಪರಿಪೂರ್ಣ ಆಕಾರವಾಗಿರಬಹುದು.

ಮೂರನೆಯದಾಗಿ ನಮ್ಮೊಳಗಿರುವ ದೈವೀ ಸಾಮರ್ಥ್ಯ ಎಲ್ಲ ಜೀವನವನ್ನು ಈ ಸಮಗ್ರ ಯೋಗದ ಸಾಧನವೆಂದು ಉಪಯೋಗಿಸುತ್ತದೆ. ಪ್ರತಿಯೊಂದು ಅನುಭವ, ನಮ್ಮ ಜಗತ್ತಿನ ವಾತಾವರಣದೊಂದಿಗೆ ಬಾಹ್ಯ ಸಂಪರ್ಕ, ಎಷ್ಟೇ ಅಪವ್ಯಯ ಮಾಡುವುದಿರಲಿ, ಇಲ್ಲವೆ ಎಷ್ಟೇ ವಿಪತ್ಕಾರಕವಾಗಿರಲಿ ಅದನ್ನು ನಮ್ಮ ಕಾರ್ಯಕ್ಕಾಗಿ ಉಪಯೋಗಿಸಲಾಗುತ್ತದೆ, ಪ್ರತಿಯೊಂದು ಆಂತರಿಕ ಅನುಭವ ಅತ್ಯಂತ ಜುಗುಪ್ಸೆ ತರಿಸುವ ವೇದನೆಯಾಗಲಿ ಇಲ್ಲವೆ ಅತ್ಯಂತ ಅವಮಾನ ತರಿಸುವ ಪತನವಾಗಲಿ ಪರಿಪೂರ್ಣತೆಯ ಮಾರ್ಗದಲ್ಲಿ ಒಂದು ಹೆಜ್ಜೆಯಾಗುತ್ತದೆ ಮತ್ತು ನಾವು ತೆರೆದ ಕಣ್ಣುಗಳಿಂದ ನಮ್ಮೊಳಗೇ ಜಗತ್ತಿನಲ್ಲಿ ಭಗವಂತನ ವಿಧಾನವನ್ನು ಗುರುತಿಸುತ್ತೇವೆ, ಮಬ್ಬಾದುದರಲ್ಲಿ ಪ್ರಕಾಶವನ್ನು, ದುರ್ಬಲವಾದದ್ದರಲಿ, ಪತನಗೊಂಡದ್ದರಲ್ಲಿ ಅಧಿಕ ಬಲವನ್ನು, ತಾಳಲಾಗದಂತೆ ದುಃಖದಾಯಕವಾದದ್ದರಲ್ಲಿ ದಿವ್ಯಾನಂದವನ್ನು ನೋಡುತ್ತೇವೆ. ನಿಮ್ನ ಹಾಗೂ ಉಚ್ಚತರ ಕಾರ್ಯಗತಿಗಳಲ್ಲಿ ಭಗವಂತನ ವಿಧಾನ ಒಂದೇ ಆಗಿರುತ್ತದೆ ಎಂಬುದನ್ನು ನೋಡುತ್ತೇವೆ, ಕೇವಲ ಒಂದರಲ್ಲಿ ಅದನ್ನು ಪ್ರಕೃತಿಯ ಅವಚೇತನದ ಮೂಲಕ ನಿಧಾನಗತಿಯಿಂದ ಬೆಂಬತ್ತಲಾಗಿರುತ್ತದೆ, ಇನ್ನೊಂದರಲ್ಲಿ ಅದು ತೀವ್ರಗತಿಯದಾಗಿರುತ್ತದೆ, ಸ್ವ-ಅರಿವುಳ್ಳದಾಗಿರುತ್ತದೆ ಮತ್ತು ಉಪಕರಣ ದೈವೀ ಪ್ರಭುವಿನ ಹಸ್ತ ಇರುವುದನ್ನು ಒಪ್ಪಿಕೊಳ್ಳುತ್ತದೆ.

**(CWSA, 23/46–47)** **– ಶ್ರೀ ಅರವಿಂದರು**

*

**ಶಾಸ್ತ್ರಗಳಾಚೆಗೆ ಸಾಗಿ ಹೋಗುವುದು**

ಸಮಗ್ರ ಯೋಗದ ಸಾಧಕ ಅವಶ್ಯವಾಗಿ ನೆನಪಿಡಬೇಕಾದುದೆಂದರೆ ಯಾವುದೇ ಲಿಖಿತ ಶಾಸ್ತ್ರ, ಅದರ ಅಧಿಕಾರ ಎಷ್ಟೇ ಶ್ರೇಷ್ಠವಾಗಿರಲಿ, ಇಲ್ಲವೆ ಅದರ ಮನೋಧರ್ಮ ಎಷ್ಟೇ ವಿಶಾಲವಾಗಿರಲಿ, ಅದು ಕೇವಲ ಸನಾತನ ಜ್ಞಾನದ ಒಂದು ಭಾಗಶಃ ಅಭಿವ್ಯಕ್ತಿಯಾಗಿರಬಹುದು, ಅವನು ಅದನ್ನು

ಉಪಯೋಗ ಮಾಡುತ್ತಾನೆ, ಆದರೆ ಅತ್ಯಂತ ಶ್ರೇಷ್ಠ ಸಾಹಿತ್ಯದಿಂದಲೂ ಕೂಡ ಬಂಧನಕ್ಕೊಳಗಾಗುವುದಿಲ್ಲ. ಎಲ್ಲ ಶಾಸ್ತ್ರ ಗಾಢವಾಗಿರುತ್ತದೆ ವಿಶಾಲವಾಗಿರುತ್ತದೆ, ವಿಶ್ವವ್ಯಾಪಿಯಾಗಿರುತ್ತದೆ ಅಲ್ಲಿ ಅದು ಅವನ ಮೇಲೆ ಅತ್ಯಂತ ಒಳ್ಳೆಯದಕ್ಕಾಗಿ, ಲೆಕ್ಕಾಚಾರ ಮಾಡದಷ್ಟು ಮಹತ್ವಕ್ಕಾಗಿ, ಒಂದು ಪ್ರಭಾವ ಕಾರ್ಯರೂಪಕ್ಕೆ ಬರುವಂತೆ ಮಾಡಬಹುದು. ಕಿರೀಟಪ್ರಾಯವಾದ ಸತ್ಯೋಕ್ತಿಗಳಿಗೆ ಅವನ ಎಚ್ಚರಗೊಳ್ಳುವಿಕೆ ಮತ್ತು ಅತ್ಯುಚ್ಚ ಅನುಭವಗಳನ್ನು ಸಿದ್ಧಿಸಿಕೊಳ್ಳುವಿಕೆ ಅವನ ಅನುಭವದೊಂದಿಗೆ ಜೊತೆಗೂಡಬಹುದು. ಅವನ ಯೋಗ ದೀರ್ಘಕಾಲದವರೆಗೆ ಒಂದು ಶಾಸ್ತ್ರದ ಇಲ್ಲವೆ ಒಂದರ ನಂತರ ಒಂದರಂತೆ ಕೈಗೆತ್ತಿಕೊಂಡ ಶಾಸ್ತ್ರಗಳ ಆಳಿಕೆಗೆ ಒಳಗಾಗಿರಬಹುದು.– ಅದು ಶ್ರೇಷ್ಠ ಹಿಂದೂ ಸಂಪ್ರದಾಯದ ಪ್ರಕಾರ ಉದಾಹರಣೆಗೆ ಗೀತೆ, ಉಪನಿಷತ್ತುಗಳು, ವೇದ ಇವುಗಳ ಆಳಿಕೆಗೆ ಒಳಗಾಗಿರಬಹುದು. ಅದರ ಮೂಲದ್ರವ್ಯದಲ್ಲಿ ಹಲವಾರು ಶಾಸ್ತ್ರಗಳ ವೈವಿಧ್ಯಮಯ ಸತ್ಯಗಳ ಅನುಭವವನ್ನು ಒಳಗೊಳ್ಳುವುದು ಗತಕಾಲದ ಎಲ್ಲ ಅತ್ಯಂತ ಒಳ್ಳೆಯದರೊಂದಿಗೆ ಸಮೃದ್ಧವಾದದ್ದನ್ನಾಗಿ ಮಾಡುವುದು ಅವನ ಅಭಿವೃದ್ಧಿಯ ಒಳ್ಳೆಯ ಭಾಗವಾಗಬಹುದು. ಆದರೆ ಕೊನೆಗೆ ಅವನು ತನ್ನ ನಿಲುವಿನಲ್ಲಿರಬೇಕು, ಇಲ್ಲವೆ ಇನ್ನೂ ಅದಕ್ಕೂ ಹೆಚ್ಚಾಗಿ ಅವನಿಗೆ ಸಾಧ್ಯವಾದರೆ ಯಾವಾಗಲೂ ಪ್ರಾರಂಭದಿಂದ ಅವನು ಉಪಯೋಗ ಮಾಡುವ ಶಬ್ದದ ಸೀಮಿತತೆಗಳಾಚೆ ತನ್ನದೇ ಆತ್ಮದಲ್ಲಿ ಜೀವಿಸಬೇಕು. ಯೋಗಿ ಅವನ ಪ್ರಗತಿಯಲ್ಲಿ ಲಿಖಿತ ದೈವೀ ಸತ್ಯದಾಚೆಗೆ ಸಾಗಿ ಹೋಗಬೇಕು– ಶಬ್ದ ಬ್ರಹ್ಮಾತಿವರ್ತತೆ– ಅವನು ಕೇಳಿಸಿಕೊಂಡ ಮತ್ತು ಕೇಳಿಸಿಕೊಳ್ಳಲಿರುವ ಎಲ್ಲದರಾಚೆಗೆ– ಶ್ರೋತವ್ಯಶ್ಚ ಶ್ರುತಶ್ಚತ ಸಾಗಿ ಹೋಗಬೇಕು ಎಂದು ಗೀತೆಯೇ ಸ್ವತಃ ಸಾರಿಹೇಳುತ್ತದೆ. ಏಕೆಂದರೆ ಅವನು ಒಂದು ಪುಸ್ತಕದ ಇಲ್ಲವೆ ಹಲವಾರು ಪುಸ್ತಕಗಳ ಸಾಧಕನಲ್ಲ, ಅನಂತದ ಸಾಧಕನಾಗಿರುತ್ತಾನೆ.

**(CWSA, 23/55–56)** **– ಶ್ರೀ ಅರವಿಂದರು**

*

**ಸನಾತನ ವೇದ ಮತ್ತು ಈ ಯೋಗದ ಪರಮೋಚ್ಚ ಮಾರ್ಗದರ್ಶಕ**

ಸಮಗ್ರ ಯೋಗದ ಪರಮೋಚ್ಚ ಶಾಸ್ತ್ರವೆಂದು ಸನಾತನ ವೇದ ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ರಹಸ್ಯವಾಗಿ ಇರುತ್ತದೆ, ಹಾಗಾಗಿ ಅದರ ಪರಮೋಚ್ಚ

ಮಾರ್ಗದರ್ಶಕ ಹಾಗೂ ಬೋಧಕ ಆಂತರಿಕ ಮಾರ್ಗದರ್ಶಕ, ರಹಸ್ಯವಾಗಿ ನಮ್ಮೊಳಗಿರುವ ಜಗದ್ಗುರುವಾಗಿರುತ್ತಾನೆ. ಅವನೇ ನಮ್ಮ ಅಂಧಕಾರವನ್ನು ಅವನ ಜ್ಞಾನದ ದೇದಿಪ್ಯಮಾನವಾಗಿರುವ ಪ್ರಕಾಶದಿಂದ ನಾಶಮಾಡುತ್ತಾನೆ, ಆ ಪ್ರಕಾಶ ನಮ್ಮೊಳಗೆ ಅವನದೇ ಸ್ವ–ಜ್ಞಾನಪ್ರಕಾಶನದ ಹೆಚ್ಚುತ್ತಿರುವ ವೈಭವವಾಗುತ್ತದೆ. ಅವನು ನಮ್ಮೊಳಗೆ ಪ್ರಗತಿಪರವಾಗಿ ಅವನದೇ ಸ್ವಾತಂತ್ರ್ಯ, ದಿವ್ಯಾನಂದ, ಪ್ರೇಮ, ಸಾಮರ್ಥ್ಯ, ಅಮರ ಸತ್ತೆ ಇವುಗಳನ್ನು ಅನಾವರಣ ಮಾಡಿ ತೋರಿಸುತ್ತಾನೆ. ನಮಗೆ ಆದರ್ಶವಾಗಲಿ ಎಂದು ನಮ್ಮ ಮೇಲೆ ಅವನ ದೈವೀ ಉದಾಹರಣೆಯನ್ನು ಇರಿಸುತ್ತಾನೆ ಮತ್ತು ನಿಮ್ನತರ ಅಸ್ತಿತ್ವವನ್ನು ಅದು ಚಿಂತನೆ ಮಾಡುತ್ತಿರುವುದರ ಪ್ರತಿಫಲನವನ್ನಾಗಿ ಪರಿವರ್ತಿಸುತ್ತಾನೆ. ತನ್ನದೇ ಪ್ರಭಾವ ಹಾಗೂ ಸಾನ್ನಿಧ್ಯಗಳನ್ನು ನಮ್ಮೊಳಗೆ ಸುರಿಯುವುದರ ಮೂಲಕ ವ್ಯಕ್ತಿಗತ ಸತ್ತೆ ವಿಶ್ವಂಭರ ಹಾಗೂ ವಿಶ್ವಾತೀತವಾದುದರೊಡನೆ ತಾದಾತ್ಮ್ಯ ಹೊಂದುವುದನ್ನು ಸಿದ್ಧಿಸಿಕೊಳ್ಳುವಂತಾಗುತ್ತದೆ.

ಯಾವುದು ಅವನ ಪದ್ಧತಿ ಹಾಗೂ ವಿಧಾನ? ಅವನಲ್ಲಿ ಯಾವ ವಿಧಾನವೂ ಇಲ್ಲ ಮತ್ತು ಪ್ರತಿಯೊಂದು ವಿಧಾನವಿದೆ. ಪ್ರಕೃತಿಗೆ ದಕ್ಷತೆಯಿರುವಷ್ಟು ಅತ್ಯುಚ್ಚ ಕಾರ್ಯಗತಿಗಳ ಹಾಗೂ ಚಲನೆಗಳ ಸ್ವಾಭಾವಿಕ ಸಂಘಟನೆ ಅವನ ಪದ್ಧತಿಯಾಗಿರುತ್ತದೆ. ಅತ್ಯಂತ ಕ್ಷುದ್ರವಾದ ವಿವರಗಳಿಗೆ, ತಮ್ಮ ತೋರಿಕೆಯಲ್ಲಿ ಎಳ್ಳಷ್ಟೂ ಪ್ರಾಮುಖ್ಯತೆ ಇಲ್ಲದ ಕ್ರಿಯೆಗಳಿಗೆ ಕೊಡುವ ಕಾಳಜಿ ಹಾಗೂ ಕೂಲಂಕಷತೆಗಳನ್ನು ಅತ್ಯುಚ್ಚವಾದವುಗಳಿಗೂ ಅನ್ವಯಿಸುತ್ತ ಅವು ಕೊನೆಗೆ ಎಲ್ಲವನ್ನು ಪ್ರಕಾಶದಲ್ಲಿ ಮೇಲಕ್ಕೆತ್ತುತ್ತವೆ ಮತ್ತು ಎಲ್ಲವನ್ನೂ ಪರಿವರ್ತನೆಗೆ ಒಳಪಡಿಸುತ್ತವೆ. ಏಕೆಂದರೆ ಅವನ ಯೋಗದಲ್ಲಿ ಯಾವುದೂ ಉಪಯೋಗಿಸಲು ಅತಿಚಿಕ್ಕದಾದುದಾಗಿರುವುದಿಲ್ಲ, ಪ್ರಯತ್ನ ಮಾಡಲು ಯಾವುದೂ ಅತಿಶ್ರೇಷ್ಠವಾದುದಾಗಿರುವುದಿಲ್ಲ. ದೈವೀ ಪ್ರಭುವಿನ ಸೇವಕ ಹಾಗೂ ಶಿಷ್ಯನೆಂದಾಗಿ ಅವನು ಗರ್ವ ಹಾಗೂ ಅಹಂಕಾರಗಳೊಡನೆ ವ್ಯವಹರಿಸುವುದಿಲ್ಲ, ಏಕೆಂದರೆ ಮೇಲ್ಗಡೆಯಿಂದ ಅವನಿಗಾಗಿ ಎಲ್ಲವನ್ನೂ ಕೈಕೊಳ್ಳಲಾಗಿರುತ್ತದೆ, ಹಾಗೆಯೇ ತನ್ನ ವೈಯಕ್ತಿಕ ಕೊರತೆಗಳಿಂದ ಇಲ್ಲವೆ ಅವನ ಸ್ವಭಾವದ ಎಡವುವಿಕೆಗಳಿಂದ ನಿರಾಶೆಗೊಳಗಾಗಲು ಅವನಿಗೆ ಹಕ್ಕಿರುವುದಿಲ್ಲ. ಏಕೆಂದರೆ

ಅವನಲ್ಲಿ ಕಾರ್ಯ ಕೈಕೊಳ್ಳುವ ದೈವೀಶಕ್ತಿ ವ್ಯಕ್ತಿಗತವಾಗಿರುವುದಿಲ್ಲ,– ಇಲ್ಲವೆ ಪರಮೋಚ್ಚ ವ್ಯಕ್ತಿಯದಾಗಿರುತ್ತದೆ ಮತ್ತು ಅನಂತವಾಗಿರುತ್ತದೆ.

**(CWSA, 23/61–62)** **– ಶ್ರೀ ಅರವಿಂದರು**

*

**ದೈವೀಕಾರ್ಯಗತಿಯನ್ನು ಅಹಂಕಾರ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ**

ಅಹಂಭಾವದ ಮನಸ್ಸು ಬಯಸುವ ಇಲ್ಲವೆ ಒಪ್ಪಿಗೆ ನೀಡುವ ಕಾರ್ಯಗತಿ ದೈವೀ ಕಾರ್ಯಗತಿಯಾಗಿರುವುದಿಲ್ಲ, ಏಕೆಂದರೆ ಅದು ಸತ್ತೆಯತ್ತ ತಲುಪಲು ದೋಷವನ್ನು, ದಿವ್ಯಾನಂದ ತಲುಪಲು ವೇದನೆಯನ್ನು, ಪರಿಪೂರ್ಣತೆಯನ್ನು ತಲುಪಲು ಅಪರಿಪೂರ್ಣತೆಯನ್ನು ಉಪಯೋಗಿಸುತ್ತದೆ, ಎಲ್ಲಿಗೆ ಕರೆದೊಯ್ಯ–ಲಾಗುತ್ತದೆ ಎಂಬುದನ್ನು ನೋಡಲು ಅಹಂಕಾರಕ್ಕೆ ಸಾಧ್ಯವಾಗುವುದಿಲ್ಲ, ಕರೆದೊಯ್ಯುತ್ತಿರುವುದರ ವಿರುದ್ಧ ಬಂಡಾಯವೇಳುತ್ತದೆ, ಗಾಢ ನಂಬಿಕೆಯನ್ನು ಕಳೆದುಕೊಳ್ಳುತ್ತದೆ, ಧೈರ್ಯವನ್ನು ಕಳೆದುಕೊಳ್ಳುತ್ತದೆ. ಈ ವಿಫಲತೆಗಳು ಮಹತ್ವದವಲ್ಲ, ಏಕೆಂದರೆ ಅಂತರಂಗದೊಳಗಿರುವ ದೈವೀ ಮಾರ್ಗದರ್ಶಕ ನಮ್ಮ ಬಂಡಾಯದಿಂದ ಜುಗುಪ್ಸೆಗೊಳಗಾಗುವುದಿಲ್ಲ, ನಮ್ಮ ನಂಬಿಕೆಯ ಕೊರತೆಯಿಂದ ಎದೆಗುಂದುವುದಿಲ್ಲ ಇಲ್ಲವೆ ನಮ್ಮ ಅಶಕ್ತತೆಯಿಂದ ಹಿಮ್ಮೆಟ್ಟುವುದಿಲ್ಲ. ಅವನಲ್ಲಿ ತಾಯಿಯ ಇಡಿಯಾದ ಪ್ರೇಮವಿರುತ್ತದೆ, ಬೋಧಕನ ಇಡಿಯಾದ ತಾಳ್ಮೆಯಿರುತ್ತದೆ. ಮಾರ್ಗದರ್ಶನಕ್ಕೆ ನಮ್ಮ ಒಪ್ಪಿಗೆಯನ್ನು ಹಿಂದೆ ತೆಗೆದುಕೊಳ್ಳುವುದರಿಂದ ನಾವು ಪ್ರಜ್ಞೆಯನ್ನು ಕಳೆದುಕೊಳ್ಳುತ್ತೇವೆ, ಆದಾಗ್ಯೂ ಎಲ್ಲ ವಾಸ್ತವತೆಯನ್ನು– ಯಾವುದೇ ಸಂದರ್ಭದಲ್ಲಿ ಸಂಭವಿಸಬೇಕಾದದ್ದನ್ನು– ಅದರ ಲಾಭವನ್ನು ಕಳೆದುಕೊಳ್ಳುವುದಿಲ್ಲ. ಏಕೆಂದರೆ ನಿಮ್ನತರವಾದುದರ ಮೂಲಕ ಅವನು ಸ್ವ–ಜ್ಞಾನಪ್ರಕಾಶನವನ್ನು ತಯಾರು ಮಾಡುತ್ತಿರುವುದರೊಂದಿಗೆ ನಮ್ಮ ಉಚ್ಚತರ ದಿವ್ಯಾತ್ಮವಿರುವುದರಲ್ಲಿಯ ಭೇದವನ್ನು ಗುರುತಿಸಲು ವಿಫಲರಾಗುತ್ತೇವೆ. ಜಗತ್ತಿನಲ್ಲಿರುವ ಹಾಗೆಯೇ ನಮ್ಮಲ್ಲಿಯೂ ಕೂಡ ನಾವು ಅವನ ಕಾರ್ಯಗತಿಗಳಿಂದ ದೇವನನ್ನು ಕಾಣಲಾರೆವು, ವಿಶೇಷವಾಗಿ ಏಕೆಂದರೆ ಅವನು ನಮ್ಮ ಸ್ವಭಾವದ ಮೂಲಕ ಕಾರ್ಯಮಾಡುತ್ತಾನೆ, ಒಂದರ ನಂತರ ಒಂದರಂತೆ ಆಗುವ ಪವಾಡಗಳ ಮೂಲಕವಲ್ಲ. ಮನುಷ್ಯ ನಂಬಿಕೆ ಪಡೆಯಲೆಂದು ಪವಾಡಗಳನ್ನು ಒತ್ತಾಯದಿಂದ ಬೇಡುತ್ತಾನೆ. ತನ್ನ ಕಣ್ಣು ಕುಕ್ಕಲೆಂದು ಇಚ್ಛೆ

ಪಡುತ್ತಾನೆ ಮತ್ತು ಈ ತಾಳ್ಮೆ ಕಳೆದುಕೊಳ್ಳುವಿಕೆ, ಈ ಅಜ್ಞಾನ ಭವ್ಯ ಅಪಾಯ ಹಾಗೂ ವಿಪತ್ತುಗಳಾಗಿ ಹೊರಳಿಕೊಳ್ಳಬಹುದು, ದೈವೀ ಕರೆದೊಯ್ಯುವು–ದರೊಂದಿಗೆ ವಿರುದ್ಧ ನಾವು ಬಂಡಾಯವೇಳುವುದರಲ್ಲಿ ನಮ್ಮ ಪ್ರಚೋದನೆಗಳಿಗೆ ಹಾಗೂ ಆಸೆಗಳಿಗೆ ತೃಪ್ತಿಕೊಡುವ, ವಿರೂಪಗೊಳಿಸುವ ಇನ್ನೊಂದು ಭವ್ಯ ಶಕ್ತಿಗೆ ಕರೆಕೊಟ್ಟು ಅದಕ್ಕೆ ದೈವೀ ಹೆಸರನ್ನು ಕೊಟ್ಟಾಗ ಹಾಗಾಗುವುದು.

**(CWSA, 23/64–65)** **– ಶ್ರೀ ಅರವಿಂದರು**

*

**ಯೋಗ: ಒಂದು ಹೊಸಜನ್ಮ**

ಎಲ್ಲ ಯೋಗ ಅದರ ಸ್ವಭಾವದಲ್ಲಿ ಒಂದು ಹೊಸ ಜನ್ಮವಾಗಿರುತ್ತದೆ. ಅದು ಸಾಧಾರಣ ಮಾನಸಿಕ ಮೂಲದ್ರವ್ಯವಿರುವ ಜೀವನದಿಂದ ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆ ಮತ್ತು ಶ್ರೇಷ್ಠತರ ದೈವಿಕ ಸತ್ತೆಯಾಗುವುದಕ್ಕಾಗಿ ಜನ್ಮವಾಗಿರುತ್ತದೆ. ಆ ಉಚ್ಚತರ ಆಧ್ಯಾತ್ಮಿಕ ಅಸ್ತಿತ್ವದ ಆವಶ್ಯಕತೆಗಾಗಿ ಬಲವತ್ತರವಾದ ಎಚ್ಚತ್ತುಕೊಳ್ಳುವಿಕೆ ಇರದಿದ್ದರೆ ಯಾವ ಯೋಗವನ್ನೂ ಯಶಸ್ವಿಯಾಗಿ ಕೈಗೆತ್ತಿಕೊಳ್ಳಲಾಗುವುದಿಲ್ಲ. ಈ ಆಳವಾದ ವಿಶಾಲವಾದ ಆಂತರಿಕ ಬದಲಾವಣೆಗಾಗಿ ಕರೆಗೊಳಗಾದ ಆತ್ಮ ಪ್ರಾರಂಭದ ಹೊರಟು ಹೋಗುವಿಕೆಯತ್ತ ಭಿನ್ನ ರೀತಿಯಲ್ಲಿ ತಲುಪಬಹುದು. ಅದರತ್ತ ತನ್ನದೇ ಸ್ವಾಭಾವಿಕ ಅಭಿವೃದ್ಧಿಯಿಂದ ಬರಬಹುದು, ಆ ಅಭಿವೃದ್ಧಿ ಎಚ್ಚತ್ತುಕೊಳ್ಳುವಿಕೆಯತ್ತ ಪ್ರಜ್ಞಾರಹಿತವಾಗಿ ಕರೆದೊಯ್ಯುತ್ತ ಬಂದಿರುತ್ತದೆ; ಧರ್ಮವೊಂದರ ಇಲ್ಲವೆ ತತ್ವಜ್ಞಾನವೊಂದರ ಆಕರ್ಷಣೆಗೊಳಗಾಗಿ ತಲುಪಬಹುದು. ನಿಧಾನಗತಿಯ ಜ್ಞಾನಪ್ರಕಾಶನದ ಮೂಲಕ ಅದು ಸಮೀಪಿಸಬಹುದು ಇಲ್ಲವೆ ಹಠಾತ್ತನೆ ಆಗುವ ಸ್ಪರ್ಶ ಇಲ್ಲವೆ ಆಘಾತದಿಂದ ಅದರತ್ತ ಜಿಗಿತ ಮಾಡಬಹುದು. ಬಾಹ್ಯ ಪರಿಸ್ಥಿತಿಗಳ ಒತ್ತಡದಿಂದ ಇಲ್ಲವೆ ಆಂತರಿಕ ಆವಶ್ಯಕತೆಯಿಂದ ಏಕೈಕ ಶಬ್ದವೊಂದು ಮನಸ್ಸಿನ ಮುದ್ರೆಗಳನ್ನು ಮುರಿದು ಹಾಕಬಹುದು, ಇಲ್ಲವೆ ದೀರ್ಘಕಾಲದ ಚಿಂತನೆಯ ಮೂಲಕ ಆ ಮಾರ್ಗದಲ್ಲಿ ಸಾಗಿ ಹೋಗಿರುವವನ ದೂರದ ಉದಾಹರಣೆಯ ಮೂಲಕ ಇಲ್ಲವೆ ಸಂಪರ್ಕ, ದೈನಂದಿನ ಪ್ರಭಾವದ ಮೂಲಕ ಸಮೀಪಿಸಬಹುದು. ಸ್ವಭಾವ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಕರೆ ಬರುತ್ತದೆ.

ಆದರೆ ಅದು ಯಾವುದೇ ರೀತಿಯಲ್ಲಿ ಬರಲಿ, ಅಲ್ಲಿ ಮನಸ್ಸಿನ ನಿರ್ಧಾರ ಹಾಗೂ ಸಂಕಲ್ಪಗಳಿರಬೇಕು ಮತ್ತು ಪರಿಣಾಮವಾಗಿ, ಸಂಪೂರ್ಣ ಹಾಗೂ ಪರಿಣಾಮಕಾರಿ ಸ್ವ–ಮುಡುಪಾಗಿರಿಸಿಕೊಳ್ಳುವಿಕೆ ಇರಬೇಕು. ಒಂದು ಹೊಸ ಆಧ್ಯಾತ್ಮಿಕ ವಿಚಾರ ಶಕ್ತಿ, ಸತ್ತೆಯ ಊರ್ಧ್ವಮುಖ ನಿರ್ದೇಶನ, ಒಂದು ಜ್ಞಾನ ಪ್ರಕಾಶನ, ಸಂಕಲ್ಪ ಹಾಗೂ ಹೃದಯದ ಅಭೀಪ್ಸೆಯಿಂದ ಒಂದು ಹೊರಳುವಿಕೆ, ಪರಿವರ್ತನೆಗೆ ಒಳಪಡುವಿಕೆ ಇವುಗಳ ಹಿಡಿತಕ್ಕೊಳಗಾಗುವಿಕೆ– ಇದು ಬಹಳ ಮಹತ್ವಪೂರ್ಣ ಕ್ರಿಯೆ. ಯೋಗ ಕೊಡಬೇಕಾದ ಎಲ್ಲ ಪರಿಣಾಮಗಳನ್ನು ಒಂದು ಬೀಜರೂಪದಲ್ಲಿ ಒಳಗೊಂಡಿರುತ್ತದೆ. ಕೇವಲ ವಿಚಾರ ಇಲ್ಲವೆ ಆಚೆಗಿರುವ ಉಚ್ಚತರವಾದದ್ದನ್ನು ಕುರಿತು ಬೌದ್ಧಿಕ ಅರಸುವಿಕೆ, ಮನಸ್ಸಿನ ಅಭಿರುಚಿಯಿಂದ ಎಷ್ಟೇ ಬಲವತ್ತರವಾಗಿ ಗ್ರಹಿಸಿರಲಿ ಬಯಸಬಹುದಾದ ಒಂದು ವಿಷಯ ಎಂದು ಹೃದಯ ಮತ್ತು ಕೈಕೊಳ್ಳಬೇಕಾದ ಒಂದು ವಿಷಯವೆಂದು ಸಂಕಲ್ಪ ಎಂದು ಹಿಡಿದುಕೊಳ್ಳದಿದ್ದರೆ ಅದು ಪರಿಣಾಮಕಾರಿಯಾಗುವುದಿಲ್ಲ. ಏಕೆಂದರೆ ದಿವ್ಯಾತ್ಮದ ಸತ್ಯ ಕುರಿತು ಕೇವಲ ಯೋಚಿಸುವುದಿರುವುದಿಲ್ಲ, ಆದರೆ ಅದನ್ನು ಜೀವಿಸಬೇಕಾಗುತ್ತದೆ ಮತ್ತು ಅದನ್ನು ಜೀವಿಸಲು ಸತ್ತೆಯ ಏಕಗೊಂಡ ಒಂದೇ ಮನಸ್ಸಿರುವುದನ್ನು ಒತ್ತಾಯದಿಂದ ಬೇಡಲಾಗುತ್ತದೆ. ಯೋಗ ಚಿಂತನೆ ಮಾಡಿದ ಅಷ್ಟೊಂದು ಶ್ರೇಷ್ಠ ಬದಲಾವಣೆಯನ್ನು ವಿಭಜನೆಗೊಳಗಾದ ಸಂಕಲ್ಪದಿಂದ, ಇಲ್ಲವೆ ಚೈತನ್ಯದ ಅಲ್ಪ ಭಾಗದಿಂದ ಇಲ್ಲವೆ ಹಿಂದುಮುಂದು ನೋಡುವ ಮನಸ್ಸಿನಿಂದ ಪರಿಣಾಮಕಾರಿಯಾಗುವಂತೆ ಮಾಡಲಾಗದು ಭಗವಂತನನ್ನು ಅರಸುವವನು ತನ್ನನ್ನು ಅವನಿಗೆ ಮತ್ತು ಕೇವಲ ಅವನಿಗೆ ಮುಡುಪಾಗಿರಿಸಬೇಕು.

**(CWSA, 23/69–70)** **– ಶ್ರೀ ಅರವಿಂದರು**

*

**ಮೊದಲ ಆವಶ್ಯಕತೆ**

ಮೊದಲ ಆವಶ್ಯಕತೆ ಮನಸ್ಸಿನಲ್ಲಿರುವ ಕೇಂದ್ರ ನಂಬಿಕೆ ಹಾಗೂ ದೃಷ್ಟಿ ಇವುಗಳನ್ನು ಕರಗಿಸಬೇಕು. ಅವು ಹಳೆಯ ಬಾಹ್ಯೀಕರಿಸಿದ ವಿಷಯಗಳ ಕ್ರಮಬದ್ಧತೆಯಲ್ಲಿ ಅದರ ಅಭಿವೃದ್ಧಿ, ತೃಪ್ತಿ ಹಾಗೂ ಅಭಿರುಚಿಗಳ ಮೇಲೆ ಏಕಾಗ್ರಗೊಂಡಿರುತ್ತವೆ. ಮೇಲ್ಮೈಯಲ್ಲಿರುವ ಈ ನಿರ್ದೇಶನವನ್ನು ಆಳಾತಿಆಳದ ನಂಬಿಕೆ ಹಾಗೂ ದೃಷ್ಟಿಗಳೊಡನೆ ವಿನಿಮಯ ಮಾಡಿಕೊಳ್ಳುವುದು ಆಜ್ಞಾರ್ಥಕ–

ವಾಗಿರುತ್ತದೆ, ಅವು ಕೇವಲ ಭಗವಂತನನ್ನು ನೋಡುತ್ತವೆ ಹಾಗೂ ಅವನನ್ನು ಅರಸುತ್ತವೆ. ಮುಂದಿನ ಆವಶ್ಯಕತೆ ನಿಮ್ನತರ ಸತ್ತೆಯನ್ನು ಈ ಹೊಸ ನಂಬಿಕೆಗೆ ಹಾಗೂ ಶ್ರೇಷ್ಠತೆಗೆ ಗೌರವ ಸಲ್ಲಿಸುವುದನ್ನು ಒತ್ತಾಯಪಡಿಸುವುದಾಗಿದೆ. ನಮ್ಮ ಎಲ್ಲ ಸ್ವಭಾವ ಸಮಗ್ರ ಶರಣಾಗತಿಯನ್ನು ಮಾಡಬೇಕು, ಅದು ಪ್ರತಿಯೊಂದು ಭಾಗದಲ್ಲಿ ಹಾಗೂ ಪ್ರತಿಯೊಂದು ಚಲನೆಯಲ್ಲಿ ತನ್ನನ್ನು ಅರ್ಪಿಸಬೇಕು, ಅದು ಪಶ್ಚಾತ್ತಾಪವಿಲ್ಲದ ಇಂದ್ರಿಯ ಮನಸ್ಸಿಗೆ ಮೂಲದ್ರವ್ಯವಿರುವ ಜಗತ್ತು ಹಾಗೂ ಉದ್ದೇಶಗಳಿಗಿಂತ ಕಡಿಮೆ ಸತ್ಯವಾದವುಗಳೆಂದು ತೋರಿಬರುತ್ತದೆ. ನಮ್ಮ ಇಡೀ ಸತ್ತೆ– ಆತ್ಮ, ಮನಸ್ಸು, ಇಂದ್ರಿಯ, ಹೃದಯ, ಸಂಕಲ್ಪ, ಜೀವನ ಹಾಗೂ ದೇಹ– ಅದರ ಚೈತನ್ಯಗಳನ್ನು ಎಷ್ಟೊಂದು ಇಡಿಯಾದ ರೀತಿಯಲ್ಲಿ ಮುಡುಪಾಗಿರಿಸ–ಬೇಕೆಂದರೆ– ಭಗವಂತನಿಗೆ ಯೋಗ್ಯವಾದ ವಾಹನದಂತಾಗಬೇಕು. ಇದು ಸುಲಭ ಕಾರ್ಯವಿಧಾನವಲ್ಲ. ಏಕೆಂದರೆ ಜಗತ್ತಿನಲ್ಲಿರುವ ಪ್ರತಿಯೊಂದು ಸ್ಥಿರಗೊಂಡ ರೂಢಿಯನ್ನು ಅನುಸರಿಸುತ್ತದೆ, ಆ ರೂಢಿ ಅದಕ್ಕೆ ಒಂದು ನಿಯಮವಾಗಿರುತ್ತದೆ ಮತ್ತು ಅದು ಮೂಲಭೂತ ಬದಲಾವಣೆಗೆ ಅಡೆತಡೆಯನ್ನುಂಟು ಮಾಡುತ್ತದೆ. ಮತ್ತು ಯಾವ ಬದಲಾವಣೆಯೂ ಸಮಗ್ರಯೋಗ ಪ್ರಯತ್ನಿಸಿದ ಕ್ರಾಂತಿಗಿಂತ ಹೆಚ್ಚು ಮೂಲಭೂತವಾಗಿರುವುದಿಲ್ಲ. ನಮ್ಮಲ್ಲಿರುವ ಪ್ರತಿಯೊಂದನ್ನು ಸತತ ಕೇಂದ್ರ ನಂಬಿಕೆ, ಸಂಕಲ್ಪ ಹಾಗೂ ದೃಷ್ಟಿಗಳತ್ತ ಹಿಂದೆ ಕರೆದು ತರಬೇಕಾಗುತ್ತದೆ. ಪ್ರತಿಯೊಂದು ಯೋಚನೆ, ಪ್ರಚೋದನೆ ಇವುಗಳಿಗೆ ಉಪನಿಷತ್ತಿನ ಭಾಷೆಯಲ್ಲಿ ಪುನಃ ನೆನಪಿಗೆ ತಂದುಕೊಡಬೇಕಾಗುತ್ತದೆ: “ಅದು ದೈವೀ ಬ್ರಹ್ಮನ್, ಇಲ್ಲಿ ಜನರು ಆರಾಧಿಸುವ ಇದಲ್ಲ” ಪ್ರತಿಯೊಂದು ಪ್ರಾಣಿಕ ನಾರು ಇಲ್ಲಿಯವರೆಗೆ ಪ್ರತಿನಿಧಿಸುತ್ತಿದ್ದ ಅದರದೇ ಅಸ್ತಿತ್ವವನ್ನು ಇಡಿಯಾಗಿ ತ್ಯಾಗ ಮಾಡುವಂತೆ ಅದರ ಮನವೊಲಿಸಬೇಕು. ಮನಸ್ಸು ಮನಸ್ಸಾಗಿರುವುದನ್ನು ನಿಲ್ಲಿಸಬೇಕು, ಅದರಾಚೆಗಿರುವ ಏನೋ ಒಂದರ ಉಜ್ವಲತೆಯಾಗುವಂತಾಗಬೇಕು. ಜೀವನ ವಿಶಾಲ, ಸ್ಥಿರ, ಗಾಢ ಹಾಗೂ ಸಾಮರ್ಥ್ಯಪೂರ್ಣವಾದದ್ದಿರುವ ವಿಷಯವಾಗಿ ಬದಲಾಗಬೇಕು, ಅದು ಇನ್ನು ಮುಂದೆ ತನ್ನ ಹಳೆಯ ಆತುರದ, ಸಂಕುಚಿತ, ಕ್ಷುದ್ರ, ಪ್ರಚೋದನೆ ಹಾಗೂ ಬಯಕೆಗಳಿರುವ ಆತ್ಮವನ್ನು ಗುರುತಿಸದಂತಾಗಬೇಕು. ದೇಹ ಕೂಡ ರೂಪಪರಿವರ್ತನೆಗೆ ಅಧೀನವಾಗಬೇಕು ಮತ್ತು ಇನ್ನು ಮುಂದೆ ಕೂಗಾಟ ಮಾಡುವ ಪಶುವಿನಂತಾಗಬಾರದು, ಇಲ್ಲವೆ ಈಗಿರುವ ಹಾಗೆ ತಡೆಯೊಡ್ಡುವ

ಹೆಂಟೆಯಾಗಬಾರದು, ಆದರೆ ಅದರ ಸ್ಥಾನದಲ್ಲಿ ಆತ್ಮದ ಪ್ರಜ್ಞಾಪೂರ್ಣ ಸೇವಕ, ತೇಜಸ್ಸನ್ನು ಹೊರಸೂಸುವ ಉಪಕರಣ ಮತ್ತು ಆತ್ಮದ ಜೀವಂತ ರೂಪ ಇವುಗಳಿರುವವನು ಬರಬೇಕು.

**(CWSA, 23/72–73)** **– ಶ್ರೀ ಅರವಿಂದರು**

*

**ನಾವು ಆರಾಧಿಸುವ ಭಗವಂತ**

ನಾವು ಆರಾಧಿಸುವ ಭಗವಂತ ಕೇವಲ ದೂರದಲ್ಲಿರುವ ವಿಶ್ವವ್ಯಾಪ್ತಿಯನ್ನು ಮೀರಿದ ದೈವೀ ನೈಜತೆಯಷ್ಟೇ ಅಲ್ಲ, ಆದರೆ ಈ ವಿಶ್ವದಲ್ಲಿ ಅರ್ಧಪರದೆಯ ಹಿಂದಿರುವ, ನಮಗೆ ಹತ್ತಿರದಲ್ಲಿ ಉಪಸ್ಥಿತವಿರುವ ದೈವೀ ಪ್ರಕಟಣೆಯಾಗಿದ್ದಾನೆ. ಜೀವನ ಇನ್ನೂ ಪೂರ್ತಿಯಾಗಿರದ ಭಗವಂತನ ಪ್ರಕಟಣೆಯ ಕ್ಷೇತ್ರ: ಇಲ್ಲಿ ಜೀವನದಲ್ಲಿ, ಪೃಥ್ವಿಯ ಮೇಲೆ, ದೇಹದಲ್ಲಿ– ಇಹೈವ ಎಂದು ಉಪನಿಷತ್ತು ಒತ್ತಾಯಪಡಿಸುತ್ತದೆ– ದೇವ ಪ್ರಮುಖನೆದುರಿಗಿರುವ ಪರದೆಯನ್ನು ನಾವು ತೆಗೆದು ಹಾಕಬೇಕು, ಇಲ್ಲಿ ನಾವು ಅವನ ವಿಶ್ವಾತೀತ ಶ್ರೇಷ್ಠತೆಯನ್ನು, ಪ್ರಕಾಶವನ್ನು ಹಾಗೂ ಮಾಧುರ್ಯವನ್ನು ನಮ್ಮ ಪ್ರಜ್ಞೆಗೆ ನಿಜವಾದದ್ದನ್ನಾಗಿ ಮಾಡಬೇಕು ಮತ್ತು ಸಾಧ್ಯವಿದ್ದಷ್ಟರ ಮಟ್ಟಿಗೆ ಅಭಿವ್ಯಕ್ತಗೊಳಿಸಬೇಕು. ಆಗ ನಮ್ಮ ಯೋಗ ಜೀವನವನ್ನು ಒಪ್ಪಿಕೊಳ್ಳಬೇಕು, ಅದರಿಂದಾಗಿ ಅದನ್ನು ಅಂತಿಮವಾಗಿ ಪರಿವರ್ತನೆಗೆ ಒಳಪಡಿಸುವಂತಾಗುವುದು. ಈ ಒಪ್ಪಿಕೊಳ್ಳುವಿಕೆ ನಮ್ಮ ಹೋರಾಟಕ್ಕೆ ಅಧಿಕವಾಗಿ ಸೇರಿಸಬಹುದಾದ ತೊಂದರೆಗಳಿಂದ ಕುಗ್ಗಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಆ ಮಾರ್ಗ ಹೆಚ್ಚು ಒರಟಾದದ್ದು, ನಮ್ಮ ಪ್ರಯತ್ನ ಹೆಚ್ಚು ಸಂಕೀರ್ಣವಾದದ್ದು ಹಾಗೂ ದಿಗ್ಭ್ರಮೆಗೊಳಪಡಿಸುವಂತಹದು ಆಗಿದ್ದರೂ ನಮಗೆ ದೊರಕುವ ಪರಿಹಾರವೆಂದರೆ ಕೆಲವೊಂದು ಬಿಂದುಗಳಲ್ಲಿ ಹಾದು ಹೋದಾಗ ಭವ್ಯ ಅನುಕೂಲತೆಯ ಲಾಭ ಪಡೆಯುತ್ತೇವೆ. ಏಕೆಂದರೆ ನಮ್ಮ ಮನಸ್ಸುಗಳು ಕೇಂದ್ರ ದರ್ಶನದಲ್ಲಿ ತರ್ಕಬದ್ಧವಾಗಿ ಸ್ಥಿರಗೊಂಡಾಗ, ಏಕೈಕವಾದುದನ್ನು ಬೆಂಬತ್ತಲು ನಮ್ಮ ಸಂಕಲ್ಪಗಳು ಒಟ್ಟಿನಲ್ಲಿ ಪರಿವರ್ತನೆಗೊಂಡಾಗ ದೈವೀ ಜೀವನ ಸಹಾಯಕವಾಗುತ್ತದೆ.

**(CWSA, 23/73–74)** **– ಶ್ರೀ ಅರವಿಂದರು**

*

**ಪ್ರಾತಿನಿಧಿಕವಾದ ಒಂದು ಮನುಕುಲ**

ಮನುಷ್ಯ ಜೀವನವನ್ನು ಒಪ್ಪಿಕೊಂಡು ತನ್ನದೇ ಭಾರವನ್ನು ಹೊರಬೇಕಷ್ಟೇ ಅಲ್ಲ, ಆದರೆ ಅದರೊಂದಿಗೆ ಜಗತ್ತಿನ ಭಾರದ ಶ್ರೇಷ್ಠ ಭಾಗವನ್ನೂ ಕೂಡ, ತನ್ನದೇ ಸಾಕಷ್ಟು ದೊಡ್ಡ ಭಾರದ ಮುಂದುವರಿಕೆಯೆಂದು, ಹೊರಬೇಕಾಗುತ್ತದೆ. ಇತರ ವಿಷಯಗಳಿಗಿಂತ ಹೆಚ್ಚಾಗಿ ಅವನ ಯೋಗ ಸಮರದ ಸ್ವಭಾವವಿರುವುದನ್ನು ಹೆಚ್ಚಿನ ರೀತಿಯಲ್ಲಿ ಹೊಂದಿರುತ್ತದೆ, ಆದರೆ ಇದು ಕೇವಲ ವೈಯಕ್ತಿಕ ಸಮರವಷ್ಟೇ ಅಲ್ಲ, ದೇಶದ ಬಹಳಷ್ಟು ಭಾಗದಲ್ಲಿ ಸಮರದ ಸ್ಪರ್ಧೆಯನ್ನು ನಡೆಸುವುದಾಗಿರುತ್ತದೆ. ಅವನು ತನ್ನಲ್ಲಿ ಅಹಂಭಾವದ ಮಿಥ್ಯೆ ಹಾಗೂ ಅಸ್ತವ್ಯಸ್ತತೆಗಳ ಮೇಲೆ ಜಯ ಸಾಧಿಸಬೇಕಷ್ಟೇ ಅಲ್ಲ ಆದರೆ ಜಗತ್ತಿನಲ್ಲಿ ಅವೇ ವಿರೋಧೀ, ಬರಿದಾಗಿಸಲಾಗದ ಶಕ್ತಿಗಳು ಪ್ರಾತಿನಿಧಿಕವಾದವುಗಳು ಎಂದು ಅವುಗಳ ಮೇಲೆ ಜಯಸಾಧಿಸಬೇಕಾಗುತ್ತದೆ. ಅವುಗಳ ಪ್ರಾತಿನಿಧಿಕ ಗುಣಲಕ್ಷಣ, ತಡೆಒಡ್ಡಲು ಅವುಗಳಿಗೆ ಹೆಚ್ಚಿನ ರೀತಿಯಲ್ಲಿರುವ ಹಟಮಾರಿ ಸಾಮರ್ಥ್ಯವನ್ನು ಕೊಡುತ್ತದೆ, ಮರಳಿ ಬರುವುದಕ್ಕೆ ಬಹುಮಟ್ಟಿಗೆ ಕೊನೆಯಿರದ ಹಕ್ಕನ್ನು ಕೊಡುತ್ತದೆ. ಬಹಳಷ್ಟು ಸಲ ಅವನು ಪಟ್ಟುಹಿಡಿದು ತನ್ನದೇ ವೈಯಕ್ತಿಕ ಸಮರದಲ್ಲಿ ಜಯಸಾಧಿಸಿದ್ದೇನೆ ಎಂಬುದನ್ನು ಕಂಡುಕೊಂಡ ನಂತರವೂ ಅವನಿನ್ನೂ ತೋರಿಕೆಗೆ ನಿಂತುಹೋಗದ ಸಮರದಲ್ಲಿ ಮತ್ತೆ ಮತ್ತೆ ಜಯಸಾಧಿಸಬೇಕು, ಏಕೆಂದರೆ ಅವನ ಅಸ್ತಿತ್ವ ಈಗಾಗಲೆ ಎಷ್ಟೊಂದು ವಿಸ್ತಾರಗೊಂಡಿರುತ್ತದೆ ಎಂದರೆ ಅದು ಅದರ ಸರಿಯಾಗಿ ವ್ಯಾಖಿಸಲಾದ ಆವಶ್ಯಕತೆಗಳು ಹಾಗೂ ಅನುಭವಗಳು ಇವುಗಳಿರುವ ಕೇವಲ ಅವನ ಸತ್ತೆಯನ್ನಷ್ಟೇ ಒಳಗೊಂಡಿರುವುದಿಲ್ಲ, ಆದರೆ ಇತರರ ಸತ್ತೆಯ ಒಗ್ಗಟ್ಟಿನಲ್ಲಿ ಇರುತ್ತದೆ, ಏಕೆಂದರೆ ಅವನು ವಿಶ್ವವನ್ನು ತನ್ನಲ್ಲಿಯೇ ಒಳಗೊಂಡಿರುತ್ತಾನೆ. ಅವನಿಗೆ ಹಾಗೆಯೇ ಆತ್ಮವನ್ನು ಅರಸುವ ಎಲ್ಲರಿಗೆ ಪರಿಹಾರ ಕಂಡುಕೊಳ್ಳಲು ತರ್ಕದ ವಿರೋಧಗಳು, ಇಂದ್ರಿಯಗಳ ಅಂಟಿಕೊಳ್ಳುವಿಕೆ, ಹೃದಯದ ಪ್ರಕ್ಷುಬ್ಧತೆ, ಆಸೆಗಳ ಹೊಂಚುದಾಳಿ ನಡೆಸುವಿಕೆ, ದೇಹದ ಅಡ್ಡಿಮಾಡುವಿಕೆ ಇವೆಲ್ಲವನ್ನು ಅರ್ಪಿಸಲಾಗಿರುತ್ತದೆ, ಆದರೆ ಅವುಗಳ ಪರಸ್ಪರ ಆಂತರಿಕ ಸಂಘರ್ಷಗಳು ಹಾಗೂ ಅವನ ಗುರಿಗೆ ಇರುವ ಅಡೆತಡೆ ಇವುಗಳೊಂದಿಗೆ ಇನ್ನೊಂದು ನಮೂನೆಯಲ್ಲಿ ವ್ಯವಹರಿಸಬೇಕಾಗುತ್ತದೆ, ಏಕೆಂದರೆ ಈ ಎಲ್ಲ ಬಂಡಾಯವೇಳುವ

ಮೂಲವಸ್ತುವನ್ನು ನಿರ್ವಹಿಸಲು ಅವನು ಅನಂತಪಟ್ಟು ಹೆಚ್ಚು ಪರಿಪೂರ್ಣತೆಯತ್ತ ತಲುಪಬೇಕಾಗುತ್ತದೆ. ದೈವೀ ಸಿದ್ಧಿಗಾಗಿ ಹಾಗೂ ಪ್ರಕಟಣೆಗಾಗಿ ಅವು ಉಪಕರಣಗಳೆಂದು ಒಪ್ಪಿಕೊಂಡು ಅವನು ಅವುಗಳ ಗಲಾಟೆ ಮಾಡುವ ತಕರಾರನ್ನು ಮಾರ್ಪಡಿಸಬೇಕು, ಅವುಗಳ ದಟ್ಟ ಅಹಂಕಾರವನ್ನು ಜ್ಞಾನೋದಯಕ್ಕೊಳಪಡಿಸಬೇಕು, ಅವುಗಳನ್ನು ಪ್ರತ್ಯೇಕವಾಗಿ ಹಾಗೂ ಒಟ್ಟಿನಲ್ಲಿ ರೂಪಪರಿವರ್ತನೆಗೆ ಒಳಪಡಿಸಬೇಕು, ಅವುಗಳಲ್ಲಿಯೇ ಹಾಗೂ ಒಂದು ಇನ್ನೊಂದರೊಡನೆ ಸಾಮರಸ್ಯದಲ್ಲಿ ಇರುವಂತೆ ಮಾಡಬೇಕು– ಸಮಗ್ರವಾಗಿ ಯಾವ ಕಾಳನ್ನೂ, ಯಾವ ಎಳೆಯನ್ನೂ, ಯಾವುದೇ ಕಂಪನವನ್ನು ಸೇರಿಸದಿರಬೇಕು, ಅಪರಿಪೂರ್ಣತೆಯ ಅಣುಮಾತ್ರದಷ್ಟನ್ನು ಕೂಡ ಬಿಟ್ಟು ಕೊಡಬಾರದು. ಒಂದು ಪ್ರತ್ಯೇಕ ಇಲ್ಲವೆ ಆ ಬಗೆಯದು ಒಂದರ ನಂತರಂತೆ ಬರುವ ಏಕಾಗ್ರತೆಯಿರಬೇಕು, ಅದು ತಾತ್ಕಾಲಿಕ ಅನುಕೂಲತೆ, ಅದರ ಉಪಯೋಗ ಮುಗಿದ ನಂತರ ಅದನ್ನು ಬಿಟ್ಟುಕೊಡಬೇಕು. ಅವನು ಯಾವುದರತ್ತ ಶ್ರಮಪಡಬೇಕಾಗಿದೆಯೋ ಅದಕ್ಕಾಗಿ ಎಲ್ಲ ರೀತಿಯಿಂದ ಏಕಾಗ್ರತೆಯಲ್ಲಿರುವುದು ಕಠಿಣವಾದ ಸಿದ್ಧಿಯಾಗಿರುತ್ತದೆ.

**(CWSA, 23/77–78)** **– ಶ್ರೀ ಅರವಿಂದರು**

*

**ಯಾವುದೇ ಯೋಗಕ್ಕೆ ಏಕಾಗ್ರತೆ ಮೊದಲ ಷರತ್ತು**

ನಿಜವಾಗಿ ಯಾವುದೇ ಯೋಗಕ್ಕೆ ಏಕಾಗ್ರತೆ ಮೊದಲ ಷರತ್ತು ಅದು ಸಮಗ್ರಯೋಗದ ಸ್ವಭಾವವೇ ಆಗಿರುತ್ತದೆ. ಯೋಚನೆ, ಭಾವೋನ್ಮಾದನೆಗಳು, ಏಕೈಕ ವಿಚಾರದ ಮೇಲೆ ಸಂಕಲ್ಪ, ಉದ್ದೇಶ, ಸ್ಥಿತಿ, ಆಂತರಿಕ ಚಲನೆ ಇಲ್ಲವೆ ತತ್ವ ಇವುಗಳ ಮೇಲೆ ಒಂದು ಪ್ರತ್ಯೇಕ ಬಲವತ್ತರವಾದ ಸ್ಥಿರಪಡಿಸುವಿಕೆ ಇವು ನಿಸ್ಸಂಶಯವಾಗಿ ಇಲ್ಲಿಯೂ ಕೂಡ ಅವಶ್ಯವಾಗಿರುತ್ತವೆ, ಆದರೆ ಇದು ಕೇವಲ ಗೌಣ ಸಹಾಯಕ ವಿಧಾನ. ಒಂದು ವಿಸ್ತಾರವಾದ, ಹೆಚ್ಚು ಬೃಹತ್ತಾದ ತೆರೆದಿರಿಸಿಕೊಳ್ಳುವಿಕೆ, ಇಡೀ ಸತ್ತೆ ಅದರ ಎಲ್ಲ ಭಾಗಗಳಲ್ಲಿ, ಅದರ ಎಲ್ಲ ಸಾಮರ್ಥ್ಯಗಳ ಮೂಲಕ ಸಾಮರಸ್ಯಗೊಂಡ ಏಕಾಗ್ರತೆ ಇದೆಲ್ಲವನ್ನೂ ಎಲ್ಲವೂ ಆದ ದೈವೀ ಏಕೈಕನಾದವನ ಮೇಲೆ ಕೈಕೊಳ್ಳುವಿಕೆ ಈ ಯೋಗದ ಭವ್ಯ ಕ್ರಿಯೆಯಾಗಿರುತ್ತದೆ, ಅದಿಲ್ಲದೆ ಅದು ತನ್ನ ಉದ್ದೇಶವನ್ನು ಸಿದ್ಧಿಸಿಕೊಳ್ಳಲಾರದು.

ಏಕೆಂದರೆ ದೈವೀ ಏಕೈಕನಾದವನಲ್ಲಿ ಪ್ರಜ್ಞೆ ಆಸೀನವಾಗಿರುತ್ತದೆ ಮತ್ತು ನಾವು ಅಭೀಪ್ಸೆಪಡುವ ಎಲ್ಲದರಲ್ಲಿ ಅದು ಕಾರ್ಯಕೈಕೊಳ್ಳುತ್ತದೆ, ಇದನ್ನೇ ನಾವು ನಮ್ಮ ಸತ್ತೆಯ ಪ್ರತಿಯೊಂದು ಅಂಶದ ಮೇಲೆ ಮತ್ತು ನಮ್ಮ ಸ್ವಭಾವದ ಚಲನೆಯ ಮೇಲೆ ಹೇರುವುದನ್ನು ನಾವು ಅರಸುತ್ತೇವೆ. ಈ ವಿಶಾಲವಾದ ಹಾಗೂ ಏಕಾಗ್ರಗೊಂಡ ಇಡಿಯಾಗಿರುವಿಕೆ ಸಾಧನೆಯ ಸಾರಭೂತ ಗುಣಲಕ್ಷಣ ಮತ್ತು ಅದರ ಗುಣಲಕ್ಷಣ ಅದರ ಆಚರಣೆಯನ್ನು ನಿರ್ಧರಿಸಬೇಕು.

**(CWSA, 23/78–79)** **– ಶ್ರೀ ಅರವಿಂದರು**

*

**ಮೇಲ್ಗಡೆಗಿರುವ ದೈವೀ ಪ್ರಕಾಶ ಕೇಳುವುದೆಲ್ಲ ಅದರ ಕಾರ್ಯವನ್ನು ಪ್ರಾರಂಭಿ–ಸುವುದಾಗಿರುತ್ತದೆ.**

ಜೀವಂತ ಸಿದ್ಧಿಯಲ್ಲಿ, ಹಾಗೂ ದೈವೀ ಏಕೈಕನಾದವನ ಸಾನ್ನಿಧ್ಯ ಸತತ ಇರುವುದರಲ್ಲಿ ಪರಾಕಾಷ್ಠೆ ಕಂಡುಕೊಳ್ಳುವ ಒಂದು ಏಕಾಗ್ರತೆ, ಆ ಏಕಾಗ್ರತೆಯನ್ನು ನಮ್ಮೊಳಗೆ, ನಮ್ಮ ಅರಿವಿಗೆ ಬಂದ ಎಲ್ಲದರಲ್ಲಿ ಕಂಡುಕೊಳ್ಳುವುದು, ಇದಕ್ಕೆ ಯೋಗದಲ್ಲಿ ಜ್ಞಾನ ಹಾಗೂ ಜ್ಞಾನಕ್ಕಾಗಿ ಪ್ರಯತ್ನ ಎಂಬ ಅರ್ಥವನ್ನು ನಾವು ಕೊಡುತ್ತೇವೆ. ಶಾಸ್ತ್ರಗಳನ್ನು ಓದುವುದು ಇಲ್ಲವೆ ಭಗವಂತನನ್ನು ಬೌದ್ಧಿಕವಾಗಿ ಅರ್ಥಮಾಡಿಕೊಳ್ಳುವುದಕ್ಕೆ ತತ್ವಜ್ಞಾನದ ತರ್ಕದ ಮೇಲೆ ಒತ್ತುಕೊಡುವುದು ಇವುಗಳಿಗೆ ಅರ್ಪಿಸಿಕೊಳ್ಳುವುದು ಸಾಕಾಗದು, ಏಕೆಂದರೆ ನಮ್ಮ ದೀರ್ಘಕಾಲದ ಶ್ರಮದ ನಂತರ ಸನಾತನನ್ನು ಕುರಿತು ಹೇಳಿದ್ದೆಲ್ಲವನ್ನೂ ನಾವು ತಿಳಿದುಕೊಳ್ಳಬಹುದು, ಅನಂತನನ್ನು ಕುರಿತು ಯೋಚಿಸಿದ್ದನ್ನೆಲ್ಲ ವಶಪಡಿಸಿಕೊಳ್ಳಬಹುದು, ಆದಾಗ್ಯೂ ಅವನನ್ನು ಕುರಿತು ಏನನ್ನೂ ತಿಳಿದುಕೊಳ್ಳದೆ ಇರಬಹುದು. ಈ ಬೌದ್ಧಿಕ ತಯಾರಿ, ನಿಜವಾಗಿ, ಸಾಮರ್ಥ್ಯಪೂರ್ಣ ಯೋಗದ ಮೊದಲ ಹಂತವಾಗಬಹುದು, ಆದರೆ ಅದು ಅತ್ಯಗತ್ಯದ್ದಾಗಿರುವುದಿಲ್ಲ. ಈ ಹೆಜ್ಜೆ ಎಲ್ಲರಿಗೂ ಅವಶ್ಯವಾಗಿರುವುದಿಲ್ಲ. ಎಲ್ಲರೂ ಕೈಗೆತ್ತಿಕೊಳ್ಳಿರೆಂದು ಅವರಿಗೆ ಕರೆಕೊಡಬೇಕಾಗಿರುವುದಿಲ್ಲ. ಊಹನ ಇಲ್ಲವೆ ಧ್ಯಾನಸ್ಥ ಸ್ಥಿತಿ ಇವುಗಳಿಂದ ತರ್ಕ ಅದರ ಅತ್ಯಗತ್ಯವಾದ ಷರತ್ತು ಇಲ್ಲವೆ ಬಂಧನಕಾರಕ ಪ್ರಾಥಮಿಕ ಹಂತವಾಗಿದ್ದರೆ ಅಲ್ಪಸಂಖ್ಯೆಯಲ್ಲಿರುವ ಕೆಲವರನ್ನು ಹೊರತುಪಡಿಸಿ ಈ ಯೋಗ ಉಳಿದವರಿಗೆ ಅಸಾಧ್ಯವಾಗಿ ಬಿಡುತ್ತಿತ್ತು.

ಮೇಲ್ಗಡೆಗಿರುವ ಪ್ರಕಾಶ ತನ್ನ ಕಾರ್ಯವನ್ನು ಪ್ರಾರಂಭಿಸಬಹುದೇ ಎಂದು ನಮ್ಮನ್ನು ಕೇಳುವುದು ಆತ್ಮದ ಒಂದು ಕರೆಯಾಗಿರುತ್ತದೆ ಮತ್ತು ಮನಸ್ಸಿನಲ್ಲಿ ಆಧಾರದ ಸಾಕಷ್ಟು ಅಗತ್ಯವಾದ ವಿಷಯವಾಗಿರುತ್ತದೆ. ಭಗವಂತನನ್ನು ಕುರಿತು ಒತ್ತುನೀಡುವ ಯೋಚನೆ, ಕ್ರಿಯಾಶೀಲ ಭಾಗಗಳಲ್ಲಿ ಅದಕ್ಕೆ ಅನುಗುಣವಾದ ಸಂಕಲ್ಪ, ಅಭೀಪ್ಸೆ, ನಂಬಿಕೆ, ಹೃದಯದ ಒಂದು ಆವಶ್ಯಕತೆ ಇವುಗಳ ಮೂಲಕ ಈ ಆಧಾರವನ್ನು ತಲುಪಬಹುದು.

ಎಲ್ಲವೂ ಒಂದೇ ಶ್ರುತಿಯಲ್ಲಿ ಇಲ್ಲವೆ ಸಮಾನಲಯಬದ್ಧತೆಯಲ್ಲಿ ಚಲಿಸದಿದ್ದರೆ ಇವುಗಳಲ್ಲಿ ಯಾವುದಾದರೊಂದು ಕರೆದೊಯ್ಯಬಹುದು ಇಲ್ಲವೆ ಪ್ರಬಲತರ ಅಂಶವಾಗಬಹುದು. ಆ ವಿಚಾರ ಪ್ರಾರಂಭದಲ್ಲಿ ತೃಪ್ತಿಕರವಲ್ಲದ್ದು ಆಗಿರಬಹುದು ಮತ್ತು ಆಗಿರಲೇಬೇಕು, ಅಭೀಪ್ಸೆ ಸಂಕುಚಿತ ಹಾಗೂ ಅಪರಿಪೂರ್ಣ ಆಗಿರಬಹುದು, ನಂಬಿಕೆ ಬಡವಾದ ರೀತಿಯಲ್ಲಿ ಜ್ಞಾನೋದಯ ಪಡೆದದ್ದು ಇಲ್ಲವೆ ಜ್ಞಾನದ ಬಂಡೆಗಲ್ಲಿನ ಮೇಲೆ ನಿಶ್ಚಿತವಾಗಿ ಸ್ಥಾಪಿತಗೊಂಡಿರದ ಹಾಗಿರಬಹುದು, ಹೊಯ್ದಾಡುವಂತಹದು, ಅನಿಶ್ಚಿತ, ಸುಲಭವಾಗಿ ಕುಗ್ಗುವಂತಹದು ಕೂಡ ಆಗಿರಬಹುದು, ಬಹಳಷ್ಟು ಸಲ ಅದನ್ನು ನಂದಿಸುವುದು ಕೂಡ ಆಗಬಹುದು, ಮತ್ತೆ ಅದನ್ನು ಹೊತ್ತಿಸುವ ಆವಶ್ಯಕತೆ ಇದೆ, ಅದಕ್ಕಿರುವ ತೊಂದರೆ ಗಾಳಿಯಾಡುತ್ತಿರುವ ಕಣಿವೆಯಲ್ಲಿ ಪಂಜು ಹೊತ್ತಿಸಲು ಬೇಕಾಗುವಷ್ಟು ಇದೆ. ಆದರೆ ಒಮ್ಮೆ ಆಳವಾದ ಅಂತರಂಗದಿಂದ ದೃಢನಿಶ್ಚಯದರ ಸ್ವಯಂ–ಮುಡಿಪಾಗಿರಿಸುವಿಕೆ, ಆತ್ಮದ ಕರೆ ಅಲ್ಲಿ ಎಚ್ಚತ್ತುಕೊಂಡಿದ್ದರೆ ಈ ಎಲ್ಲ ಸಾಕಷ್ಟಿಲ್ಲದ ವಿಷಯಗಳು ದೈವೀ ಉದ್ದೇಶಕ್ಕೆ ಉಪಕರಣಗಳಾಗಬಲ್ಲವು. ಆದ್ದರಿಂದ ವಿವೇಕಿಗಳಾದವರು, ಯಾವಾಗಲೂ, ಭಗವಂತನತ್ತ ಇರುವ ಮನುಷ್ಯನ ಮಾರ್ಗಗಳನ್ನು ಮಿತಿಗೊಳಪಡಿಸಲು ಸಮ್ಮತಿಸುವುದಿಲ್ಲ; ಅವರು ಅವನ ಪ್ರವೇಶದ ವಿರುದ್ಧ ಅತ್ಯಂತ ಸಂಕುಚಿತ ಪ್ರವೇಶದ್ವಾರವನ್ನಾಗಲಿ, ಅತ್ಯಂತ ಕೆಳಸ್ತರದ ಅಂಧಕಾರವಿರುವ ಹಿಂಬಾಗಿಲನ್ನಾಗಲಿ ಅತ್ಯಂತ ವಿನಮ್ರವಾದ ಸಣ್ಣ ಬಾಗಿಲ (wicket gate)ವನ್ನಾಗಲಿ ಮುಚ್ಚಿಡುವುದಿಲ್ಲ. ಯಾವುದೇ ಹೆಸರು, ಯಾವುದೇ ರೂಪ, ಯಾವುದೇ ಸಂಕೇತ, ಯಾವುದೇ ಅರ್ಪಣೆ ಸಾಕಷ್ಟಾಗಿದೆ ಹಾಗೂ ಅದರೊಂದಿಗೆ ಮುಡಿಪಾಗಿರಿಸುವಿಕೆ ಇದೆ ಎಂದು ನಿರ್ದಿಷ್ಟ ಸ್ಥಿತಿಯಲ್ಲಿ ಇರಿಸಲಾಗಿರುತ್ತದೆ,

ಏಕೆಂದರೆ ಭಗವಂತ ಅರಸುತ್ತಿರುವವನ ಹೃದಯದಲ್ಲಿ ತಾನಿರುವುದನ್ನು ಅರಿತುಕೊಳ್ಳುತ್ತಾನೆ ಮತ್ತು ಅವನ ಯಜ್ಞಾಹುತಿಯನ್ನು ಒಪ್ಪಿಕೊಳ್ಳುತ್ತಾನೆ.

**(CWSA, 23/81–82)** **– ಶ್ರೀ ಅರವಿಂದರು**

*

**ಆಸೆಯ ಆತ್ಮವನ್ನು ಇಲ್ಲವೆ ಹಂಬಲಿಸುವ ಜೀವಶಕ್ತಿಯನ್ನು ತರಬೇತಿಗೊಳಪಡಿಸುವುದು**

ನಮ್ಮಲ್ಲಿ ಹಂಬಲಿಸುವ ಈ ಜೀವಶಕ್ತಿಯನ್ನು ಮೊದಲು ಒಪ್ಪಿಕೊಳ್ಳಬೇಕಾಗುತ್ತದೆ, ಆದರೆ ಅದನ್ನು ಪರಿವರ್ತನೆಗೆ ಒಳಪಡಿಸಬಹುದೆಂದು ಮಾತ್ರ ಹಾಗೆ ಮಾಡಲಾಗುತ್ತದೆ. ಪ್ರಾರಂಭದಿಂದಲೇ ಇತರ ಎಲ್ಲ ಆಸೆಗಳನ್ನು ತ್ಯಜಿಸಲು ಮತ್ತು ಭಗವಂತನಿಗಾಗಿ ಇರುವ ಭಾವೋನ್ಮಾದದಿಂದ ಅವನ ಮೇಲೆ ಏಕಾಗ್ರತೆ ವಹಿಸಲು ಅದಕ್ಕೆ ಕಲಿಸಿಕೊಡಬೇಕಾಗುತ್ತದೆ. ಈ ಗಂಭೀರ ಅಂಶದ ಲಾಭ ಪಡೆದು ಅದನ್ನು ಆಸೆಗೆ ಕಲಿಸಿಕೊಡಬೇಕು, ಅದರದೇ ಪ್ರತ್ಯೇಕತೆಗಾಗಿ ಅಲ್ಲ, ಜಗತ್ತಿನಲ್ಲಿ ಹಾಗೂ ನಮ್ಮಲ್ಲಿ ಇರುವ ಭಗವಂತನಿಗಾಗಿ ಕಲಿಸಿಕೊಡಬೇಕು. ಅದು ಯಾವುದೇ ವೈಯಕ್ತಿಕ ಆಧ್ಯಾತ್ಮಿಕ ಲಾಭದ ಮೇಲೆ ತನ್ನನ್ನು ಸ್ಥಿರಗೊಳಿಸಬಾರದು, ಆದಾಗ್ಯೂ ಸಾಧ್ಯವಿದ್ದ ಎಲ್ಲ ಆಧ್ಯಾತ್ಮಿಕ ಲಾಭಗಳ ಬಗ್ಗೆ ನಮ್ಮಲ್ಲಿ ನಿಶ್ಚಿತತೆ ಇರುತ್ತದೆ, ಆದರೆ ನಮ್ಮಲ್ಲಿ ಹಾಗೂ ಇತರರಲ್ಲಿ ಶ್ರೇಷ್ಠ ಕಾರ್ಯಕೈಕೊಳ್ಳುವುದರ ಮೇಲೆ, ಜಗತ್ತಿನಲ್ಲಿ ಭಗವಂತನ ವೈಭವದಿಂದ ಕೂಡಿದ ನೆರವೇರಿಕೆಯಾಗಲಿರುವ ಬರಲಿರುವ ಪ್ರಕಟಣೆಯ ಮೇಲೆ, ಅರಸಬೇಕಾದ ಹಾಗೂ ಜೀವಿಸಬೇಕಾದ ಎಂದೆಂದಿಗೂ ಸಿಂಹಾಸನಾರೋಹಣ ಮಾಡಿದ ದೈವೀ ಸತ್ಯದ ಮೇಲೆ ಲಾಭ ಗಳಿಸುವುದಿರುತ್ತದೆ, ಆದರೆ ಕೊನೆಯದಾದ, ಅದಕ್ಕೆ ಬಹಳ ಕಠಿಣವಾದ, ಸರಿಯಾದ ಉದ್ದೇಶದಿಂದ ಅರಸುವುದಕ್ಕಿಂತಲೂ ಹೆಚ್ಚು ಕಠಿಣವಾದ ಅದಕ್ಕೆ ಸರಿಯಾದ ಕ್ರಮದಲ್ಲಿ ಅರಸುವುದನ್ನು ಕಲಿಸಿಕೊಡಬೇಕು, ಏಕೆಂದರೆ ಅದು ಬಯಸುವ ರೀತಿಯನ್ನು ಕಲಿತುಕೊಳ್ಳಬೇಕು, ತನ್ನದೇ ಅಹಂಭಾವದ ರೀತಿಯಲ್ಲಿ ಕಲಿತುಕೊಳ್ಳುವುದಲ್ಲ, ಆದರೆ ಭಗವಂತನ ರೀತಿಯಲ್ಲಿ ಕಲಿತುಕೊಳ್ಳಬೇಕು. ಬಲವತ್ತರವಾದ ಪ್ರತ್ಯೇಕಗೊಳಿಸುವ ಸಂಕಲ್ಪ ಯಾವಾಗಲೂ ಒತ್ತುಕೊಡುವ ಹಾಗೆ ಅದು ಇನ್ನು ಮುಂದೆ ಒತ್ತು ನೀಡಬಾರದು. ಈ ಒತ್ತುನೀಡುವಿಕೆ ನೆರವೇರಿಕೆ ಕಂಡುಕೊಳ್ಳುವುದಕ್ಕೆ ತನ್ನದೇ ಕ್ರಮದ ಮೇಲೆ, ವಶಪಡಿಸಿಕೊಳ್ಳುವ ತನ್ನದೇ ಕನಸಿನ ಮೇಲೆ, ಸರಿಯಾದದ್ದು ಹಾಗೂ ಬಯಸಬೇಕಾದದ್ದು ಎನ್ನುವ

ತನ್ನದೇ ವಿಚಾರದ ಮೇಲೆ ಇರುತ್ತದೆ. ಅದು ಹೆಚ್ಚು ಭವ್ಯವಾದ, ಶ್ರೇಷ್ಠತರವಾದ ದೈವೀ ಸಂಕಲ್ಪದ ನೆರವೇರಿಕೆಗಾಗಿ ಹಾತೊರೆಯಬೇಕು, ಕಡಿಮೆ ಅಭಿರುಚಿ ಹೊಂದಿದ ಹಾಗೂ ಅಜ್ಞಾನದ ಮಾರ್ಗದರ್ಶನದ ಮೇಲೆ ತಾಳ್ಮೆಯಿಂದ ಕಾದುಕೊಂಡಿರಬೇಕು. ಆ ಭವ್ಯ ಚಂಚಲ ಪೀಡಕ ಹಾಗೂ ಮನುಷ್ಯನಿಗೆ ತೊಂದರೆ ಕೊಡುವ, ಪ್ರತಿಯೊಂದು ಎಡವುವಿಕೆಗೆ ಕಾರಣವಾಗಿರುವ ಬಯಕೆ ಈ ತರಬೇತಿ ಪಡೆದು ದೈವೀ ಹೋಲಿಕೆಯದಾಗುವುದಕ್ಕೆ ಪರಿವರ್ತನೆ ಹೊಂದಲು ಯೋಗ್ಯವಾಗುತ್ತದೆ.

**(CWSA, 23/83–84)** **– ಶ್ರೀ ಅರವಿಂದರು**

*

**ದೈವೀಮನುಕುಲ ಇಲ್ಲವೆ ಅತಿಮಾನಸ ಕುಲದ ವ್ಯಾಖ್ಯೆ**

ಯೋಗದಲ್ಲಿ ನಮ್ಮ ಉದ್ದೇಶ ಸೀಮಿತ, ಬಾಹ್ಯದತ್ತ ನೋಡುವ ಅಹಂಕಾರವನ್ನು ಗಡೀಪಾರು ಮಾಡಿ ಅದರ ಸ್ಥಾನದಲ್ಲಿ ಭಗವಂತನನ್ನು ಸಿಂಹಾಸನಕ್ಕೇರಿಸುವುದಾಗಿದೆ, ಅವನು ಅಲ್ಲಿ ಸ್ವಭಾವದ ಮೇಲೆ ಆಳಿಕೆ ನಡೆಸುವ ನಿವಾಸಿಯಾಗಿರುತ್ತಾನೆ. ಇದರ ಅರ್ಥ ಮೊದಲಿಗೆ ಆಸೆಯ ಉತ್ತರಾಧಿಕಾರವನ್ನು ತಪ್ಪಿಸುವುದಾಗಿದೆ, ಇನ್ನು ಮುಂದೆ ಮಾನವ ಉದ್ದೇಶದ ಮೇಲೆ ಆಳಿಕೆ ನಡೆಸುವ ಆಸೆಯಿಂದ ತಂದುಕೊಳ್ಳುವ ಸಂತೋಷವನ್ನು ಒಪ್ಪಿಕೊಳ್ಳಬಾರದು. ಆಧ್ಯಾತ್ಮಿಕ ಜೀವನ ತನ್ನ ಪೋಷಣೆಯನ್ನು ಆಸೆಯಿಂದ ಎಳೆದುಕೊಳ್ಳುವುದಿಲ್ಲ. ಆದರೆ ಪರಿಶುದ್ಧ, ಸ್ವಾರ್ಥರಹಿತ ಸಾರಭೂತ ಅಸ್ತಿತ್ವದ ಆನಂದದಿಂದ ಎಳೆದುಕೊಳ್ಳುತ್ತದೆ. ಆಸೆಯನ್ನೇ ಮುದ್ರೆಯಾಗಿರಿಸಿಕೊಂಡ ನಮ್ಮೊಳಗಿರುವ ಪ್ರಾಣಿಕ ಸ್ವಭಾವವಷ್ಟೇ ಅಲ್ಲ, ಆದರೆ ಮಾನಸಿಕ ಸತ್ತೆ ಕೂಡ ಹೊಸ ಜನ್ಮಕ್ಕೆ ಮತ್ತು ರೂಪಪರಿವರ್ತನೆಗೊಳಿಸುವ ಬದಲಾವಣೆಗೆ ಒಳಗಾಗಬೇಕು. ನಮ್ಮ ವಿಭಜನೆಗೊಳಗಾದ, ಅಹಂಭಾವದ ಹಾಗೂ ಅಜ್ಞಾನದ ಯೋಚನೆ ಮತ್ತು ಬುದ್ಧಿಮತ್ತೆ ಮಾಯವಾಗಬೇಕು, ಅದರ ಸ್ಥಾನದಲ್ಲಿ ಛಾಯಾರಹಿತ ದೈವೀ ಜ್ಞಾನೋದಯದ ವಿಶ್ವವ್ಯಾಪಿ, ದೋಷರಹಿತ ಲೀಲೆ ಪ್ರವಹಿಸಬೇಕು. ಅದು ಕೊನೆಗೆ ತಡಕಾಡುವ ಅರ್ಧ ಸತ್ಯ ಮತ್ತು ಎಡವುವ ದೋಷ ಇವುಗಳಿಂದ ಮುಕ್ತವಾಗಿ ಸ್ವಾಭಾವಿಕ, ಸ್ವ–ಅಸ್ತಿತ್ವದಲ್ಲಿರುವ ದೈವೀ ಸತ್ಯಪ್ರಜ್ಞೆಯಾಗಿ ಪರಾಕಾಷ್ಠೆ ಪಡೆಯುತ್ತದೆ. ನಮ್ಮ ಗೊಂದಲಕ್ಕೀಡಾದ, ದಿಕ್ಕುತೋರದಂತಾದ, ಅಹಂಕಾರವನ್ನು

ಕೇಂದ್ರದಲ್ಲಿರಿಸಿಕೊಂಡಿರುವ ಸಂಕಲ್ಪ ಹಾಗೂ ಕ್ರಿಯೆ ನಿಂತು ಹೋಗಬೇಕು ಮತ್ತು ಅದು ತೀವ್ರಗತಿಯಿಂದ ಸಾಮರ್ಥ್ಯಪೂರ್ಣ ಸ್ಪಷ್ಟವಾಗಿರುವ ಸ್ವಯಂಚಾಲಿತ, ದೈವೀರೀತಿಯಿರುವ ಚಲನೆಯ ಹಾಗೂ ಮಾರ್ಗದರ್ಶನ ಪಡೆದ, ಪತಿತವಾಗಿರದ ದೈವೀಶಕ್ತಿಗೆ ಸ್ಥಾನಮಾಡಿಕೊಡಬೇಕು. ನಾವು ಕೈಕೊಳ್ಳುವ ಎಲ್ಲದರಲ್ಲಿ ಪರಮೋಚ್ಚ, ಅವ್ಯೆಯಕ್ತಿಕ ಹೊಯ್ದಾಡದಿರುವ, ಎಡವದಿರುವ ಸಂಕಲ್ಪವನ್ನು ಭಗವಂತನ ಸಂಕಲ್ಪದೊಂದಿಗೆ ಸ್ವಯಂಪ್ರೇರಿತ, ತೊಂದರೆಗೀಡಾಗದ ಒಂದೇ ಶ್ರುತಿಯಲ್ಲಿ ನೆಲೆಗೊಳ್ಳುವಂತೆ ಮತ್ತು ಕ್ರಿಯಾಶೀಲವಾಗುವಂತೆ ಮಾಡಬೇಕು. ನಮ್ಮ ಬಲಹೀನ ಅಹಂಕಾರದ ಭಾವೋನ್ಮಾದಗಳ ತೃಪ್ತಿ ನೀಡದ ಮೇಲ್ಮೈಲೀಲೆಯನ್ನು ಹೊರಗೋಡಿಸಬೇಕು ಮತ್ತು ಅದರ ಬದಲಾಗಿ ತನ್ನ ಸಮಯ ಸನ್ನಿಹಿತವಾಗುವುದನ್ನು ಅವುಗಳ ಹಿಂದೆ ಕಾದುಕೊಂಡಿರುವ ಒಂದು ರಹಸ್ಯ ಆಳವಾದ, ವಿಶಾಲವಾದ ಚೈತ್ಯಹೃದಯವನ್ನು ತೆರೆದು ತೋರಿಸಬೇಕು. ನಮ್ಮ ಎಲ್ಲ ಭಾವನೆಗಳು ಭಗವಂತ ವಾಸಿಸುತ್ತಿರುವ ಈ ಆಂತರಿಕ ಹೃದಯದಿಂದ ಪ್ರಚೋದನೆಗೊಳಗಾಗಿ ನಮ್ಮ ಎಲ್ಲ ಭಾವನೆಗಳು ದೈವೀ ಪ್ರೇಮ ಹಾಗೂ ಅನೇಕ ಕ್ರಿಯಾಕಾರಿ ಆನಂದ ಎಂಬ ಎರಡು ಬಗೆಯಲ್ಲಿ ಸ್ಥಿರ ಹಾಗೂ ಗಾಢ ಚಲನೆಗಳಲ್ಲಿ ರೂಪಾಂತರಕ್ಕೊಳಗಾಗುತ್ತವೆ. ಇದು ದೈವೀ ಮನುಕುಲದ ಇಲ್ಲವೆ ಅತಿಮಾನಸ ಕುಲದ ವ್ಯಾಖ್ಯೆ. ಇದು ಉತ್ಪ್ರೇಕ್ಷೆಗೊಳಗಾಗಿರದ, ಮಾನವ ಬುದ್ಧಿಮತ್ತೆ ಹಾಗೂ ವೈಭವೀಕರಿಸದ ಚೈತನ್ಯ, ಅತಿಮಾನವನ ಮಾದರಿ, ಅವನು ಉತ್ಕ್ರಾಂತಿ ಹೊಂದುವಂತೆ ನಮ್ಮ ಯೋಗದ ಮೂಲಕ ಮಾಡಲು ನಮಗೆ ಕರೆ ಕೊಡಲಾಗಿದೆ.

**(CWSA, 23/90–91)** **– ಶ್ರೀ ಅರವಿಂದರು**

*

## ದೈವೀ ಕರ್ಮಗಳ ಯೋಗ

ಅಹಂಭಾವದಲ್ಲಿ ಜೀವಿಸುವುದಲ್ಲ, ದೇವನಲ್ಲಿ ಜೀವಿಸುವುದು, ವಿಶಾಲ ವ್ಯಾಪ್ತಿಯಲ್ಲಿ ತಳಹದಿ ಕಂಡುಕೊಂಡಿರುವುದು, ಚಿಕ್ಕ ಅಹಂಭಾವದ ಪ್ರಜ್ಞೆಯಲ್ಲಲ್ಲ, ಆದರೆ ಸರ್ವಾತ್ಮನೂ, ವಿಶ್ವಾತೀತನೂ ಆದವನ ಪ್ರಜ್ಞೆಯಲ್ಲಿ ಸ್ಥಾಪಿತ–ಗೊಂಡಿರುವುದು.

ಎಲ್ಲ ಘಟನೆಗಳಿಗೆ, ಎಲ್ಲ ಸತ್ತೆಗಳಿಗೆ ಸಮಭಾವ ಹೊಂದಿರುವುದು ಮತ್ತು ಅವುಗಳ ಬಗ್ಗೆ ಮನುಷ್ಯ ತನ್ನೊಡನೆ ಹಾಗೂ ಭಗವಂತನೊಡನೆ ಏಕವಾಗಿರುವ ಭಾವನೆ ತಂದುಕೊಳ್ಳುವುದು, ಎಲ್ಲವೂ ತನ್ನಲ್ಲಿ ಹಾಗೂ ದೇವನಲ್ಲಿ ಎಲ್ಲದರ ಭಾವನೆ ತಂದುಕೊಳ್ಳುವುದು, ತಾನು ಎಲ್ಲದರಲ್ಲಿಯೂ ಇರುವ ಭಾವನೆ ತಂದುಕೊಳ್ಳುವುದು.

ದೇವನಲ್ಲಿ ಕಾರ್ಯಕೈಕೊಳ್ಳುವುದು, ಅಹಂಕಾರದಲ್ಲಿ ಅಲ್ಲ, ಮತ್ತು ಇಲ್ಲಿ ವೈಯಕ್ತಿಕ ಹಾಗೂ ಮಾಮೂಲಿಯ ಆವಶ್ಯಕತೆಗಳು ಇವುಗಳಿಗೆ ಸಂಬಂಧಿಸಿದ ಕ್ರಿಯೆಯನ್ನು ಆಯ್ದುಕೊಳ್ಳುವುದಲ್ಲ, ಆದರೆ ನಮ್ಮ ಮೇಲ್ಗಡೆಗಿರುವ ಅತ್ಯುಚ್ಚ ದೈವೀ ಸತ್ಯದ ಆಜ್ಞೆಗೆ ವಿಧೇಯತೆಯಿಂದ ಆಯ್ಕೆ ಮಾಡಿಕೊಳ್ಳಬೇಕು. ಅದರ ನಂತರ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಸಾಕಷ್ಟು ತಳಹದಿ ಕಂಡುಕೊಂಡ ನಂತರ ಇನ್ನು ಮುಂದೆ ನಮ್ಮ ಪ್ರತ್ಯೇಕ ಸಂಕಲ್ಪ ಇಲ್ಲವೆ ಚಲನೆಗಳಿಂದ ಕಾರ್ಯಕೈಕೊಳ್ಳದೆ ಇರುವುದು, ಆದರೆ ನಮ್ಮನ್ನು ಮೀರಿ ಹೋಗಿರುವ ದೈವೀಸಂಕಲ್ಪದ ಪ್ರಚೋದನೆ ಹಾಗೂ ಮಾರ್ಗದರ್ಶನಗಳ ಇವುಗಳಡಿಯಲ್ಲಿ ಕ್ರಿಯೆ ಸಂಭವಿಸಲು ಹಾಗೂ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡಬೇಕು. ಕೊನೆಯಲ್ಲಿ ಪರಮೋಚ್ಚ ಪರಿಣಾಮವೆಂದರೆ ದೈವೀಶಕ್ತಿಯಲ್ಲಿ ಜ್ಞಾನ, ಶಕ್ತಿ, ಅಸ್ತಿತ್ವದ ಸಂತೋಷ ಇವುಗಳೊಡನೆ ಉನ್ನತ ಸ್ಥಾನದಲ್ಲಿರುವುದಾಗಿದೆ. ಮರ್ತ್ಯನ ಆಸೆ, ಪ್ರಾಣಿಕ ಹುಟ್ಟುಗುಣ ಹಾಗೂ ಪ್ರಚೋದನೆ ಮತ್ತು ಭ್ರಮಾತ್ಮಕ ಮಾನಸಿಕ ಮುಕ್ತ ಸಂಕಲ್ಪ ಇವುಗಳ ಪ್ರಾಬಲ್ಯಕ್ಕೊಳಗಾದ ಕ್ರಿಯಾಶೀಲ ಚಲನೆಯ ಭಾವನೆ ತಂದು–ಕೊಳ್ಳುವುದಲ್ಲ, ಆದರೆ ಅನಂತ ಸ್ವ–ಜ್ಞಾನದಲ್ಲಿ, ಅಮರ ಸ್ವ–ದಿವ್ಯಾನಂದದಲ್ಲಿ ಕಲ್ಪಿಸಲಾದ ಹಾಗೂ ವಿಕಾಸಕ್ಕೊಳಪಡಿಸಲಾದ ಕ್ರಿಯಾಶೀಲ ಚಲನೆಯ ಭಾವನೆ ತಂದುಕೊಳ್ಳಬೇಕು.

**(CWSA, 23/101)** **– ಶ್ರೀ ಅರವಿಂದರು**

*

**ಯಜ್ಞದ ಸಾರ**

ಯಜ್ಞದ ನಿಜವಾದ ಸಾರ ಸ್ವ–ಬಲಿದಾನ ಮಾಡುವುದಲ್ಲ, ಅದು ಸ್ವ–ಅರ್ಪಣೆ ಮಾಡುವುದಾಗಿದೆ. ಅದರ ಉದ್ದೇಶ ಸ್ವ–ನಿರ್ನಾಮವಲ್ಲ, ಆದರೆ ಸ್ವ–ನೆರವೇರಿಕೆ

ಕಂಡುಕೊಳ್ಳುವುದಾಗಿದೆ; ಅದು ಸ್ವ–ದಂಡನೆಯ ವಿಧಾನವಲ್ಲ, ಆದರೆ ಶ್ರೇಷ್ಠ ಜೀವನದ ವಿಧಾನವಾಗಿದೆ, ಸ್ವ–ಊನಗೊಳಿಸುವುದಲ್ಲ, ಆದರೆ ನಮ್ಮ ಮಾನವ ಸ್ವಾಭಾವಿಕ ಭಾಗಗಳನ್ನು ದೈವೀ ಅಂಗಗಳನ್ನಾಗಿ ಮಾಡುವುದಿದೆ, ಸ್ವ–ಪೀಡೆಯಲ್ಲ, ಆದರೆ ಕಡಿಮೆ ದರ್ಜೆಯ ತೃಪ್ತಿಗಿಂತ ಶ್ರೇಷ್ಠತರ ಆನಂದದತ್ತ ಸಾಗಿ ಹೋಗಲು ಮಾರ್ಗ ಕಂಡುಕೊಳ್ಳುವುದಾಗಿದೆ. ಮೇಲ್ಮೈ ಸ್ವಭಾವದ ಕಚ್ಚಾ ಹಾಗೂ ಅಸ್ತವ್ಯಸ್ತಗೊಂಡ ಭಾಗಕ್ಕೆ ಪ್ರಾರಂಭದಲ್ಲಿ ನೋವು ತಂದುಕೊಡುವ ಒಂದು ವಿಷಯವಿರುತ್ತದೆ, ಅದು ಒತ್ತಾಯದಿಂದ ಬೇಡಲಾದ ಅತ್ಯಗತ್ಯದಾದ ಶಿಸ್ತುಪಾಲನೆ, ಆ ನಿರಾಕರಣೆ ಅಸಂಪೂರ್ಣ ಸ್ಥಿತಿಯಲ್ಲಿರುವ ಅಹಂಕಾರವನ್ನು ಮುಳುಗಿಸಿಬಿಡುವುದಕ್ಕೆ ಅವಶ್ಯವಾಗಿರುತ್ತದೆ. ಆದರೆ ಅದಕ್ಕಾಗಿ ಅಲ್ಲಿ ತೀವ್ರಗತಿಯಲ್ಲಾಗುವ ಭವ್ಯ ಪರಿಹಾರ ನೀಡುವಿಕೆ ಇರುತ್ತದೆ, ಅದೆಂದರೆ ಇತರರಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ ವಿಶ್ವವ್ಯಾಪಿ ಏಕತೆಯಲ್ಲಿ, ವಿಶ್ವಾತೀತ ದಿವ್ಯಾತ್ಮನಾದ ಭಗವಂತನಲ್ಲಿ, ಭಗವಂತನ ಸ್ಪರ್ಶದ ದಿವ್ಯಾನಂದದಲ್ಲಿ ಒಂದು ನಿಜವಾದ ಶ್ರೇಷ್ಠತರ ಇಲ್ಲವೆ ಕಟ್ಟಕಡೆಯ ಸಂಪೂರ್ಣತೆಯನ್ನು ಶೋಧಿಸುವುದಾಗಿದೆ. ನಮ್ಮ ಯಜ್ಞಾಹುತಿ ಏನನ್ನೂ ತಿರುಗಿ ಪಡೆಯದೆ ಇಲ್ಲವೆ ಇನ್ನೊಂದು ಬದಿಯಿಂದ ಫಲಪ್ರದ ಒಪ್ಪಿಗೆ ನೀಡುವಿಕೆಯನ್ನು ಪಡೆಯದೆ ಕೊಡುವಂತಹದಲ್ಲ. ಅದು ಮೈವೆತ್ತ ಆತ್ಮ ಮತ್ತು ನಮ್ಮಲ್ಲಿರುವ ಪ್ರಜ್ಞಾಪೂರ್ಣ ಪ್ರಕೃತಿ ಮತ್ತು ಸನಾತನ ದಿವ್ಯಾತ್ಮ ಇವರ ನಡುವಿನ ವಿನಿಮಯವಾಗಿರುತ್ತದೆ. ತಿರುಗಿ ಬರುವುದನ್ನು ಒತ್ತಾಯದಿಂದ ಬೇಡದಿದ್ದಾಗ್ಯೂ ಅಲ್ಲಿ ನಮ್ಮ ಆಳದಲ್ಲಿ ಜ್ಞಾನವಿರುತ್ತದೆ, ಅದು ಅತ್ಯಗತ್ಯದ್ದಾದ, ಅದ್ಭುತವಾದ ವಿಷಯವನ್ನು ಪ್ರತಿಯಾಗಿ ಪಡೆಯುವುದಾಗಿರುತ್ತದೆ: ದೇವನಿಗೆ ತನ್ನನ್ನು ವ್ಯರ್ಥವಾಗಿ ಕೊಟ್ಟುಕೊಳ್ಳುವು–ದಿರುವುದಿಲ್ಲ ಎಂಬುದನ್ನು ಆತ್ಮ ತಿಳಿದಿರುತ್ತದೆ, ಯಾವುದಕ್ಕೂ ಹಕ್ಕು ಸಾಧಿಸದೆ ಇದ್ದಾಗ್ಯೂ ಅದು ದೈವೀ ಸಾಮರ್ಥ್ಯದ ಹಾಗೂ ದೈವೀ ಸಾನ್ನಿಧ್ಯದ ಅನಂತ ಸಂಪತ್ತುಗಳನ್ನು ಸ್ವೀಕರಿಸುತ್ತದೆ. ಕೊನೆಯದಾಗಿ ಯಜ್ಞವನ್ನು ಸ್ವೀಕರಿಸುವವನ ಹಾಗೂ ಯಜ್ಞದ ರೀತಿಯನ್ನು ಪರಿಗಣಿಸಬೇಕಾಗುತ್ತದೆ. ಯಜ್ಞಾಹುತಿಯನ್ನು ಇತರರಿಗೆ ಇಲ್ಲವೆ ದೈವೀ ಸಾಮರ್ಥ್ಯಗಳಿಗೆ ಅರ್ಪಿಸಬಹುದು, ಅದನ್ನು ವಿಶ್ವವ್ಯಾಪಿಯಾದ ದೈವೀ ಎಲ್ಲದಕ್ಕೂ ಇಲ್ಲವೆ ವಿಶ್ವಾತೀತ ಪರಮೋಚ್ಚನಿಗೆ ಅರ್ಪಿಸಬಹುದು. ಕೈಕೊಂಡ ಪೂಜೆ ಯಾವುದೇ ಆಕಾರ ತಾಳಬಹುದು, ನಿವೇದಿತ ಎಲೆ, ಹೂವು, ವಾಟಗ ನೀರು, ಹಿಡಿತುಂಬ ಅಕ್ಕಿ, ರೊಟ್ಟಿಯ ಒಂದು

ತುಂಡು ಇಂತಹವುಗಳಿಂದ ಹಿಡಿದು ನಮ್ಮ ಒಡೆತನದಲ್ಲಿರುವುದೆಲ್ಲವನ್ನೂ ಮುಡುಪಾಗಿರಿಸುವಿಕೆ, ಮತ್ತು ನಾವಾಗಿರುವುದನ್ನೆಲ್ಲ ಅಧೀನಪಡಿಸುವಿಕೆ ಇವುಗಳವರೆಗೆ ಆಕಾರ ಪಡೆಯಬಹುದು. ಸ್ವೀಕರಿಸುವವನಾರೇ ಆಗಿರಲಿ, ಒಪ್ಪಿಕೊಳ್ಳುವವನು ಯಾರೇ ಆಗಿರಲಿ, ಸಮರ್ಪಿಸಿದುದು ಏನೇ ಆಗಿರಲಿ, ಅವನು ವಸ್ತು–ವಿಷಯಗಳಲ್ಲಿ ಸನಾತನನಾಗಿರುವ ಪರಮೋಚ್ಚನಾಗಿರುತ್ತಾನೆ, ಕೂಡಲೆ ಸ್ವೀಕರಿಸಿದವನು. ಅದನ್ನು ತಿರಸ್ಕರಿಸಿರಲಿ ಇಲ್ಲವೆ ಅಲಕ್ಷ್ಯಮಾಡಿರಲಿ ಅದು ಮಹತ್ವದ್ದಲ್ಲ. ನಮ್ಮಲ್ಲಿ, ಜಗತ್ತಿನಲ್ಲಿ ಅದರ ಘಟನೆಗಳಲ್ಲಿ ವಿಶ್ವಾತೀತನಾದ ಪರಮೋಚ್ಚನು ಪರದೆಯನ್ನು ಆವರಿಸಿಕೊಂಡಾಗಲಿ ಇಲ್ಲಿಯೂ ಕೂಡ ನಮ್ಮೊಡನೆ ಇರುವನು, ಅವನು ಅಲ್ಲಿಯೂ ಕೂಡ ಸರ್ವಜ್ಞ ಸಾಕ್ಷಿಯಾಗಿ ನಮ್ಮೆಲ್ಲ ಕಾರ್ಯಗಳನ್ನು ಸ್ವೀಕರಿಸುವವನಾಗಿ ಹಾಗೂ ಅವುಗಳ ರಹಸ್ಯ ಪ್ರಭುವಾಗಿ ಇರುವನು. ನಮ್ಮ ಎಲ್ಲ ಕ್ರಿಯೆಗಳು, ಪ್ರಯತ್ನಗಳು, ನಮ್ಮ ಪಾಪಗಳೂ ಕೂಡ, ಎಡವುವಿಕೆಗಳು ಹಾಗೂ ವೇದನೆಗಳು, ಹೋರಾಟಗಳು ಮಬ್ಬಾದ ರೀತಿಯಲ್ಲಾಗಲಿ, ಇಲ್ಲವೆ ಪ್ರಜ್ಞಾಪೂರ್ಣವಾಗಿ ನಾವು ತಿಳಿದುಕೊಂಡದ್ದರಾಗಲಿ, ನೋಡಿದ ಇಲ್ಲವೆ ಅಪರಿಚಿತ ಮುಸುಕಿನಲ್ಲಿರುವವಗಳಾಗಲಿ ಅವುಗಳ ಕೊನೆಯ ಪರಿಣಾಮದಲ್ಲಿ ಏಕೈಕನಾದವನ ಪ್ರಭುತ್ವಕ್ಕೆ ಒಳಗಾಗಿರುತ್ತವೆ. ಎಲ್ಲವೂ ಅವನ ಅಸಂಖ್ಯಾತ ರೂಪಗಳಲ್ಲಿ ಹೊರಳಿಕೊಂಡಿರುತ್ತದೆ ಮತ್ತು ಅವುಗಳ ಮೂಲಕ ಸರ್ವಸಾನ್ನಿಧ್ಯ(Omnipresent)ಕ್ಕೆ ಅರ್ಪಿಸಲಾಗಿರುತ್ತದೆ. ಅವನನ್ನು ಯಾವ ರೂಪ ಹಾಗೂ ಮನೋಭಾವಗಳಿಂದ ಅವನನ್ನು ನಾವು ಸಮೀಪಿಸುತ್ತೇವೆಯೋ ಆ ರೂಪದಲ್ಲಿ ಹಾಗೂ ಮನೋಭಾವದಲ್ಲಿ ಅವನು ಯಜ್ಞಾಹುತಿಯನ್ನು ಸ್ವೀಕರಿಸುತ್ತಾನೆ.

**(CWSA, 23/109–110)** **– ಶ್ರೀ ಅರವಿಂದರು**

*

**ನಮ್ಮ ಇಡೀ ಜೀವನವನ್ನು ಒಂದು ಪ್ರಜ್ಞಾಪೂರ್ಣ ಯಜ್ಞಾಹುತಿಯಾಗುವಂತೆ ಹೊರಳಿಸಬೇಕು**

ಸ್ವಲ್ಪದರಲ್ಲಿ ಹೇಳುವುದಾದರೆ ಇದು ನಮ್ಮ ಮೇಲೆ ಮಾಡಲಾದ ಒತ್ತಾಯದ ಬೇಡಿಕೆ, ಅದೇಂದರೆ ನಮ್ಮ ಇಡೀಜೀವನವನ್ನು ಒಂದು ಪ್ರಜ್ಞಾಪೂರ್ಣ ಯಜ್ಞಾಹುತಿಯನ್ನಾಗಿ ಹೊರಳಿಸುವುದಾಗಿದೆ. ಪ್ರತಿಯೊಂದು ಕ್ಷಣ, ನಮ್ಮ

ಸತ್ತೆಯ ಪ್ರತಿಯೊಂದು ಚಲನೆ ಇವು ಸನಾತನನಿಗೆ ಸತತ ಮತ್ತು ಭಕ್ತಿಪೂರ್ವಕ ಸ್ವ–ಅರ್ಪಣೆಯ ರೂಪದಲ್ಲಿ ವಿಘಟಿತಗೊಳ್ಳಬೇಕು. ನಮ್ಮ ಎಲ್ಲ ಕ್ರಿಯೆಗಳು ಅತ್ಯಂತ ಶ್ರೇಷ್ಠ, ಅಸಾಮಾನ್ಯವಾದ ಹಾಗೂ ಉದಾರವಾದವುಗಳನ್ನು ಕೈಕೊಳ್ಳುವ ರೀತಿಯಲ್ಲಿಯೇ ಅತ್ಯಂತ ಚಿಕ್ಕದಾದ, ಸರ್ವಸಾಧಾರಣವಾದ ಹಾಗೂ ಕ್ಷುದ್ರವಾದ ಕ್ರಿಯೆಗಳನ್ನು ಕೈಕೊಳ್ಳಬೇಕು, ಅವು ಮುಡುಪಾಗಿರಿಸಿದವುಗಳು ಎಂಬ ರೀತಿಯಲ್ಲಿ ಅವುಗಳನ್ನು ಕೈಕೊಳ್ಳಬೇಕು. ನಮ್ಮ ವ್ಯಕ್ತಿಗತ ಸ್ವಭಾವ ನಮ್ಮ ಅಹಂಕಾರಕ್ಕಿಂತ ಶ್ರೇಷ್ಠವಾಗಿರುವ, ನಮ್ಮಾಚೆಗಿರುವ ದೈವೀ ಏನೋ ಒಂದಕ್ಕೆ ಆಂತರಿಕ ಹಾಗೂ ಬಾಹ್ಯ ಚಲನೆಯ ಏಕೈಕ ಪ್ರಜ್ಞೆಯಲ್ಲಿ ಜೀವಿಸಬೇಕು, ಆ ಚಲನೆಯನ್ನು ಆ ಏನೋ ಒಂದಕ್ಕೆ ಸಮರ್ಪಿಸಬೇಕು. ನಾವು ಕೊಡುವ ಕಾಣಿಕೆ ಏನೇ ಆಗಿರಲಿ, ಅದನ್ನು ನಾವು ಯಾರಿಗೇ ಕೊಡಲಿ ಅದು ಮಹತ್ವದ್ದಲ್ಲ, ಅದನ್ನು ನಾವು ಎಲ್ಲ ಸತ್ತೆಗಳಲ್ಲಿರುವ ಏಕೈಕ ದೈವೀ ಸತ್ತೆಗೆ ಅರ್ಪಿಸುತ್ತಿದ್ದೇವೆ ಎಂಬ ಪ್ರಜ್ಞೆ ಆ ಕ್ರಿಯೆಯಲ್ಲಿರಬೇಕು. ನಮ್ಮ ಅತ್ಯಂತ ಸಾಮಾನ್ಯ ಮತ್ತು ಅತ್ಯಂತ ದಟ್ಟವಾಗಿರುವ ಭೌತಿಕ ಕ್ರಿಯೆಗಳು ಈ ಘನತೆವೆತ್ತ ಗುಣಲಕ್ಷಣವನ್ನು ಧಾರಣಮಾಡಬೇಕು. ನಾವು ಆಹಾರವನ್ನು ಸೇವಿಸುತ್ತಿರುವಾಗ ಈ ಆಹಾರವನ್ನು ನಮ್ಮಲ್ಲಿರುವ ದೈವೀ ಸಾನ್ನಿಧ್ಯಕ್ಕೆ ಕೊಡುತ್ತಿದ್ದೇವೆ ಎಂಬುದರ ಬಗ್ಗೆ ಪ್ರಜ್ಞೆಯುಳ್ಳವರಾಗಿರಬೇಕು, ಅದು ದೇವಾಲಯದಲ್ಲಿ ಮಾಡುವ ಪವಿತ್ರ ಸಮರ್ಪಣೆಯಾಗಿರಬೇಕು ಮತ್ತು ಕೇವಲ ಭೌತಿಕ ಆವಶ್ಯಕತೆ ಇಲ್ಲವೆ ಸ್ವ–ತೃಪ್ತಿಗಾಗಿ ಇರುವ ಭಾವನೆ ಸಾಗಿ ಹೋಗಬೇಕು.

ಪ್ರಕೃತಿಯೇ ಸ್ವತಃ ಬಹಳ ಸ್ಪಷ್ಟವಾಗಿ ಕಾರ್ಯಕರ್ತ ಆಗಿರುವ ವಿಷಯಗಳಲ್ಲೂ ಕೂಡ ಮತ್ತು ನಾವು ಕೇವಲ ಅದರ ಕಾರ್ಯಗತಿಯ ಸಾಕ್ಷಿಗಳು ಮತ್ತು ಅದನ್ನು ಒಳಗೊಳ್ಳುವವರು ಹಾಗೂ ಆಧಾರ ನೀಡುವವರು ಆಗಿರುತ್ತೇವೆ, ಅಲ್ಲಿ ಅದೇ ಸತತ ನೆನಪು ಹಾಗೂ ಒತ್ತುನೀಡುವ ಪ್ರಜ್ಞೆ ಇರಬೇಕು ಅವು ಒಂದು ಕಾರ್ಯ ಹಾಗೂ ಅದರ ದೈವೀ ಪ್ರಭುವನ್ನು ಕುರಿತಾಗಿರಬೇಕು. ನಮ್ಮ ಉಸಿರೆಳೆತ ಹಾಗೂ ಉಸಿರಾಟಗಳು, ನಮ್ಮ ಹೃದಯದ ಬಡಿತಗಳು, ಇವು ನಮ್ಮಲ್ಲಿ ಪ್ರಜ್ಞೆಯುಳ್ಳವುಗಳಾಗುವಂತೆ ಮಾಡಬೇಕು, ಅವು ವಿಶ್ವಂಭರ ಯಜ್ಞಾಹುತಿಯ ಜೀವಂತವಿರುವ ಲಯಬದ್ಧತೆಗಳಂತೆ ಇರಬೇಕು.

**(CWSA, 23/111)** – **ಶ್ರೀ ಅರವಿಂದರು**

*

**ಆಂತರಿಕ ನೆನಪನ್ನು ಸತತ ಇಟ್ಟುಕೊಂಡಿರುವುದು**

ಮುಂದಿನ ವಿಷಯ: ಈ ಯೋಗದ ಆಚರಣೆ ಕೇಂದ್ರದಲ್ಲಿರುವ ವಿಮೋಚನೆಗೊಳಿಸುವ ಜ್ಞಾನವನ್ನು ಆಂತರಿಕವಾಗಿ ಸತತ ನೆನಪಿನಲ್ಲಿಟ್ಟು–ಕೊಳ್ಳುವುದನ್ನು ಒತ್ತಾಯದಿಂದ ಬೇಡುತ್ತದೆ, ಅದನ್ನು ಕಾರ್ಯಗಳಲ್ಲಿ ಸತತ ಬಾಹ್ಯೀಕರಿಸುವುದು ಕೂಡ ನೆನಪನ್ನು ಗಾಢವಾಗಿಸಲು ಬರುತ್ತದೆ. ಎಲ್ಲರಲ್ಲಿ ಒಬ್ಬನೇ ದಿವ್ಯಾತ್ಮನಿದ್ದಾನೆ, ಭಗವಂತನೇ ಎಲ್ಲವೂ ಆಗಿದ್ದಾನೆ. ಎಲ್ಲರೂ ದೈವಿಕವಾಗಿದ್ದಾರೆ ಮತ್ತು ಅದನ್ನು ಬಿಟ್ಟು ವಿಶ್ವದಲ್ಲಿ ಬೇರೇನೂ ಇಲ್ಲ. ಈ ಯೋಚನೆ ಇಲ್ಲವೆ ನಂಬಿಕೆ ಕಾರ್ಯಕರ್ತನ ಪ್ರಜ್ಞೆಯ ಇಡೀ ದ್ರವ್ಯವಾಗುವವರೆಗೆ ಇಡಿಯಾದ ಹಿನ್ನೆಲೆಯಾಗಿರುತ್ತದೆ. ಒಂದು ನೆನಪು, ಈ ಬಗೆಯ ಕ್ರಿಯಾಶೀಲಗೊಳಿಸುವ ಧ್ಯಾನ ಕೊನೆಯಲ್ಲಿ ಒಂದು ಗಾಢ ಹಾಗೂ ಅಡೆತಡೆಯಿಲ್ಲದ ದರ್ಶನದತ್ತ ಹೊರಳಿಸುತ್ತದೆ, ನಾವು ಎಷ್ಟೊಂದು ಸಾಮರ್ಥ್ಯಪೂರ್ಣವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತೇವೆಯೋ ಇಲ್ಲವೆ ಅದನ್ನು ಕುರಿತು ಸತತ ಧ್ಯಾನ ಮಾಡುತ್ತೇವೆಯೋ ಅಂತಹ ಉಜ್ವಲವಾದ ಹಾಗೂ ಎಲ್ಲವನ್ನೂ ಅಪ್ಪಿಕೊಳ್ಳುವ ಪ್ರಜ್ಞೆಯತ್ತ ಕೂಡ ಹೊರಳಿಸುತ್ತದೆ.

ಏಕೆಂದರೆ ಅದು ಪ್ರತಿಯೊಂದು ಕ್ಷಣ ಎಲ್ಲ ಸತ್ತೆಯ ದೈವೀ ಮೂಲ ಹಾಗೂ ಸಂಕಲ್ಪ ಹಾಗೂ ಕ್ರಿಯೆ ಇವುಗಳೊಂದಿಗೆ ಸತತ ಸಂಬಂಧವಿರುವ ಸೂಚನೆ ಹೊಂದಿರುತ್ತದೆ, ಅವುಗಳ ಕಾರಣ ಮತ್ತು ಅವುಗಳನ್ನು ಎತ್ತಿಹಿಡಿಯುವ ಆ 'ತತ್'ನಲ್ಲಿ ಎಲ್ಲವನ್ನೂ ಅಪ್ಪಿಕೊಳ್ಳುವ ಮತ್ತು ಎಲ್ಲ ವಿಶಿಷ್ಟ ರೂಪಗಳನ್ನು ಹಾಗೂ ತೋರಿಕೆಗಳನ್ನು ಮೀರಿ ಹೋಗುವುದಿರುತ್ತದೆ.

ನಾವು ಪ್ರಜ್ಞೆಯಲ್ಲಿರಿಸಿಕೊಂಡ ನೋಡಿದುದೆಲ್ಲವೂ, ಕೇಳಿದುದೆಲ್ಲವೂ, ಸ್ಪರ್ಶಿಸಿ ಭಾವನೆಗೆ ತಂದುಕೊಂಡ ಎಲ್ಲವೂ ನಾವು ಪೂಜಿಸುವ, ಸೇವೆಸಲ್ಲಿಸುವ 'ತತ್' ಎಂದು ನಾವು ತಿಳಿದುಕೊಳ್ಳಬೇಕು, ಭಾವನೆಗೆ ತಂದುಕೊಳ್ಳಬೇಕು. ಎಲ್ಲವನ್ನೂ ದೈವತ್ವದ ಪ್ರತಿಮೆಯಾಗುವಂತೆ ಹೊರಳಿಸಬೇಕು, ಅದನ್ನು ಅವನ ದೇವಪ್ರಮುಖನ ವಾಸಸ್ಥಳ ಎಂದು ಹಾಗೂ ಸನಾತನ ಸರ್ವಸಾನ್ನಿಧ್ಯದಿಂದ ಆವೃತ್ತವಾದದ್ದೆಂದು ಎಂದು ಗ್ರಹಿಸಬೇಕು.

**(CWSA, 23/112–13)** **– ಶ್ರೀ ಅರವಿಂದರು**

*

## ಅಹಂಭಾವದ ಎಲ್ಲ ಆಂತರಿಕ ಆಧಾರಗಳನ್ನು ತ್ಯಾಗ ಮಾಡುವುದು

ಕೊನೆಯದಾಗಿ ಯಜ್ಞಾಹುತಿಯ ಈ ಯೋಗದ ಆಚರಣೆ, ನಾವು ಅಹಂಕಾರದ ಎಲ್ಲ ಆಧಾರಗಳನ್ನು ತ್ಯಾಗಮಾಡಬೇಕು, ನಮ್ಮ ಮನಸ್ಸಿನಿಂದ, ಸಂಕಲ್ಪದಿಂದ, ಕ್ರಿಯೆಗಳಿಂದ ಎಸೆದು ಬಿಡಬೇಕು, ಅದರ ಬೀಜವನ್ನು, ಸಾನ್ನಿಧ್ಯವನ್ನು, ಪ್ರಭಾವವನ್ನು ನಮ್ಮ ಸ್ವಭಾವದಿಂದ ತೆಗೆದು ಹಾಕಬೇಕು ಎಂದು ಒತ್ತಾಯಪಡಿಸುತ್ತದೆ ಎಲ್ಲವನ್ನೂ ಭಗವಂತನಿಗಾಗಿ ಕೈಕೊಳ್ಳಬೇಕು, ಎಲ್ಲವನ್ನೂ ಭಗವಂತನತ್ತ ನಿರ್ದೇಶಿತಗೊಳಿಸಿರಬೇಕು, ಪ್ರತ್ಯೇಕ ಅಸ್ತಿತ್ವವಿರುವ ನಮಗಾಗಲಿ, ಏನನ್ನೂ ಪ್ರಯತ್ನಿಸಬಾರದು, ಇತರರಿಗಾಗಲಿ, ಅವರು ನೆರೆಹೊರೆಯವರೇ ಆಗಿರಲಿ, ಮಿತ್ರರಾಗಿರಲಿ, ಕುಟುಂಬದವರಾಗಿರಲಿ, ದೇಶದವರಾಗಿರಲಿ, ಇಲ್ಲವೆ ಮನುಕುಲಕ್ಕೆ ಸೇರಿದವರಾಗಿರಲಿ ಇಲ್ಲವೆ ಇತರ ಜೀವಿಗಳಾಗಿರಲಿ, ಅವರಿಗಾಗಿ ಏನನ್ನೂ ಕೈಕೊಳ್ಳಕೂಡದು, ಕಾರಣ ಅವರು ನಮ್ಮ ವೈಯಕ್ತಿಕ ಜೀವನದಲ್ಲಿ, ಯೋಚನೆಯಲ್ಲಿ, ಸಂವೇದನೆಯಲ್ಲಿ ಬಂದಿರುತ್ತಾರೆ ಎಂಬುದಾಗಲಿ, ಇಲ್ಲವೆ ಅಹಂಕಾರ ಅವರ ಯೋಗಕ್ಷೇಮಕ್ಕಾಗಿ ಆದ್ಯತೆ ನೀಡುವ ಅಭಿರುಚಿ ಹೊಂದಿರುತ್ತದೆ ಎಂಬುದಾಗಲಿ ಆಗಿರಬಾರದು. ಎಲ್ಲ ಕಾರ್ಯಗಳನ್ನು ಕೈಕೊಳ್ಳುವ ಹಾಗೂ ನೋಡುವ ಈ ರೀತಿಯಲ್ಲಿ ಅವನದೇ ವಿಶಾಲ, ವಿಶ್ವವ್ಯಾಪಿ ಅಸ್ತಿತ್ವದ ಅನಿರ್ಬಂಧಿತ ದೇಗುಲದಲ್ಲಿ ಎಲ್ಲ ಜೀವನ ಅವನಿಗೆ ಕೇವಲ ದೈನಂದಿನ ಕ್ರಿಯಾಶೀಲ ಪೂಜೆ ಹಾಗೂ ಸೇವೆಗಳಾಗುತ್ತವೆ.

**(CWSA, 23/113–14)** – **ಶ್ರೀ ಅರವಿಂದರು**

*

## ಎಲ್ಲ ಚಟುವಟಿಕೆಗಳಲ್ಲಿ ಯೋಗಿಯ ಗುರಿ

ಏಕೆಂದರೆ ಎಲ್ಲವನ್ನೂ ಒಂದು ಯಜ್ಞಾಹುತಿಯೆಂದು ಕೈಕೊಳ್ಳಬೇಕು, ಎಲ್ಲ ಚಟುವಟಿಕೆಗಳ ಉದ್ದೇಶ ಹಾಗೂ ಅವುಗಳ ಅರ್ಥದ ಹೃದಯ ಭಗವಂತನಿಗಾಗಿ ಇರಬೇಕು. ಜ್ಞಾನವನ್ನೊದಗಿಸುವ ವಿಜ್ಞಾನಗಳಲ್ಲಿ ಯೋಗಿಯ ಗುರಿ ದೈವೀ ಪ್ರಜ್ಞೆಯ ಹಾಗೂ ಅಪಾರ ಸಾಮರ್ಥ್ಯದ ಕಾರ್ಯಗತಿಗಳನ್ನು ಮನುಷ್ಯನಲ್ಲಿ, ಜೀವಿಗಳಲ್ಲಿ, ವಸ್ತು–ವಿಷಯಗಳಲ್ಲಿ, ಶಕ್ತಿಯಲ್ಲಿ ಅವುಗಳ ಸೃಷ್ಟ್ಯಾತ್ಮಕ ಪ್ರಾಮುಖ್ಯತೆಯನ್ನು, ರಹಸ್ಯ ಕಾರ್ಯಗಳ ನಿರ್ವಹಣೆಯನ್ನು, ಪ್ರಕಟನೆಯನ್ನು ವ್ಯವಸ್ಥಿತಗೊಳಿಸುವ ಸಂಕೇತಗಳನ್ನು ಶೋಧಿಸುವುದಾಗಿರಬೇಕು, ತಿಳಿದುಕೊಳ್ಳುವುದಾಗಿರಬೇಕು.

ವ್ಯಾವಹಾರಿಕ ವಿಜ್ಞಾನಗಳಲ್ಲಿ ಯೋಗಿಯ ಗುರಿ, ಅದು ಮಾನಸಿಕವಾದದ್ದಿರಲಿ ಮತ್ತು ಭೌತಿಕವಾದದ್ದಿರಲಿ ಇಲ್ಲವೆ ರಹಸ್ಯದ್ದಾಗಿರಲಿ ಮತ್ತು ಚೈತ್ಯದ್ದಾಗಿರಲಿ ಭಗವಂತ ಹಾಗೂ ಅವನ ವಿಧಾನಗಳಲ್ಲಿ ಇರುವ ರೀತಿಗಳಲ್ಲಿ ಪ್ರವೇಶಿಸುವುದಾಗಿದೆ, ಅದು ನಮಗೆ ಕೊಡಲಾದ ಸಲಕರಣೆಗಳನ್ನು ಹಾಗೂ ಕಾರ್ಯಕ್ಕಾಗಿರುವ ಸಾಧನಗಳನ್ನು ತಿಳಿದುಕೊಳ್ಳಬಹುದು, ಅದರಿಂದಾಗಿ ಆ ಜ್ಞಾನವನ್ನು, ಪ್ರಜ್ಞಾಪೂರ್ಣ, ದೋಷರಹಿತ ಆತ್ಮದ ಪ್ರಭುತ್ವ, ಸಂತೋಷ ಹಾಗೂ ಸ್ವ–ನೆರವೇರಿಕೆ ಇವುಗಳಿಗಾಗಿ, ಉಪಯೋಗಿಸಬಹುದು. ಕಲಾಕೌಶಲದಲ್ಲಿ ಯೋಗಿಯ ಗುರಿ ಕೇವಲ ಸೌಂದರ್ಯಾಭಿರುಚಿಯ, ಮಾನಸಿಕ ಇಲ್ಲವೆ ಭೌತಿಕ ತೃಪ್ತಿಗಾಗಿ ಇರಬಾರದು, ಆದರೆ ಭಗವಂತನನ್ನು ಎಲ್ಲೆಡೆಯಲ್ಲಿ ನೋಡುವ, ಪೂಜಿಸುವ ಕಾರ್ಯವನ್ನು ಅದರದೇ ಕಾರ್ಯಗಳ ಬಗ್ಗೆ ಅರ್ಥವನ್ನು ಜ್ಞಾನ ಪ್ರಕಾಶನವನ್ನು ತಿಳಿದುಕೊಂಡು ಕೈಕೊಳ್ಳುವುದಾಗಿದೆ, ಅದು ಎಲ್ಲ ತತ್ವಗಳಲ್ಲಿ ಹಾಗೂ ಶಕ್ತಿಗಳಲ್ಲಿ, ದೇವರುಗಳಲ್ಲಿ, ಜನರಲ್ಲಿ, ಜೀವಿಗಳಲ್ಲಿ ಹಾಗೂ ವಸ್ತುಗಳಲ್ಲಿ ಇರುವ ಏಕೈಕ ದೇವನನ್ನು ಆದರ್ಶ ರೂಪಗಳಲ್ಲಿ ಅಭಿವ್ಯಕ್ತಪಡಿಸುವುದಾಗಿದೆ.

ಇತರ ಜನರಿಂದ ಯೋಗಿಯ ಭಿನ್ನತೆ ಇರುವುದೇನೆಂದರೆ ಅವನು ಉಚ್ಚತರ ಮತ್ತು ಹೆಚ್ಚು ವಿಶಾಲವಾದ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಜೀವಿಸುತ್ತಾನೆ, ಜ್ಞಾನದ ಅವನ ಕಾರ್ಯ ಇಲ್ಲವೆ ಸೃಷ್ಟಿಸುವ ಕಾರ್ಯ ಅಲ್ಲಿಂದ ಜಿಗಿದು ಬರಬೇಕು, ಅದನ್ನು ಮನಸ್ಸಿನಲ್ಲಿ ಕೈಕೊಳ್ಳಬಾರದು– ಏಕೆಂದರೆ ಅದು ಮನುಷ್ಯನ ಮನಸ್ಸಿಗಿಂತ ಶ್ರೇಷ್ಠತರ ಸತ್ಯ ಹಾಗೂ ದರ್ಶನವಾಗಿರುತ್ತದೆ, ಅದನ್ನು ಅವನು ಅಭಿವ್ಯಕ್ತಪಡಿಸಬೇಕು, ಅದಕ್ಕೂ ಹೆಚ್ಚಾಗಿ ಅದು ಅವನ ಮೂಲಕ ಅಭಿವ್ಯಕ್ತವಾಗಲು, ಅವನ ಕಾರ್ಯಗಳಿಗೆ ಎರಕ ನೀಡಲು, ಒತ್ತಾಯ ತರುತ್ತದೆ ಅದು ಅವನ ವೈಯಕ್ತಿಕ ತೃಪ್ತಿಗಾಗಿ ಅಲ್ಲ, ಆದರೆ ದೈವೀ ಉದ್ದೇಶಕ್ಕಾಗಿರುತ್ತದೆ.

**(CWSA, 23/142–143)** **– ಶ್ರೀ ಅರವಿಂದರು**

*

**ಚೈತ್ಯ ಸತ್ತೆಯ ಹೊರಹೊಮ್ಮುವಿಕೆ**

ಯೋಗದಲ್ಲಿ ಒಂದು ವಿಶಿಷ್ಟ ಹಂತವಿರುತ್ತದೆ, ಆಗ ಮನಸ್ಸನ್ನು ಸಾಕಷ್ಟು ಅಚಂಚಲಗೊಳಿಸಲಾಗಿರುತ್ತದೆ, ಅದು ಇನ್ನು ಮುಂದೆ ಪ್ರತಿಹೆಜ್ಜೆಯಲ್ಲಿ ಮಾನಸಿಕ

ನಿಶ್ಚಿತತೆಗಳಿಗೆ ಆಧಾರ ನೀಡುತ್ತಿರುವುದಿಲ್ಲ, ಪ್ರಾಣಿಕವನ್ನು ಕದಲದಂತೆ ಮಾಡಲಾಗಿರುತ್ತದೆ, ಅದರ ಮೇಲೆ ಜಯ ಸಾಧಿಸಲಾಗಿರುತ್ತದೆ ಮತ್ತು ಅದು ಇನ್ನು ಮುಂದೆ ತನ್ನದೇ ದುಡುಕಿನ ಸಂಕಲ್ಪ, ಬೇಡಿಕೆ ಹಾಗೂ ಆಸೆ ಇವುಗಳ ಮೇಲೆ ಸತತ ಒತ್ತುಕೊಡುತ್ತಿರುವುದಿಲ್ಲ, ಭೌತಿಕವನ್ನು ಒಟ್ಟಿನಲ್ಲಿ ಆದರೆ ಬಾಹ್ಯದಲ್ಲಿರುವ ಮೊತ್ತ, ಮಬ್ಬು, ಜಡತ್ವ ಇವುಗಳಿಂದ ಆಂತರಿಕ ಜ್ವಾಲೆ ಹೂತುಹೋಗದಂತೆ ಬದಲು ಮಾಡಲಾಗಿರುತ್ತದೆ. ಹಾಗಾದಾಗ ಅತ್ಯಂತ ಆಳದಲ್ಲಿರುವ ಸತ್ತೆ, ಬಹಳ ಕಾಲ ಅಂತರಂಗದಲ್ಲಿ ಅಡಗಿಕೊಂಡದ್ದು, ಕೇವಲ ಅದರ ಅಪರೂಪದ ಪ್ರಭಾವಗಳನ್ನು ಭಾವನೆಗೆ ತಂದುಕೊಂಡದ್ದು, ಮುಂಭಾಗಕ್ಕೆ ಬರಲು ಶಕ್ತವಾಗುತ್ತದೆ, ಅದು ಉಳಿದದ್ದನ್ನೆಲ್ಲ ಪ್ರಕಾಶಿತಗೊಳಿಸುತ್ತದೆ ಮತ್ತು ಸಾಧನೆಯ ಮುಂದುವರಿಕೆಯ ನೇತೃತ್ವವನ್ನು ಕೈಗೆತ್ತಿಕೊಳ್ಳುತ್ತದೆ. ಅದರ ಗುಣಲಕ್ಷಣ ಭಗವಂತ ಇಲ್ಲವೆ ಅತ್ಯುಚ್ಚನಾದವನತ್ತ ಒಂದೇ ನಿಟ್ಟಿನಲ್ಲಿ ನಿರ್ದೇಶಿತವಾಗಿರುತ್ತದೆ, ಒಂದೇ ನಿಟ್ಟಿನಲ್ಲಿ ನಿರ್ದೇಶಿತವಾದಾಗ್ಯೂ ಕ್ರಿಯೆಯಲ್ಲಿ ಹಾಗೂ ಚಲನೆಯಲ್ಲಿ ನಮ್ಯವಾಗಿರುತ್ತದೆ. ಅದು ದಿಶೆಯನ್ನು ಕುರಿತು ಏಕಮುಖವಾಗಿರುವ ಬುದ್ಧಿಮತ್ತೆ ಇಲ್ಲವೆ ಆಳುತ್ತಿರುವ ಮತಾಂಧತೆಯ ವಿಚಾರ, ಪ್ರಾಣಿಕದ ಏಕಮುಖದ ಪ್ರಚೋದನೆ ಇವುಗಳ ಹಾಗೆ ಕಟ್ಟುನಿಟ್ಟನ್ನು ಸೃಷ್ಟಿಸುವುದಿಲ್ಲ. ಅದು ಪ್ರತಿಯೊಂದು ಕ್ಷಣ ನಮ್ಯ ನಿಶ್ಚಿತತೆಯೊಂದಿಗೆ ದೈವೀಸತ್ಯದ ಮಾರ್ಗವನ್ನು ಸೂಚಿಸುತ್ತದೆ, ಸ್ವಯಂಪ್ರೇರಣೆಯಿಂದ ಸರಿಯಾದ ಹೆಜ್ಜೆ ಮತ್ತು ಮಿಥ್ಯೆಯ ಹೆಜ್ಜೆ ಇವುಗಳ ನಡುವಿರುವ ಭಿನ್ನತೆಯನ್ನು ತೋರಿಸಿಕೊಡುತ್ತದೆ, ದೈವಿಕವಾದ ಇಲ್ಲವೆ ಭಗವಂತನತ್ತ ಚಲನೆಯನ್ನು ಅದೈವಿಕವಾದ, ಅಂಟಿಕೊಳ್ಳುವ ಮಿಶ್ರಣದಿಂದ ಬಿಡುಗಡೆ ಮಾಡುತ್ತದೆ.

ಅದರ ಕ್ರಿಯೆ ಶೋಧಕ ದೀಪದಂತಿರುತ್ತದೆ, ಸ್ವಭಾವದಲ್ಲಿ ಬದಲು ಮಡಬೇಕಾದ ಎಲ್ಲವನ್ನೂ ಮೇಲಕ್ಕೆತ್ತಿ ತೋರಿಸುತ್ತದೆ. ಅದರೊಳಗೆ ಪರಿಪೂರ್ಣತೆಯ ಮೇಲೆ ಒತ್ತುಕೊಡುವ ಎಲ್ಲ ಆಂತರಿಕ ಹಾಗೂ ಬಾಹ್ಯ ಅಸ್ತಿತ್ವದ ಮೇಲೆ ರಸವಿದ್ಯೆಯ ರೂಪಾಂತರ ತರುವ ಒಂದು ಜ್ವಾಲೆಯಿದೆ. ಅದು ದೈವೀಸಾರವನ್ನು ಎಲ್ಲೆಡೆ ನೋಡುತ್ತದೆ, ಆದರೆ ಕೇವಲ ಮುಖವಾಡ ಧರಿಸಿರುವುದರ, ಮುಸುಕಿನಲ್ಲಿರುವುದರ ಆಕಾರವನ್ನು ತಿರಸ್ಕರಿಸುತ್ತದೆ. ಅದು ದೈವೀಸತ್ಯ, ಸಂಕಲ್ಪ, ಬಲ, ಪ್ರಭುತ್ವ, ಸಂತೋಷ, ಪ್ರೇಮ ಹಾಗೂ ಸೌಂದರ್ಯ

ಇವುಗಳ ಮೇಲೆ ಒತ್ತುಕೊಡುತ್ತದೆ, ಆದರೆ ಅದು ಕೇವಲ ಅವಿದ್ಯೆಯ ವ್ಯಾವಹಾರಿಕ, ಕ್ಷಣಿಕ ಸತ್ಯ ಇವುಗಳನ್ನು ಮೀರಿ ಹೋಗಿರುವ ಸ್ಥಿರವಾದ ಜ್ಞಾನದ ಮೇಲೆ ಒತ್ತುಕೊಡುತ್ತದೆ. ಕೇವಲ ಪ್ರಾಣಿಕ ಹರ್ಷದ ಮೇಲಲ್ಲ, ಆಂತರಿಕ ಸಂತೋಷದ ಮೇಲೆ ಒತ್ತುಕೊಡುತ್ತದೆ– ಏಕೆಂದರೆ ಕೀಳಾಗಿರುವ ತೃಪ್ತಿಗಳ ಮೇಲೆ ಒತ್ತುಕೊಡುವುದರ ಬದಲಾಗಿ, ಅದಕ್ಕೂ ಹೆಚ್ಚಾಗಿ ಪರಿಶುದ್ಧಗೊಳಿಸುವ ವೇದನೆಗೆ ದುಃಖಕ್ಕೆ ಆದ್ಯತೆ ನೀಡುತ್ತದೆ– ಮೇಲ್ಗಡೆಗೆ ರೆಕ್ಕೆ ಹೊಂದಿರುವ ಪ್ರೇಮಕ್ಕೆ ಆದ್ಯತೆ ನೀಡುತ್ತದೆ, ಅಹಂಭಾವದ ಹಾತೊರೆತವಿರುವ ಗೂಟಕ್ಕೆ ಕಟ್ಟಿ ಹಾಕಿಕೊಂಡಿರುವುದಕ್ಕಾಗಲಿ ಇಲ್ಲವೆ ಪಾದಗಳನ್ನು ಕೆಸರಿನಲ್ಲಿ ಮುಳುಗಿಸಿ ಹೋಗಿರುವುದಕ್ಕಾಗಲಿ ಅಲ್ಲ, ಸನಾತನನ ಅರ್ಥವಿವರಣೆ ನೀಡುವ ಪೌರೋಹಿತ್ಯಕ್ಕೆ ಮರಳಿ ಕೊಡಲಾದ ಸೌಂದರ್ಯದ ಮೇಲೆ, ಬಲ, ಸಂಕಲ್ಪ ಹಾಗೂ ಪ್ರಭುತ್ವ ಇವುಗಳ ಅಹಂಕಾರದ ಉಪಕರಣಗಳ ರೂಪದಲ್ಲಲ್ಲ, ಆದರೆ ದಿವ್ಯಾತ್ಮನಿಗೆ ಸೇರಿದವುಗಳ ಮೇಲೆ ಒತ್ತು ನೀಡಲಾಗುತ್ತದೆ. ಅದರ ಸಂಕಲ್ಪ ಜೀವನವನ್ನು ದೈವೀಕರಣಗೊಳಿಸುವುದಕ್ಕಾಗಿ, ಅದರ ಮೂಲಕ ಉಚ್ಚತರ ದೈವೀಸತ್ಯಕ್ಕೆ ಅಭಿವ್ಯಕ್ತಿ ನೀಡುವುದಕ್ಕಾಗಿ, ದೈವಿಕನಾದ ಸನಾತನನಿಗೆ ಅದರ ಸಮರ್ಪಣೆಗಾಗಿ ಇದೆ.

**(CWSA, 23/154–55)** **– ಶ್ರೀ ಅರವಿಂದರು**

*

**ಚೈತ್ಯ ಸತ್ತೆಯ ಅತ್ಯಂತ ಸುಪರಿಚಿತ ಗುಣಲಕ್ಷಣ**

ಆದರೆ ಚೈತ್ಯಸತ್ತೆಯ ಅತ್ಯಂತ ಸುಪರಿಚಿತ ಗುಣಲಕ್ಷಣವೆಂದರೆ ಪವಿತ್ರ ಪ್ರೇಮ, ಸಂತೋಷ ಹಾಗೂ ಏಕತೆ ಇವುಗಳ ಮೂಲಕ ಭಗವಂತನತ್ತ ಅದರ ಒತ್ತಡ ತರುವುದಾಗಿದೆ. ಅದು ದೈವೀ ಪ್ರೇಮವನ್ನು ಹೆಚ್ಚಾಗಿ ಅರಸುತ್ತದೆ, ಭಗವಂತನಿಗಾಗಿ ಇರುವ ಅದರ ಪ್ರೇಮ ಅದಕ್ಕೆ ಉತ್ತೇಜನ ನೀಡುತ್ತದೆ, ಅದರ ಗುರಿಯನ್ನಾಗಿ ಮಾಡಿಕೊಂಡಿರುತ್ತದೆ. ನಮ್ಮೊಳಗೆ ಹೊಸಜನ್ಮ ತಾಳಿದ ದೇವಪ್ರಮುಖನ ಇನ್ನೂ ಮಬ್ಬಾದ ತೊಟ್ಟಿಲು ಇಲ್ಲವೆ ಇನ್ನೂ ಉದ್ಭವವಾಗುತ್ತಿರುವ ಪ್ರಕಾಶಮಯ ಗುಹೆಯ ಮೇಲೆ ಹೊಳೆಯುತ್ತಿರುವ ದೈವೀಸತ್ಯದ ನಕ್ಷತ್ರವಾಗಿರುತ್ತದೆ. ಅದರ ಬೆಳವಣಿಗೆಯ ಮತ್ತು ಅಪಕ್ವ ಅಸ್ತಿತ್ವದ ದೀರ್ಘಕಾಲದ ಅದರ ಮೊದಲ ಹಂತದಲ್ಲಿ, ಅದು ಭೂಮಿಯ ಮೇಲಿನ ಪ್ರೇಮ, ಒಲವು,

ಕೋಮಲತೆ, ಸದ್ಭಾವನೆ, ಕರುಣೆ, ಹಿತಚಿಂತನ, ಉತ್ಕೃಷ್ಟತೆ ಮತ್ತು ಪ್ರಕಾಶ, ಬಲ ಹಾಗೂ ಧೈರ್ಯ ಇವುಗಳ ಮೇಲೆ ಮತ್ತು ಮಾನವ ಸ್ವಭಾವದ ಸಾಮಾನ್ಯತೆ, ದಟ್ಟವಾಗಿರುವಿಕೆ ಇವುಗಳನ್ನು ಸಂಸ್ಕರಿಸುವುದರ, ಪರಿಶುದ್ಧಗೊಳಿಸುವುದರ ಮೇಲೆ ವಾಲಿಕೊಂಡಿರುತ್ತದೆ. ಆದರೆ ಈ ಮಾನವ ಚಲನೆಗಳು ಅವುಗಳ ಅತ್ಯಂತ ಒಳ್ಳೆಯ ಹಾಗೂ ಅತ್ಯಂತ ಕೆಟ್ಟದಾದ, ಎಷ್ಟೊಂದು ಪತಿತ ಹಾಗೂ ಅಹಂಕಾರದ ಗುರುತು, ಸ್ವ–ಮೋಸಕ್ಕೊಳಗಾಗುವ ಸಂವೇದನಾತ್ಮಕ ಮಿಥ್ಯೆ ಇವುಗಳ ಮುದ್ರೆಗೊಳಗಾದ ವಿಷಯಗಳಿಂದ ಮಿಶ್ರಣಗೊಂಡಿರುತ್ತವೆ ಎಂಬುದನ್ನು ಮತ್ತು ನಿಮ್ನತರ ಜೀವ ಆತ್ಮದ ಚಲನೆಯೊಂದನ್ನು ಅನುಕರಿಸುವುದರಿಂದ ಆಗುವ ಲಾಭವನ್ನು ಅದು ತಿಳಿದುಕೊಂಡಿರುತ್ತದೆ. ಒಮ್ಮೆಗೆ ಹೊರಹೊಮ್ಮಿ ಎಲ್ಲ ಹಳೆಯ ಕಟ್ಟುಗಳನ್ನು ಹಾಗೂ ಅಪರಿಪೂರ್ಣ ಭಾವನಾತ್ಮಕ ಚಟುವಟಿಕೆಗಳನ್ನು ಮುರಿದು ಹಾಕಲು ಹಾಗೂ ಅವುಗಳ ಸ್ಥಾನದಲ್ಲಿ ಪ್ರೇಮ ಹಾಗೂ ಏಕತೆಯ ಶ್ರೇಷ್ಠತರ ಆಧ್ಯಾತ್ಮಿಕ ದೈವೀ ಸತ್ಯವನ್ನಿರಿಸಲು ತಯಾರಾಗಿರುತ್ತದೆ, ಆತುರದೊಂದಿಗಿರುತ್ತದೆ. ಅದು ಇನ್ನೂ ಮಾನವ ರೂಪಗಳನ್ನು ಹಾಗೂ ಚಲನೆಗಳನ್ನು ಒಪ್ಪಿಕೊಳ್ಳಬಹುದು, ಆದರೆ ಅದಕ್ಕಿರುವ ಷರತ್ತೆಂದರೆ ಅವುಗಳನ್ನು ದೈವೀ ಏಕೈಕನಾದವನತ್ತ ಹೊರಳಿಸಲಾಗಿರಬೇಕು. ಸಹಾಯಕವಾಗುವ ಕಟ್ಟುಗಳನ್ನು ಮಾತ್ರ ಅದು ಒಪ್ಪಿಕೊಳ್ಳುತ್ತದೆ. ಅವೆಂದರೆ ಗುರುವಿಗೆ, ದೇವನನ್ನು ಅರಸುವ ಒಕ್ಕೂಟಕ್ಕೆ ಹೃದಯದ ಹಾಗೂ ಮನಸ್ಸಿನ ಪೂಜ್ಯಭಾವನೆ ಇರುವುದು, ಈ ಅಜ್ಞಾನಿ ಮಾನವ ಹಾಗೂ ಪಶುಗಳ ಜಗತ್ತು ಹಾಗೂ ಅದರ ಜನರು ಇವರಿಗಾಗಿ ಆಧ್ಯಾತ್ಮಿಕ ಕರುಣೆ ಇರುವುದು, ಭಗವಂತ ಎಲ್ಲೆಡೆಯಲ್ಲಿ ಇರುವುದರ ಗ್ರಹಿಕೆಯಿಂದ ಬರುವ ಸಂತೋಷ, ಆನಂದ, ಸೌಂದರ್ಯದ ತೃಪ್ತಿ ಇರುವುದು. ಅದು ಹೃದಯದ ರಹಸ್ಯ ಕೇಂದ್ರದಲ್ಲಿ ಸರ್ವವ್ಯಾಪಿ ಭಗವಂತನನ್ನು ಭೇಟಿಮಾಡಲು ಅಂತರಂಗದಲ್ಲಿ ಸ್ವಭಾವವನ್ನು ಮುಳುಗಿಸುತ್ತದೆ ಮತ್ತು ಅಲ್ಲಿ ಆ ಕರೆಯಿರುವಾಗ ಅಹಂಭಾವದ ಯಾವ ನಿಂದೆಯಿರುವುದಿಲ್ಲ, ಪರಹಿತ ಸಾಧನೆಗಾಗಿ ಇಲ್ಲವೆ ಕರ್ತವ್ಯಪಾಲನೆಗಾಗಿ ಬಾಹ್ಯದಿಂದ ಆದೇಶವಿರುವುದಿಲ್ಲ. ಅದರ ಅಂತರಂಗದಲ್ಲಿರುವ ದೈವತ್ವದ ಆಕರ್ಷಣೆಗೆ ಅದರ ವಿಧೇಯತೆ ಹಾಗೂ ಹಾತೊರೆತವನ್ನು ಯಾವ ಲೋಕೋಪಕಾರ ಇಲ್ಲವೆ ಸೇವೆ ಅದನ್ನು ಮೋಸಗೊಳಿಸುವುದಿಲ್ಲ, ಬೇರೆಡೆ ಹೊರಳಿಸುವುದಿಲ್ಲ. ಅದು ಸತ್ತೆಯನ್ನು ವಿಶ್ವಾತೀತ ದಿವ್ಯಾನಂದದತ್ತ ಮೇಲಕ್ಕೆತ್ತುತ್ತದೆ ಮತ್ತು ಜಗತ್ತಿನ ಎಲ್ಲ ಕೆಳಮುಖ ರೆಕ್ಕೆಗಳ

ಎಳೆತವನ್ನು ಅತ್ಯುಚ್ಚ ಏಕೈಕವಾದವನನ್ನು ತಲುಪಲು ತ್ಯಜಿಸುವುದಕ್ಕೆ ತಯಾರಾಗಿರುತ್ತದೆ, ಆದರೆ ಹಗೆತನ, ಹೋರಾಟ, ವಿಭಜನೆ ಹಾಗೂ ಅಂಧಕಾರ ಹಾಗೂ ಕಿರುಗುಟ್ಟಿಸುವ ಅಜ್ಞಾನ ಇವೆಲ್ಲ ಇರುವ ಜಗತ್ತನ್ನು ಪರಿವರ್ತಿಸಲು ಹಾಗೂ ಅದಕ್ಕೆ ಈ ವಿಶ್ವಾತೀತ ದೈವೀ ಪ್ರೇಮ ಹಾಗೂ ದಿವ್ಯಾನಂದವನ್ನು ಕೊಡಲು ಕರೆಕೊಡುವುದನ್ನೂ ಕೂಡ ಕೈಕೊಳ್ಳುತ್ತದೆ. ಅದು ವಿಶ್ವಂಭರ ದೈವೀ ಪ್ರೇಮವನ್ನು, ವಿಶಾಲ ಕರುಣೆಯನ್ನು, ಎಲ್ಲರ ಒಳ್ಳೆಯದಕ್ಕಾಗಿ ಗಾಢ ಹಾಗೂ ಭವ್ಯ ಸಂಕಲ್ಪವನ್ನು ತೆರೆದಿರಿಸುತ್ತದೆ, ಜಗನ್ಮಾತೆ ತನ್ನ ಮಕ್ಕಳನ್ನು ಆವರಿಸಿಕೊಂಡು ಒಟ್ಟುಗೂಡಿಸಿ ಅಪ್ಪಿಕೊಳ್ಳುವುದಕ್ಕಾಗಿ ಹಾಗೂ ಜಗತ್ತನ್ನು ಅದರ ವಿಶ್ವಂಭರ ಅಚೇತನದಿಂದ ವಿಮೋಚನೆಗೊಳಿಸಲು, ನಿಶೆಯಲ್ಲಿ ಮುಳುಗಿಸಿಟ್ಟ ದೈವೀ ಭಾವೋದ್ರೇಕವನ್ನು ಅಪ್ಪಿಕೊಳ್ಳಲು ಅದಿರುತ್ತದೆ.

**(CWSA, 23/155–56)** **– ಶ್ರೀ ಅರವಿಂದರು**

*

**ಆರಾಧನಾ ರೂಪದ ಎಲ್ಲ ಪ್ರೇಮದ ಹಿಂದೆ ಆಧ್ಯಾತ್ಮಿಕ ಶಕ್ತಿಯಿರುತ್ತದೆ**

ಎಲ್ಲ ಪ್ರೇಮ, ನಿಜವಾಗಿ, ಆರಾಧನೆಯಾಗಿದ್ದಾಗ ಅದರ ಹಿಂದೆ ಆಧ್ಯಾತ್ಮಿಕ ಶಕ್ತಿಯಿರುತ್ತದೆ, ಅದನ್ನು ಅಜ್ಞಾನದಿಂದ ಅರ್ಪಿಸಿದಾಗಲೂ ಮತ್ತು ಸೀಮಿತ ಉದ್ದೇಶಕ್ಕಾಗಿ ಕೈಕೊಂಡಾಗಲೂ ಅದರ ಭವ್ಯತೆಯ ಏನೋ ಒಂದು ವೃತ್ತದ ಬಡತನದ ಮೂಲಕ ಹಾಗೂ ಅದರ ಹೊರಹರಿಯುವಿಕೆಗಳ ಅಲ್ಪತನದ ಮೂಲಕ ತೋರಿಬರುತ್ತದೆ. ಏಕೆಂದರೆ ಪೂಜೆಯೇ ಆದ ಪ್ರೇಮ ಒಮ್ಮೆಗೆ ಒಂದು ಅಭೀಪ್ಸೆ ಮತ್ತು ತಯಾರು ಮಾಡಿಕೊಳ್ಳುವಿಕೆಯಾಗಿರುತ್ತದೆ, ಅದು ತನ್ನ ಅವಿದ್ಯೆಯ ಚಿಕ್ಕ ಮಿತಿಗಳಲ್ಲಿ ಇನ್ನೂ ಹೆಚ್ಚು ಇಲ್ಲವೆ ಕಡಿಮೆ ಕುರುಡಾದ ಹಾಗೂ ಭಾಗಶಃವಾದ ಆದರೆ ಆಶ್ಚರ್ಯಕರವಾದ ಸಿದ್ಧಿಯ ಇಣುಕು ನೋಟವನ್ನು ತರುತ್ತದೆ, ಏಕೆಂದರೆ ಕೆಲವು ಕ್ಷಣಗಳಿರುತ್ತವೆ ಆಗ ಅದು ನಾವಾಗಿರುವುದಿಲ್ಲ, ಆದರೆ ನಮ್ಮನ್ನು ಪ್ರೇಮಿಸುವ ಮತ್ತು ನಮ್ಮಿಂದ ಪ್ರೇಮಿಸಲ್ಪಡುವ ಏಕೈಕನಾದವನಿರುತ್ತಾನೆ. ಈ ಅನಂತ ದೈವೀ ಪ್ರೇಮ ಹಾಗೂ ಪ್ರೇಮಿಸುವವನ ಸ್ವಲ್ಪ ಇಣುಕುನೋಟದಿಂದ ಮಾನವ ಭಾವೋದ್ರೇಕವನ್ನು ಮೇಲಕ್ಕೆತ್ತಿ ಹಿಡಿಯಲು ಸಾಧ್ಯವಾಗಬಹುದು ಮತ್ತು ವೈಭವೀಕರಿಸಲಾಗಬಹುದು. ಈ ಕಾರಣದಿಂದಾಗಿ ದೇವನ ಪೂಜೆ, ಮೂರ್ತಿಯ ಪೂಜೆ, ಮಾನವ ಚುಂಬಕ ಇಲ್ಲವೆ ಆದರ್ಶ

ಇವುಗಳನ್ನು ಹೀಗಳೆಯಬಾರದು, ಏಕೆಂದರೆ ಈ ಹೆಜ್ಜೆಗಳ ಮೂಲಕ ಮನುಕುಲ ದಿವ್ಯಾನಂದವಿರುವ ಅನಂತದ ಭಾವೋದ್ರೇಕ ಹಾಗೂ ಅತ್ಯಾನಂದ ಇವುಗಳತ್ತ ಚಲಿಸುತ್ತದೆ, ಅದನ್ನು ಸೀಮಿತಗೊಳಿಸಿದಾಗಲೂ ಅವು ಇನ್ನೂ ನಮ್ಮ ಅಪರಿಪೂರ್ಣ ದೃಷ್ಟಿಗೆ ಪ್ರತಿನಿಧಿಸುತ್ತವೆ, ಆಗ ನಾವು ಇನ್ನೂ ನಿಮ್ನತರ ಹೆಜ್ಜೆಗಳನ್ನು ಉಪಯೋಗಿಸಬೇಕಾಗುತ್ತದೆ, ಆ ಹೆಜ್ಜೆಗಳನ್ನು ಪ್ರಕೃತಿ ನಮ್ಮ ಹೆಜ್ಜೆಗಳಿಗಾಗಿ ಕತ್ತರಿಸಿಟ್ಟಿದೆ ಮತ್ತು ಪ್ರಗತಿಯ ಹಂತಗಳನ್ನು ಒಪ್ಪಿಕೊಳ್ಳುತ್ತದೆ.

**(CWSA, 23/159)** **– ಶ್ರೀ ಅರವಿಂದರು**

*

**ಒಳ್ಳೆಯದು ಹಾಗೂ ಅನಿಷ್ಟವಾದುದು ಇವುಗಳಾಚೆ**

ನಾವು ಆತ್ಮದಲ್ಲಿ ಮುಕ್ತರಾಗಿರಬೇಕಾದರೆ, ಕೇವಲ ಪರಮೋಚ್ಚ ಸತ್ಯಕ್ಕೆ ಅಧೀನರಾಗಿರಬೇಕಾದರೆ ಅನಂತನ ಮೇಲೆ ಬಂಧನಕಾರಿಯಾಗುವ ನಮ್ಮ ಮಾನಸಿಕ ಹಾಗೂ ನೈತಿಕ ನಿಯಮಗಳನ್ನು ಬಿಟ್ಟುಕೊಡಬೇಕು ಇಲ್ಲವೆ ನಡತೆಯ ನಮ್ಮ ಅಸ್ತಿತ್ವದಲ್ಲಿರುವ ಅತ್ಯುಚ್ಚವಾದ ಮಾನದಂಡಗಳಲ್ಲಿ ಯಾವ ವಿಷಯವೂ ಪರಮಪೂಜ್ಯ, ಪರಿಪೂರ್ಣ ಇಲ್ಲವೆ ಸನಾತನವಾಗಿರುವುದಿಲ್ಲ. ಹೆಚ್ಚು ಉಚ್ಚತರವಾದ, ಅವಶ್ಯವಾದ ತಾತ್ಕಾಲಿಕ ಮಾನದಂಡಗಳನ್ನು ರೂಪಿಸುವುದು ಭಗವಂತನ ಜಗತ್ತಿನ ಅವನ ಮುನ್ನಡೆಯಲ್ಲಿ ಸೇವೆ ಸಲ್ಲಿಸುವುದಾಗಿರುತ್ತದೆ, ಕಟ್ಟುನಿಟ್ಟಿನ ರೀತಿಯಲ್ಲಿ ಒಂದು ಪರಿಪೂರ್ಣ ಮಾನದಂಡವನ್ನು ಎತ್ತಿನಿಲ್ಲಿಸುವುದು ಶಾಶ್ವತವಾಗಿ ಮುಂದೆ ಹರಿದು ಹೋಗುತ್ತಿರುವ ಜಲರಾಶಿಗಳಿಗೆ ತಡೆಗಟ್ಟನ್ನು ಎತ್ತಿನಿಲ್ಲಿಸಿರುವಂತಿರುತ್ತದೆ.

ಈಗ ಅನಿಷ್ಟವಾಗಿರುವ, ಮತ್ತು ಅದರ ಆಕಾರದಲ್ಲಿ ಬಿಟ್ಟುಕೊಡಲೇಬೇಕಾದ ಸದ್ಯದ ಆಕಾರದಲ್ಲಿ ಈ ವಿಷಯ ಒಮ್ಮೆ ಸರ್ವಸಾಧಾರಣ ಹಾಗೂ ವೈಯಕ್ತಿಕ ಪ್ರಗತಿಗೆ ಸಹಾಯಕವಾಗಿತ್ತು ಮತ್ತು ಅವಶ್ಯವಾಗಿತ್ತು. ನಾವು ಈಗ ಅನಿಷ್ಟವೆಂದು ನಾವು ಭಾವಿಸುವ ಆ ಇನ್ನೊಂದು ವಿಷಯ ಯಾವುದೋ ಭವಿಷ್ಯತ್ತಿನ ಪರಿಪೂರ್ಣತೆಯಲ್ಲಿ, ಇನ್ನೊಂದು ರೂಪದಲ್ಲಿ ಹಾಗೂ ವ್ಯವಸ್ಥೆಯಲ್ಲಿ ಒಂದು ಅಂಶವಾಗಬಹುದು. ಆಧ್ಯಾತ್ಮಿಕ ಸ್ತರದಲ್ಲಿ ಈ ಭಿನ್ನತೆಯನ್ನೂ ಕೂಡ ದಾಟಿ ಆಚೆಗೆ ಹೋಗುತ್ತೇವೆ, ಏಕೆಂದರೆ ನಾವು ಒಳ್ಳೆಯದು ಹಾಗೂ ಅನಿಷ್ಟವಾದದ್ದು

ಎಲ್ಲ ಈ ವಿಷಯಗಳ ಉದ್ದೇಶ ಹಾಗೂ ದೈವೀ ಉಪಯುಕ್ತತೆ ಇವುಗಳನ್ನು ಶೋಧಿಸುತ್ತೇವೆ. ಆಗ ಅವುಗಳಲ್ಲಿರುವ ಮಿಥ್ಯೆಯನ್ನು, ವಿರೂಪಗೊಂಡದ್ದನ್ನು, ಅಜ್ಞಾನದಾದದ್ದನ್ನು ಹಾಗೂ ಮಬ್ಬಾದದ್ದನ್ನು ನಾವು ತಿರಸ್ಕರಿಸಬೇಕಾಗುತ್ತದೆ. ಅದರಲ್ಲಿ ಒಳ್ಳೆಯದಾದದ್ದು ಎಂದು ಕರೆಯಲಾದದ್ದು ಕಡಿಮೆ ರೀತಿಯಲ್ಲಿ ಇರಲಿಲ್ಲ, ಅನಿಷ್ಟವಾದದ್ದು ಎಂದು ಕರೆಯಲಾದದ್ದು ಕಡಿಮೆ ರೀತಿಯಲ್ಲಿ ಇರಲಿಲ್ಲ.

**(CWSA, 23/191)** **– ಶ್ರೀ ಅರವಿಂದರು**

*

**ಪರಿಪೂರ್ಣ ಅತಿಮಾನಸಕ್ರಿಯೆ**

ಪರಿಪೂರ್ಣ ಅತಿಮಾನಸ ಕ್ರಿಯೆ ಯಾವುದೇ ಒಂದು ತತ್ವವನ್ನು ಮಾತ್ರ ಇಲ್ಲವೆ ಸೀಮಿತ ನಿಯಮವನ್ನಾಗಲಿ ಅನುಸರಿಸುವುದಿಲ್ಲ. ಅದು ವ್ಯಕ್ತಿಗತ ಅಹಂಭಾವವಿದ್ದವನ ಮಾನದಂಡವನ್ನಾಗಲಿ ಇಲ್ಲವೆ ಯಾವುದೇ ಸಂಘಟಿತ ಗುಂಪಿನ ಮನಸ್ಸಿನ ಮಾನದಂಡವನ್ನಾಗಲಿ ತೃಪ್ತಿಗೊಳಿಸುವ ಸಂಭವವಿರುವುದಿಲ್ಲ. ಅದು ಜಗತ್ತಿನಲ್ಲಿರುವ ಧನಾತ್ಮಕ ಮನೋಭಾವವುಳ್ಳ ವ್ಯಾವಹಾರಿಕ ಮನುಷ್ಯನ ಸ್ವರೂಪ ಭೂತ (formal) ನೀತಿನಿಷ್ಠನ ದೇಶಭಕ್ತನ ಸಂವೇದನಾತ್ಮಕ ಪರೋಪಕಾರ ಬುದ್ಧಿಯುಳ್ಳವನ, ಆದರ್ಶೀಕರಣಗೊಳಿಸುವ ತತ್ವಜ್ಞಾನಿಯ ಒತ್ತಾಯದ ಬೇಡಿಕೆಗೆ ಅನುಗುಣವಾಗಿರುವುದಿಲ್ಲ. ಜ್ಞಾನೋದಯ ಪಡೆದ ಹಾಗೂ ಮೇಲಕ್ಕೆ ಎತ್ತಿಹಿಡಿಯಲಾದ ಸತ್ತೆ, ಸಂಕಲ್ಪ, ಜ್ಞಾನ ಇವುಗಳ ಒಟ್ಟುಗೂಡುವಿಕೆ ಇರುವ ಶಿಖರಗಳಿಂದ ಸ್ವಯಂಪ್ರೇರಿತವಾಗಿ ಹೊರಹರಿತದಿಂದ ಮುಂದುವರಿಯುತ್ತದೆ, ಅದು ಆಯ್ದುಕೊಂಡ, ಲೆಕ್ಕಾಚಾರ ಮಾಡಿದ, ಪ್ರಮಾಣಕ್ಕನುಸಾರವಾಗಿ ಇರಿಸಿದ ಕ್ರಿಯೆಯಿಂದಲ್ಲ, ಆ ಕ್ರಿಯೆಯನ್ನು ಬೌದ್ಧಿಕ ತರ್ಕ ಇಲ್ಲವೆ ನೀತಿಶಾಸ್ತ್ರದ ಸಂಕಲ್ಪ ಸಿದ್ಧಿಸಿಕೊಳ್ಳಬಹುದು. ಅದರ ಏಕೈಕ ಗುರಿ ನಮ್ಮಲ್ಲಿ ಭಗವಂತನನ್ನು ಅಭಿವ್ಯಕ್ತಗೊಳಿಸುವುದಾಗಿದೆ ಮತ್ತು ಆಗಲಿರುವ ದೈವೀಪ್ರಕಟನೆಯತ್ತ ಜಗತ್ತನ್ನು ಹಾಗೂ ಅದರ ಪ್ರಗತಿಯನ್ನು ಒಟ್ಟಿಗೆ ಕಾಪಾಡಿಕೊಂಡು ಬರುವುದಾಗಿದೆ.

**(CWSA, 23/206)** **– ಶ್ರೀ ಅರವಿಂದರು**

*

## ಕ್ರಿಯೆಯನ್ನು ಪ್ರಾರಂಭಿಸುವಂತೆ ಮಾಡುವ ಪ್ರಚೋದನೆಯ ಪರಿವರ್ತನೆ

ಕರ್ಮಗಳ ಮಾರ್ಗವನ್ನು, ಯಾರೇ ಆಗಲಿ, ನಿಷ್ಕಪಟತನದಿಂದ ಪ್ರವೇಶಿಸಿದರೆ ನಮ್ಮ ಕ್ರಿಯೆಗಳ ಮೊದಲ ನಿಯಮವಾಗಿರುವ ಆಸೆ ಹಾಗೂ ಆವಶ್ಯಕತೆಗಳ ಹಂತವನ್ನು ಅವನು ಹಿಂದೆ ಬಿಟ್ಟುಕೊಡಬೇಕು. ಯೋಗದ ಉಚ್ಚಗುರಿಯನ್ನು ಒಪ್ಪಿಕೊಂಡ ಅವನು ತನ್ನಿಂದ ದೂರ ನಮ್ಮೊಳಗಿರುವ ಭಗವಂತನ ಕೈಗಳಲ್ಲಿ ಅವುಗಳನ್ನು ಇರಿಸಬೇಕು. ಪರಮೋಚ್ಚ ದೈವೀ ಸಾಮರ್ಥ್ಯ ಸಾಧಕನ ಮತ್ತು ಎಲ್ಲರ ಒಳಿತಿಗಾಗಿ ಅವುಗಳೊಡನೆ ವ್ಯವಹರಿಸುತ್ತದೆ. ಪರಿಣಾಮವಾಗಿ ಈ ಶರಣಾಗತಿಯನ್ನು ಮಾಡಿಕೊಂಡ ನಂತರ– ಯಾವಾಗಲೂ ತಿರಸ್ಕರಿಸುವುದನ್ನು ನಿಷ್ಕಪಟತನದಿಂದ ಕೈಕೊಂಡಾಗ– ಆಸೆಯ ಅಹಂಭಾವದ ಲೋಲುಪತೆ ಸ್ವಲ್ಪ ಸಮಯದವರೆಗೆ, ಗತಕಾಲದಿಂದ ಮುಂದುವರಿದುಕೊಂಡು ಬಂದ ಸ್ವಭಾವದ ಪ್ರಚೋದನೆಯಿಂದ ಮರಳಿ ಬರಬಹುದು, ಆದರೆ ಅದು ದೊರಕಿಸಿದ ಆವೇಗವನ್ನು ಬರಿದು ಮಾಡಲು ಮತ್ತು ಮೈವೆತ್ತ ಸತ್ತೆಗೆ, ಅವನ ಅತ್ಯಂತ ಬೋಧಿಸಲಾಗದ ಭಾಗದಲ್ಲಿ, ಅವನ ನರಗಳ, ಪ್ರಾಣಿಕ, ಭಾವನಾತ್ಮಕ ಸ್ವಭಾವ ಇವುಗಳಲ್ಲಿ ಆಸೆಯ ಪ್ರತಿಕ್ರಿಯೆಗಳ ಮೂಲಕ, ಅದರ ದುಃಖ, ತಳಮಳ ಇರುವುದನ್ನು ಉಚ್ಚತರ ಶಾಂತಿ ಇಲ್ಲವೆ ದಿವ್ಯಾನಂದದ ಅದ್ಭುತ ಚಲನೆಗಳನ್ನು ನಿರ್ದಯೆಯಿಂದ ಎದಿರುಬದಿರುಗಳಲ್ಲಿರಿಸಿ ಮುಕ್ತಿಯನ್ನು ಇಲ್ಲವೆ ತನ್ನದೇ ಮೂಲ ದೈವೀಸ್ವಭಾವವನ್ನು ಅರಸುವ ಆತ್ಮಕ್ಕೆ ಆಸೆ ಒಂದು ನಿಯಮವಲ್ಲ. ನಂತರ ಆ ಪ್ರಚೋದನೆಗಳಲ್ಲಿರುವ ಆಸೆಯ ಅಂಶವನ್ನು ಎಸೆದು ಬಿಡಲಾಗುತ್ತದೆ ಇಲ್ಲವೆ ಪಟ್ಟುಹಿಡಿದು ಸತತ ನಿರಾಕರಿಸುವ ಮತ್ತು ಪರಿವರ್ತನೆಗೊಳಿಸುವ ಒತ್ತಡದಿಂದ ನಿರ್ಮೂಲ ಮಾಡಲಾಗುತ್ತದೆ. ಕೇವಲ ಅವುಗಳಲ್ಲಿರುವ ಪರಿಶುದ್ಧ ಶಕ್ತಿ (ಪ್ರವೃತ್ತಿ) ಮೇಲ್ಗಡೆಯಿಂದ ಸ್ಫೂರ್ತಿಗೊಳಪಡಿಸಿದ ಇಲ್ಲವೆ ಹೇರಲಾದ, ಎಲ್ಲ ಕಾರ್ಯ ಹಾಗೂ ಪರಿಣಾಮ ಇವುಗಳಲ್ಲಿ ಸಮಾನ ದಿವ್ಯಾನಂದ ಇರುವುದರ ತೀರ್ಮಾನಕ್ಕೊಳಪಟ್ಟುದುದು ಆಗಿರುವುದನ್ನು ಕೊನೆಯ ಪರಿಪೂರ್ಣತೆಯ ಸಂತೋಷಕರ ಸಾಮರಸ್ಯದಲ್ಲಿ ರಕ್ಷಿಸಲಾಗುವುದು. ನರಗಳಿರುವ ಸತ್ತೆಗೆ ಕಾರ್ಯ ಕೈಕೊಳ್ಳುವುದು ಹಾಗೂ ಸಂತೋಷ ಪಡುವುದು ಸಾಮಾನ್ಯ ನಿಯಮ ಹಾಗೂ ಹಕ್ಕು, ಆದರೆ ವೈಯಕ್ತಿಕ ಆಸೆಯಿಂದ ಅದರ ಕ್ರಿಯೆಯನ್ನು ಹಾಗೂ ಸಂತೋಷವನ್ನು ಆಯ್ದುಕೊಳ್ಳುವುದು ಕೇವಲ ಅಜ್ಞಾನದ ಸಂಕಲ್ಪವಾಗಿರುತ್ತದೆ,

ಅದರ ಹಕ್ಕಾಗಿರುವುದಿಲ್ಲ. ಕೇವಲ ಪರಮೋಚ್ಚ ಹಾಗೂ ವಿಶ್ವಂಭರ ಸಂಕಲ್ಪ ಆಯ್ದುಕೊಳ್ಳಬೇಕು, ಕ್ರಿಯೆ ದೈವೀ ಸಂಕಲ್ಪದ ಕ್ರಿಯಾಶೀಲ ಚಲನೆಯಾಗಿ ಬದಲಾಗಬೇಕು, ಸಂತೋಷಪಡುವುದರ ಸ್ಥಾನದಲ್ಲಿ ಪರಿಶುದ್ಧ ಆಧ್ಯಾತ್ಮಿಕ ಆನಂದದ ಲೀಲೆಯಿರಬೇಕು. ಎಲ್ಲ ವೈಯಕ್ತಿಕ ಸಂಕಲ್ಪ ಉಚ್ಚಸ್ತರದಿಂದ ಬಂದ ತಾತ್ಕಾಲಿಕ ನಿಯೋಜನೆ ಇಲ್ಲವೆ ಅಜ್ಞಾನಿ ಅಸುರನ ದುರಾಕ್ರಮಣವಾಗಿರುತ್ತದೆ.

**(CWSA, 23/209–10) – ಶ್ರೀ ಅರವಿಂದರು**

*

**ದೇವನಿಂದ ಮುಂದೂಡಲಾದ ಕ್ರಿಯೆ**

ಗುರುತಿಸಿಕೊಳ್ಳುವುದಕ್ಕಾಗಿ ಆ ಅತ್ಯುಚ್ಚ ಸಮೀಪಿಸುವಿಕೆಯನ್ನು ಸಿದ್ಧಿಸಿ–ಕೊಳ್ಳುವುದಕ್ಕಿಂತ ಮೊದಲೂ ಕೂಡ ಪರಮೋಚ್ಚ ದೈವೀ ಸಂಕಲ್ಪ ನಮ್ಮಲ್ಲಿ ಒಂದಿಷ್ಟು ಪ್ರಕಟವಾಗಬಹುದು, ಅದು ಆಜ್ಞಾರ್ಥಕ ಪ್ರಚೋದನೆಯಾಗಿರುತ್ತದೆ, ದೇವನಿಂದ ಮುಂದೂಡಲಾದ ಕ್ರಿಯೆಯಾಗಿರುತ್ತದೆ. ನಾವು ಆಗ ಸ್ವಯಂಪ್ರೇರಿತ, ಸ್ವ–ನಿರ್ಧಾರ ಕೈಕೊಳ್ಳುವ ದೈವೀಶಕ್ತಿಯಿಂದ ಕ್ರಿಯೆ ಕೈಕೊಳ್ಳುತ್ತೇವೆ, ಆದರೆ ಹೆಚ್ಚು ಪೂರ್ತಿಯಾದ ಅರ್ಥದ ಹಾಗೂ ಗುರಿಯ ಜ್ಞಾನ ನಂತರ ಮಾತ್ರ ಮೇಲಕ್ಕೆದ್ದು ಬರುತ್ತದೆ. ಇಲ್ಲವೆ ಕ್ರಿಯೆಗಾಗಿ ಪ್ರಚೋದನೆ ಒಂದು ಸ್ಫೂರ್ತಿಯ ರೂಪದಲ್ಲಿ ಇಲ್ಲವೆ ಅಂತರ್ಬೋಧೆಯ ರೂಪದಲ್ಲಿ ಬರಬಹುದು, ಆದರೆ ಅದಕ್ಕೂ ಹೆಚ್ಚಾಗಿ ಮನಸ್ಸಿನಲ್ಲಿ ಬರುವುದಕ್ಕಿಂತ ಹೃದಯದಲ್ಲಿ ಮತ್ತು ದೇಹದಲ್ಲಿ ಬರಬಹುದು. ಇಲ್ಲಿ ಒಂದು ಪರಿಣಾಮಕಾರಿ ನೋಟ ಒಳಗೆ ಪ್ರವೇಶಿಸುತ್ತದೆ, ಆದರೆ ಸಂಪೂರ್ಣ ಹಾಗೂ ನಿಖರವಾದ ಜ್ಞಾನವನ್ನು ಇನ್ನೂ ಮುಂದೂಡಲಾಗಿರುತ್ತದೆ, ಬರುವುದಿದ್ದರೆ ನಂತರ ಬರುತ್ತದೆ. ಆದರೆ ದೈವೀ ಸಂಕಲ್ಪ ಪ್ರಕಾಶಮಯ ಏಕೈಕ ಆಜ್ಞೆಯ ರೂಪದಲ್ಲಿ ಅವರೋಹಣ ಮಾಡಬಹುದು ಇಲ್ಲವೆ ಇಡಿಯಾದ ಗ್ರಹಿಕೆ ಇಲ್ಲವೆ ಗ್ರಹಿಕೆಯ ಮುಂದುವರಿದುಕೊಂಡು ಹೋಗುವ ಸತತ ಹರಿವಿರುತ್ತದೆ, ಅದು ಸಂಕಲ್ಪದಲ್ಲಿ ಇಲ್ಲವೆ ಯೋಚನೆಯಲ್ಲಿ ಇಲ್ಲವೆ ನಿಮ್ನತರ ಅಂಗಗಳಿಂದ ಸ್ವಯಂಪ್ರೇರಿತವಾಗಿ ನೆರವೇರಿಕೆ ಕಂಡುಕೊಂಡ ದಿಶೆಯಲ್ಲಿ ಏನನ್ನು ಕೈಕೊಳ್ಳಬೇಕು ಎಂಬುದನ್ನು ಕುರಿತಾಗಿರುತ್ತದೆ. ಯೋಗ ಅಪರಿಪೂರ್ಣವಾಗಿದ್ದಾಗ ಕೇವಲ ಕೆಲವು ಕ್ರಿಯೆಗಳನ್ನು ಈ ರೀತಿ ಕೈಕೊಳ್ಳಬಹುದು, ಇಲ್ಲವೆ ಸರ್ವ ಸಾಧಾರಣ

ಕ್ರಿಯೆಯೊಂದು ಆ ರೀತಿ ಮುಂದುವರಿದುಕೊಂಡು ಹೋಗಬಹುದು, ಆದರೆ ಕೇವಲ ಅತ್ಯಾನಂದ ಹಾಗೂ ಜ್ಞಾನೋದಯಗಳಿದ್ದ ಅವಧಿಗಳಲ್ಲಿ ಹಾಗಾಗಬಹುದು. ಯೋಗ ಪರಿಪೂರ್ಣವಾದಾಗ ಎಲ್ಲ ಕ್ರಿಯೆ ಈ ಗುಣಲಕ್ಷಣ ಹೊಂದಿದ್ದಾಗಿರುತ್ತದೆ. ಬೆಳೆಯುತ್ತಿರುವ ಪ್ರಗತಿಯ ಮೂರು ಭಿನ್ನ ಹಂತಗಳನ್ನು ನಾವು ನಿಜವಾಗಿ ಗುರುತಿಸಬಹುದು, ಅವುಗಳಲ್ಲಿ ಮೊದಲನೆಯದಾಗಿ ಪ್ರಾಸಂಗಿಕವಾಗಿ ಇಲ್ಲವೆ ಮೇಲಿಂದ ಮೇಲೆ ವೈಯಕ್ತಿಕ ಸಂಕಲ್ಪ ಪರಮೋಚ್ಚ ದೈವೀ ಸಂಕಲ್ಪದಿಂದ ಇಲ್ಲವೆ ಅದರಾಚೆಗಿರುವ ಪ್ರಜ್ಞಾಪೂರ್ಣ ದೈವೀಶಕ್ತಿಯಿಂದ ಜ್ಞಾನೋದಯ ಪಡೆಯುತ್ತದೆ ಇಲ್ಲವೆ ಚಾಲನೆಗೊಳಗಾಗುತ್ತದೆ, ಸತತ ಮುಂಚಿನ ಸ್ಥಾನದಲ್ಲಿ ಬರುತ್ತದೆ ಮತ್ತು ಕೊನೆಗೆ ಆ ದೈವೀ ಸಾಮರ್ಥ್ಯದ ಕ್ರಿಯೆಯಲ್ಲಿ ಗುರುತಿಸಿಕೊಂಡದ್ದಾಗಿ ವಿಲೀನಗೊಳ್ಳುತ್ತದೆ. ಬುದ್ಧಿಮತ್ತೆ, ಹೃದಯ ಹಾಗೂ ಇಂದ್ರಿಯಗಳಿಂದ ನಾವು ಆಳಿಕೆಗೊಳಗಾಗಿದ್ದುದು ಮೊದಲನೆಯ ಹಂತ. ಇವು ದೈವೀ ಸ್ಫೂರ್ತಿಗಾಗಿ ಹಾಗೂ ಮಾರ್ಗದರ್ಶನಕ್ಕಾಗಿ ಅರಸಬೇಕಾಗುತ್ತದೆ ಇಲ್ಲವೆ ಕಾದುಕೊಂಡಿರಬೇಕಾಗುತ್ತದೆ ಮತ್ತು ಅವುಗಳನ್ನು ಯಾವಾಗಲೂ ಕಂಡುಕೊಳ್ಳುವುದಿಲ್ಲ ಇಲ್ಲವೆ ಸ್ವೀಕರಿಸಲಾಗುವುದಿಲ್ಲ. ಎರಡನೆಯ ಹಂತದಲ್ಲಿ ಮಾನವ ಬುದ್ಧಿಮತ್ತೆಯ ಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ಜ್ಞಾನೋದಯ ಪಡೆದ ಇಲ್ಲವೆ ಅಂತರ್ಬೋಧೆಯ ಆಧ್ಯಾತ್ಮೀಕರಣಗೊಂಡ ಮನಸ್ಸು ಬರುತ್ತದೆ, ಬಾಹ್ಯ ಮಾನವ ಹೃದಯದ ಸ್ಥಾನದಲ್ಲಿ ಆಂತರಿಕ ಚೈತ್ಯ ಹೃದಯ ಬರುತ್ತದೆ, ಇಂದ್ರಿಯಗಳ ಸ್ಥಾನದಲ್ಲಿ ಪರಿಶುದ್ಧಗೊಳಿಸಲಾದ ಹಾಗೂ ಸ್ವಾರ್ಥರಹಿತವಾದ ಪ್ರಾಣಿಕ ಶಕ್ತಿ ಬರುತ್ತದೆ. ಮೂರನೆಯ ಹಂತದಲ್ಲಿ ಆಧ್ಯಾತ್ಮೀಕರಣಗೊಂಡ ಮನಸ್ಸಿನ ಮೇಲ್ಗಡೆಗೂ ಕೂಡ ಅತಿಮಾನಸ ಸ್ತರಗಳತ್ತ ಮೇಲಕ್ಕೇರಿ ಹೋಗುತ್ತೇವೆ.

**(CWSA, 23/218–19)** **– ಶ್ರೀ ಅರವಿಂದರು**

*

**ಸಮತೆ**

ಸಮತೆ ಎಂದರೆ ಅದರರ್ಥ ತಾಜಾರೀತಿಯ ಅಜ್ಞಾನ ಇಲ್ಲವೆ ಕುರುಡುತನವಲ್ಲ, ಮತ್ತು ದೃಷ್ಟಿಯ ನಿರುತ್ಸಾಹವಲ್ಲ ಮತ್ತು ಎಲ್ಲ ವರ್ಣಗಳನ್ನು

ಕಳಂಕಿತಗೊಳಿಸುವುದಲ್ಲ. ಅಲ್ಲಿ ವ್ಯತ್ಯಾಸವಿದೆ, ಅಭಿವ್ಯಕ್ತಿಯಲ್ಲಿ ಭಿನ್ನತೆ ಇದೆ, ಮತ್ತು ಈ ಭಿನ್ನತೆಯನ್ನು ನಾವು ಮೆಚ್ಚಿಕೊಳ್ಳುವೆವು– ಕಣ್ಣು ಭಾಗಶಃ ಹಾಗೂ ದೋಷಪೂರಿತ ಪ್ರೇಮ ಹಾಗೂ ದ್ವೇಷ, ಹೊಗಳಿಕೆ ಹಾಗೂ ಜುಗುಪ್ಸೆ, ಸಹಾನುಭೂತಿ ಹಾಗೂ ಕಡೆಗಣಿಸುವಿಕೆ, ಆಕರ್ಷಣೆ ಹಾಗೂ ತಿರಸ್ಕಾರ ಇವುಗಳಿಗಿಂತ ಬಹಳ ಹೆಚ್ಚಿನ ರೀತಿಯಲ್ಲಿ ನ್ಯಾಯಯುತವಾಗಿ ಅದನ್ನು ಮೆಚ್ಚಿಕೊಳ್ಳುವೆವು. ಆದರೆ ಭಿನ್ನತೆಯ ಹಿಂದೆ ನಾವು ಯಾವಾಗಲೂ ದೈವೀ ಸಂಪೂರ್ಣನಾದವನು ಹಾಗೂ ದೈವೀ ಬದಲಾಗದವನು ಅದರೊಳಗೆ ವಾಸಿಸುವುದನ್ನು ನೋಡುತ್ತೇವೆ, ಅವನ ಬಗ್ಗೆ ಭಾವನೆ ತಂದುಕೊಳ್ಳುತ್ತೇವೆ, ತಿಳಿದುಕೊಳ್ಳುತ್ತೇವೆ, ಕನಿಷ್ಠಪಕ್ಷ, ಅದು ನಮ್ಮಿಂದ ಅಡಗಿಕೊಂಡಿದ್ದರೆ ಆ ವಿಶಿಷ್ಟ ಪ್ರಕಟಣೆಯ ಜಾಣತನದ ಉದ್ದೇಶ ಹಾಗೂ ದೈವೀ ಆವಶ್ಯಕತೆಗಳಲ್ಲಿ ವಿಶ್ವಾಸವಿರಿಸುತ್ತೇವೆ, ಅದು ನಮ್ಮ ಮಾನವ ಮಾನದಂಡಗಳಿಗೆ ಸಾಮರಸ್ಯದ್ದು ಹಾಗೂ ಪರಿಪೂರ್ಣವಾದದ್ದು ಎಂದು ತೋರಿಬರಬಹುದು ಇಲ್ಲವೆ ಒರಟಾದದ್ದು ಹಾಗೂ ಪೂರ್ತಿಗೊಳ್ಳದೆ ಇದ್ದದ್ದು ಇಲ್ಲವೆ ಮಿಥ್ಯೆ ಹಾಗೂ ಅನಿಷ್ಟಗಳಿದ್ದದ್ದು ಎಂದು ತೋರಿಬರಬಹುದು.

ಮತ್ತು ಹೀಗೆಯೇ ನಮ್ಮಲ್ಲಿ ಮನಸ್ಸಿನ ಹಾಗೂ ಆತ್ಮದ ಅದೇ ಸಮತೆ ಇರುತ್ತದೆ. ಅದು ಎಲ್ಲ ಘಟನೆಗಳಲ್ಲಿ, ಅವು ದುಃಖದಾಯಕವಾಗಿರಲಿ ಇಲ್ಲವೆ ಸುಖದಾಯಕವಾಗಿರಲಿ, ಸೋಲಿನವಿರಲಿ ಇಲ್ಲವೆ ಯಶಸ್ಸಿನವಿರಲಿ, ಮರ್ಯಾದೆಯವಿರಲಿ, ಇಲ್ಲವೆ ಅವಮರ್ಯಾದೆಯವಿರಲಿ, ಒಳ್ಳೆಯ ಕೀರ್ತಿಯವಿರಲಿ ಇಲ್ಲವೆ ಅಪಕೀರ್ತಿಯವಿರಲಿ, ಸುದೈವದ್ದಾಗಿರಲಿ ಇಲ್ಲವೆ ದುರ್ದೈವದ್ದಾಗಿರಲಿ, ಅವುಗಳಲ್ಲಿ ಇರುವ ಸಮತೆಯಾಗಿರುತ್ತದೆ. ಏಕೆಂದರೆ ಎಲ್ಲ ಘಟನೆಗಳಲ್ಲಿ ನಾವು ಎಲ್ಲ ಕಾರ್ಯಗಳ ದೈವೀ ಪ್ರಭುವಿನ ಸಂಕಲ್ಪವನ್ನು ಹಾಗೂ ಪರಿಣಾಮವನ್ನು ಮತ್ತು ಭಗವಂತನ ಉತ್ಕ್ರಾಂತಿಯ ಅಭಿವ್ಯಕ್ತಿಯಲ್ಲಿ ಒಂದು ಹೆಜ್ಜೆಯನ್ನು ನೋಡುತ್ತೇವೆ. ನೋಡಲು ಆಂತರಿಕ ದೃಷ್ಟಿ ಇದ್ದವರಿಗೆ ಶಕ್ತಿಗಳಲ್ಲಿ, ಅವುಗಳ ಲೀಲೆಯಲ್ಲಿ ಹಾಗೂ ಪರಿಣಾಮಗಳಲ್ಲಿ, ವಸ್ತು–ವಿಷಯಗಳಲ್ಲಿ ಹಾಗೂ ಜೀವಿಗಳಲ್ಲಿ ತನ್ನನ್ನು ಪ್ರಕಟಗೊಳಿಸುತ್ತಾನೆ. ಎಲ್ಲ ವಿಷಯಗಳು ದೈವೀ ಪ್ರಸಂಗದತ್ತ ಚಲಿಸುತ್ತವೆ, ಪ್ರತಿಯೊಂದು ಅನುಭವ, ವೇದನೆ ಹಾಗೂ ಬಯಕೆ, ಅದಕ್ಕೂ ಕಡಿಮೆಯಲ್ಲದ ರೀತಿಯಲ್ಲಿ ಸಂತೋಷ ಹಾಗೂ ತೃಪ್ತಿ ಇವೆಲ್ಲ

ವಿಶ್ವಂಭರ ಚಲನೆಯನ್ನು ಕೊಂಡೊಯ್ಯುವುದಕ್ಕೆ ಅವಶ್ಯವಾದ ಕೊಂಡಿಯಾಗಿರುತ್ತವೆ, ಅದನ್ನು ತಿಳಿದುಕೊಳ್ಳುವುದು ಮತ್ತು ಬೆಂಬಲಿಸುವುದು ನಮ್ಮ ವ್ಯವಹಾರ. ಬಂಡಾಯವೇಳುವುದು, ದೂಷಿಸುವುದು, ಕೂಗಾಟ ಮಾಡುವುದು ಇವೆಲ್ಲ ನಮ್ಮ ಅನೀತಿಯುತ ಹಾಗೂ ಅಜ್ಞಾನದ ಹುಟ್ಟುಗುಣಗಳು. ಬಂಡಾಯ ಉಳಿದೆಲ್ಲ ವಿಷಯಗಳ ಹಾಗೆ, ಲೀಲೆಯಲ್ಲಿ ಅದರ ಉಪಯೋಗಗಳಿರುತ್ತವೆ ಮತ್ತು ಸಹಾಯಕ ಹಾಗೂ ಅವಶ್ಯ ಕೂಡ ಆಗಿರುತ್ತದೆ, ದೈವೀ ಅಭಿವೃದ್ಧಿಗಾಗಿ ಅದರದೇ ಸಮಯ ಹಾಗೂ ಹಂತದಲ್ಲಿ ವಿಧಿಸಲಾಗಿರುತ್ತದೆ. ಆದರೆ ಅಜ್ಞಾನದ ಬಂಡಾಯವೇಳುವಿಕೆ ಆತ್ಮದ ಬಾಲ್ಯದ ಹಂತಕ್ಕೆ ಸೇರಿರುತ್ತದೆ ಇಲ್ಲವೆ ಅದರ ಕಚ್ಚಾ ತಾರುಣ್ಯಕ್ಕೆ ಸೇರಿರುತ್ತದೆ.

ಪಕ್ವವಾದ ಆತ್ಮ ದೂಷಿಸುವುದಿಲ್ಲ, ಆದರೆ ತಿಳಿದುಕೊಳ್ಳುವುದನ್ನು, ಪ್ರಭುತ್ವ ಸಾಧಿಸುವುದನ್ನು ಅರಸುತ್ತದೆ, ಕೂಗಾಟ ಮಾಡುವುದಿಲ್ಲ ಆದರೆ ಸುಧಾರಿಸುವುದಕ್ಕಾಗಿ ಹಾಗೂ ಪರಿಪೂರ್ಣಗೊಳಿಸುವುದಕ್ಕಾಗಿ ಅವಿರತ ಶ್ರಮಗಳನ್ನು ಒಪ್ಪಿಕೊಳ್ಳುತ್ತದೆ, ಆಂತರಿಕವಾಗಿ ಬಂಡಾಯವೇಳುವುದಿಲ್ಲ. ಆದರೆ ವಿಧೇಯವಾಗುವುದಕ್ಕಾಗಿ, ನೆರವೇರಿಕೆಗಾಗಿ ರೂಪಾಂತರಿಸುವುದಕ್ಕಾಗಿ ಶ್ರಮಪಡುತ್ತದೆ. ಆದ್ದರಿಂದ ದೈವೀಪ್ರಭುವಿನ ಕೈಗಳಿಂದ ನಾವು ಎಲ್ಲ ವಿಷಯಗಳನ್ನು ಸಮತೆಯಿರುವ ಆತ್ಮದಿಂದ ಸ್ವೀಕರಿಸುತ್ತೇವೆ.

**(CWSA, 23/224–25)** **– ಶ್ರೀ ಅರವಿಂದರು**

*

**ಯೋಗವನ್ನು ನಂಬಿಕೆಯಿಂದ ಹಾಗೂ ಎದೆಗುಂದುವಿಕೆಯಿಲ್ಲದೆ ಕೈಕೊಳ್ಳಬೇಕು**

ಯೋಗದ ಮಾರ್ಗದಲ್ಲಿ ಮನುಷ್ಯ ದೀರ್ಘಕಾಲ ಮತ್ತು ಏಕಪ್ರಕಾರದಿಂದ ನಡೆದು ಹೋದಾಗಲೂ ಹೃದಯದ ನಂಬಿಕೆ ಅತ್ಯಂತ ಭೀಕರ ವಿರೋಧೀ ಒತ್ತಡದ ಕೆಳಗೆ ಉಳಿದುಕೊಳ್ಳಬಹುದು, ಅದು ಮರೆಯಲ್ಲಿಯೂ ಕೂಡ ಇರಬಹುದು ಇಲ್ಲವೆ ತೋರಿಕೆಗೆ ಹೆಚ್ಚಿನ ಭಾರ ಹೊತ್ತಂತಿರಬಹುದು, ಆದಾಗ್ಯೂ ಅದು ಮರಳಿ ಹೊರಹೊಮ್ಮಲು ಮೊದಲ ಅವಕಾಶವನ್ನು ತೆಗೆದುಕೊಳ್ಳುತ್ತದೆ. ಏಕೆಂದರೆ ಅತ್ಯಂತ ಕೆಟ್ಟ ಎಡವುವಿಕೆಗಳಿದ್ದಾಗ್ಯೂ ಮತ್ತು ದೀರ್ಘಕಾಲ ಉಳಿದುಕೊಂಡ ವಿಫಲತೆ ಇದ್ದಾಗಲೂ ಹೃದಯ ಹಾಗೂ ಬುದ್ಧಿಮತ್ತೆ

ಇವುಗಳಿಗಿಂತ ಉಚ್ಚತರವಾದ ಏನೋ ಒಂದು ಅದನ್ನು ಮೇಲಕ್ಕೆತ್ತಿ ಹಿಡಿಯುತ್ತದೆ. ಆದರೆ ಅನುಭವ ಪಡೆದ ಸಾಧಕನಿಗೂ ಕೂಡ ಇಂತಹ ತಡವರಿಕೆ, ಮೋಡಕವಿಯುವಿಕೆ ಅವನ ಪ್ರಗತಿಯಲ್ಲಿ ವಿಲಂಬನ ತರುತ್ತವೆ ಮತ್ತು ಅವು ಅತಿ ಹೊಸ ಅನುಯಾಯಿಗೆ ಅತಿ ಹೆಚ್ಚಿನ ರೀತಿಯಲ್ಲಿ ಅಪಾಯಕಾರಕವಾಗಿರುತ್ತವೆ. ಆದ್ದರಿಂದ ಪ್ರಾರಂಭದ ಕಾಲದಿಂದಲೇ ಮಾರ್ಗದ ಮೇಲಿನ ಕಷ್ಟಕರ ತೊಂದರೆಯನ್ನು ತಿಳಿದುಕೊಳ್ಳುವುದು ಹಾಗೂ ಒಪ್ಪಿಕೊಳ್ಳುವುದು ಮತ್ತು ನಂಬಿಕೆಯ ಆವಶ್ಯಕತೆಯ ಬಗ್ಗೆ ಭಾವನೆ ತಂದುಕೊಳ್ಳುವುದು ಅವಶ್ಯವಾಗಿರುತ್ತದೆ, ಆ ನಂಬಿಕೆ ಬುದ್ಧಿಮತ್ತೆಗೆ ಕುರುಡಾದದ್ದೆಂದು ಎನಿಸಬಹುದು, ಆದರೆ ಅದು ತರ್ಕಮಾಡುವ ತರ್ಕಕ್ಕಿಂತ ಹೆಚ್ಚು ಜಾಣತನದ್ದಾಗಿರುತ್ತದೆ. ಏಕೆಂದರೆ ಈ ನಂಬಿಕೆ ಮೇಲ್ಗಡೆಯಿಂದ ಬರುವ ಆಧಾರ, ಅದು ರಹಸ್ಯ ಪ್ರಕಾಶದಿಂದ ಚೆಲ್ಲಿಕೊಟ್ಟ ಪ್ರಜ್ವಲಿಸುವ ಛಾಯೆ. ಅದು ಬುದ್ಧಿಮತ್ತೆಯನ್ನು ಹಾಗೂ ಅದರ ವಿವರಗಳನ್ನು ಮೀರಿ ಹೋಗುತ್ತದೆ. ಅದು ಕೂಡಲೆ ಕಂಡುಬರಬಹುದಾದ ತೋರಿಕೆಗಳ ಅಧೀನದಲ್ಲಿರದ ಅಡಗಿರುವ ಜ್ಞಾನದ ಹೃದಯ. ಪಟ್ಟುಹಿಡಿಯುವ ನಮ್ಮ ನಂಬಿಕೆ ಅದರ ಕಾರ್ಯಗಳಲ್ಲಿ ನ್ಯಾಯಯುತವಾಗಿರುತ್ತದೆ ಮತ್ತು ಕೊನೆಗೆ ದೈವೀ ಜ್ಞಾನದ ಸ್ವ–ಅರಿವಿನಲ್ಲಿ ಅದನ್ನು ಮೇಲಕ್ಕೆತ್ತಿಹಿಡಿಯಲಾಗುತ್ತದೆ, ರೂಪಾಂತರಗೊಳಿಸಲಾಗುತ್ತದೆ. ನಾವು ಯಾವಾಗಲೂ ಗೀತೆಯ ಆದೇಶಕ್ಕೆ ಅಂಟಿಕೊಂಡಿರಬೇಕು: "ಎದೆಗುಂದಿಸುವ ಮುಳುಗುವಿಕೆಯಿಂದ ಮುಕ್ತವಾದ ಹೃದಯದಿಂದ ಯೋಗವನ್ನು ಸತತ ಅನ್ವಯಿಸಬೇಕು." ಸಂಶಯಪಡುವ ಬುದ್ಧಿಮತ್ತೆಗೆ ದೈವೀಪ್ರಭುವಿತ್ತ ವಚನವನ್ನು ಪುನರುಚ್ಚರಿಸಬೇಕು: "ನಾನು ನಿಶ್ಚಿತವಾಗಿ ನಿನ್ನನ್ನು ಎಲ್ಲ ಪಾಪ ಹಾಗೂ ಅನಿಷ್ಟಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ, ದುಃಖಪಡುವುದು ಬೇಡ." ಕೊನೆಗೆ ನಂಬಿಕೆಯ ಅಲುಗಾಡುವಿಕೆ ನಿಂತುಹೋಗುತ್ತದೆ, ಏಕೆಂದರೆ ನಾವು ಯಾವಾಗಲೂ ಭಗವಂತನ ಮುಖವನ್ನು ನೋಡುತ್ತೇವೆ ಹಾಗೂ ಸತತ ದೈವೀ ಸಾನ್ನಿಧ್ಯವಿರುವುದರ ಭಾವನೆ ತಂದುಕೊಳ್ಳುತ್ತೇವೆ.

**(CWSA, 23/244–45)** **– ಶ್ರೀ ಅರವಿಂದರು**

*

## ನಮ್ಮ ಕರ್ಮಗಳ ಪ್ರಭು

ಕರ್ಮಗಳ ಪ್ರಭು ನಮ್ಮ ಸ್ವಭಾವವನ್ನು ಪರಿವರ್ತನೆಗೆ ಒಳಪಡಿಸುತ್ತಿರುವಾಗಲೂ ಅದನ್ನು ಗೌರವಿಸುತ್ತಾನೆ, ಅವನು ಯಾವಾಗಲೂ ಸ್ವಭಾವದ ಮೂಲಕ ಕಾರ್ಯ ಕೈಕೊಳ್ಳುತ್ತಾನೆ, ಯಾವುದೋ ನಿರಂಕುಶ ಚಪಲಚಿತ್ತತೆಯಿಂದಲ್ಲ. ನಮ್ಮ ಈ ಅಪರಿಪೂರ್ಣ ಸ್ವಭಾವ ನಮ್ಮ ಪರಿಪೂರ್ಣತೆಯ ಸಲಕರಣೆಗಳನ್ನು ಒಳಗೊಂಡಿರುತ್ತದೆ, ಆದರೆ ಅವು ಅಸಂಬದ್ಧ, ವಿರೂಪಗೊಂಡ, ತಪ್ಪು ಸ್ಥಾನದಲ್ಲಿದ್ದ, ಅಸ್ತವ್ಯಸ್ತತೆಯಿಂದ ಕ್ರಮಬದ್ಧವಲ್ಲದ ಇಲ್ಲವೆ ಅಪರಿಪೂರ್ಣ ರೀತಿಯಲ್ಲಿ ಒಟ್ಟಿಗೆ ಚೆಲ್ಲಿಕೊಡಲ್ಪಟ್ಟಿರುತ್ತವೆ. ಈ ಎಲ್ಲ ಸಲಕರಣೆಗಳನ್ನು ತಾಳ್ಮೆಯಿಂದ ಪರಿಪೂರ್ಣಗೊಳಿಸಬೇಕಾಗುತ್ತದೆ, ಪರಿಶುದ್ಧಗೊಳಿಸಬೇಕಾಗುತ್ತದೆ, ಪುರ್ನಸಂಘಟಿಸಬೇಕಾಗುತ್ತದೆ ಹೊಸಎರಕ ನೀಡಬೇಕಾಗುತ್ತದೆ ಮತ್ತು ಪರಿವರ್ತನೆಗೆ ಒಳಪಡಿಸಬೇಕಾಗುತ್ತದೆ, ಸರಳ ಒತ್ತಾಯ ಹಾಗೂ ತಿರಸ್ಕಾರದಿಂದ ಕೊಚ್ಚಿಬಿಡುವುದಲ್ಲ, ತುಂಡರಿಸುವುದಲ್ಲ, ಹನನ ಮಾಡುವುದಲ್ಲ, ಉಪಯೋಗಕ್ಕೆ ಬಾರದಂತೆ ನಿರ್ನಾಮಗೊಳಿಸುವುದಲ್ಲ. ಈ ಜಗತ್ತು ಹಾಗೂ ಅದರಲ್ಲಿ ಜೀವಿಸುತ್ತಿರುವ ನಾವು ಭಗವಂತನಿಂದ ಸೃಷ್ಟಿಯಾಗಿದ್ದೇವೆ ಹಾಗೂ ಪ್ರಕಟವಾಗಿದ್ದೇವೆ, ಅವನು ಅದರೊಂದಿಗೆ ವ್ಯವಹರಿಸುತ್ತಾನೆ, ಆ ರೀತಿಯನ್ನು ನಮ್ಮ ಸಂಕುಚಿತ ಹಾಗೂ ಅಜ್ಞಾನಿ ಮನಸ್ಸು ತಿಳಿದುಕೊಳ್ಳಲಾರದು, ಅದನ್ನು ತಿಳಿದುಕೊಳ್ಳಬೇಕಾದರೆ ಮನಸ್ಸು ನಿಶ್ಚಲನೀರವತೆಯಲ್ಲಿ ಉಳಿದುಕೊಳ್ಳಬೇಕು ಹಾಗೂ ದೈವೀ ಜ್ಞಾನಕ್ಕೆ ತೆರೆದಿಟ್ಟುಕೊಳ್ಳಬೇಕು. ನಮ್ಮ ದೋಷಗಳಲ್ಲಿ ಒಂದು ಸತ್ಯದ ದ್ರವ್ಯವಿರುತ್ತದೆ, ಅದು ತನ್ನ ಅರ್ಥವನ್ನು ನಮ್ಮ ತಡಕಾಡುವ ಬುದ್ಧಿಮತ್ತೆಗೆ ತೆರೆದಿರಿಸಲು ಶ್ರಮಪಡುತ್ತದೆ. ಮಾನವ ಬುದ್ಧಿಮತ್ತೆ ದೋಷವನ್ನು ಹಾಗೂ ಅದರೊಂದಿಗಿರುವ ಸತ್ಯವನ್ನು ಕತ್ತರಿಸಿಬಿಡುತ್ತದೆ, ಅವುಗಳ ಸ್ಥಾನದಲ್ಲಿ ಅರ್ಧಸತ್ಯ ಹಾಗೂ ಅರ್ಧದೋಷವನ್ನಿರಿಸುತ್ತದೆ, ಆದರೆ ದೈವೀ ವಿವೇಕ ನಮ್ಮ ತಪ್ಪುಗಳು ಮುಂದುವರಿದುಕೊಂಡು ಹೋಗುವುದರಿಂದಾಗುವ ವೇದನೆಯನ್ನು ಸಹಿಸಿಕೊಳ್ಳುತ್ತದೆ, ಹಾಗಾಗುವುದು ಪ್ರತಿಯೊಂದು ಮಿಥ್ಯೆಯಡಿಯಲ್ಲಿ ಅಡಗಿದ ಹಾಗೂ ರಕ್ಷಿಸಲಾದ ಸತ್ಯದತ್ತ ನಾವು ತಲುಪುವವರೆಗೆ ಇರುತ್ತದೆ. ನಮ್ಮ ಪಾಪಗಳು ಅರಸುತ್ತಿರುವ ದೈವೀ ಸಾಮರ್ಥ್ಯ ತಪ್ಪಾದ ದಿಶೆಯಲ್ಲಿ ಇರಿಸಿದ

ಹೆಜ್ಜೆಗಳು, ಆ ಸಾಮರ್ಥ್ಯ ಪಾಪವನ್ನು ಗುರಿಯಾಗಿರಿಸಿಕೊಂಡಿರುವುದಿಲ್ಲ, ಆದರೆ ಪರಿಪೂರ್ಣತೆಯತ್ತ, ದೈವೀ ಸದ್ಗುಣ ಎಂದು ಕರೆಯಬಹುದಾದರತ್ತ ಅದು ಗುರಿಯನ್ನಿರಿಸಿಕೊಂಡಿರುತ್ತದೆ. ಬಹಳಷ್ಟು ಸಲ ಅವು ಒಂದು ಗುಣಲಕ್ಷಣದ ಮೇಲಿರುವ ಪರದೆಗಳಾಗಿರುತ್ತವೆ, ಆ ಗುಣಲಕ್ಷಣವನ್ನು ಪರಿವರ್ತನೆಗೆ ಒಳಪಡಿಸಬೇಕಾಗುತ್ತದೆ, ಮತ್ತು ಈ ಕುರೂಪದ ಮುಸುಕಿನಿಂದ ಹೊರಗೆಳೆದು ತಂದುಕೊಡಬೇಕಾಗಿರುತ್ತದೆ. ಹಾಗಿರದಿದ್ದರೆ ವಿಷಯಗಳ ಪರಿಪೂರ್ಣ ದೂರದರ್ಶನವಿರುವಲ್ಲಿ ಅವು ಅಸ್ತಿತ್ವದಲ್ಲಿರುವುದನ್ನು ಇಲ್ಲವೆ ಮುಂದುವರಿದುಕೊಂಡು ಹೋಗುವುದನ್ನು ಅನುಭವಿಸಲಾಗುತ್ತಿರಲಿಲ್ಲ. ನಮ್ಮ ಕರ್ಮಗಳ ಪ್ರಭು ಭಾರೀ ದೊಡ್ಡ ತಪ್ಪು ಮಾಡುವವನಲ್ಲ, ಉದಾಸೀನವಾದ ಸಾಕ್ಷಿಯಲ್ಲಿ ಇಲ್ಲವೆ ಒಂದಕ್ಕೊಂದು ಸಂಬಂಧವಿಲ್ಲದ ಅನಿಷ್ಟಗಳೊಡನೆ ಚಕ್ಕಂದವಾಡುವವನಲ್ಲ ಅವನು ನಮ್ಮ ಸುಖ ವಿಲಾಸದೊಂದಿಗೆ ತರ್ಕಕ್ಕಿಂತ ಹೆಚ್ಚು, ಸದ್ಗುಣಕ್ಕಿಂತ ಹೆಚ್ಚು ವಿವೇಕಿಯಾಗಿದ್ದಾನೆ.

**(CWSA, 23/245–46)** **– ಶ್ರೀ ಅರವಿಂದರು**

*

**ದೈವೀ ಪ್ರಭುವಿನಲ್ಲಿ ಹಾಗೂ ಅವನ ದೈವೀ ಶಕ್ತಿಯಲ್ಲಿ ವಿಶ್ವಾಸವಿರಿಸಬೇಕು**

ನಮ್ಮ ಸ್ವಭಾವ ಸಂಕಲ್ಪದಲ್ಲಿ ತಪ್ಪಾಗಿರುತ್ತದೆ, ಮತ್ತು ಜ್ಞಾನದಲ್ಲಿ ಅಜ್ಞಾನವನ್ನಿರಿಸಿರುತ್ತದೆ ಅಷ್ಟೇ ಅಲ್ಲ, ಆದರೆ ಸಾಮರ್ಥ್ಯದಲ್ಲೂ ಕೂಡ ದುರ್ಬಲವಾಗಿರುತ್ತದೆ. ಆದರೆ ಅಲ್ಲಿ ದೈವೀ ಸಾಮರ್ಥ್ಯವಿದೆ, ಅದರಲ್ಲಿ ನಾವು ವಿಶ್ವಾಸವಿರಿಸಿದರೆ ಅದು ನಮ್ಮನ್ನು ಕರೆದೊಯ್ಯುತ್ತದೆ ಮತ್ತು ನಮ್ಮ ಕೊರತೆಗಳನ್ನು ಹಾಗೂ ಸಾಮರ್ಥ್ಯಗಳನ್ನು ದೈವೀ ಉದ್ದೇಶಕ್ಕಾಗಿ ಉಪಯೋಗ ಮಾಡುತ್ತದೆ. ನಮಗೆ ಅತಿ ಹತ್ತಿರವಿರುವ ಗುರಿಯಲ್ಲಿ ನಾವು ವಿಫಲರಾದರೆ ಅದಕ್ಕೆ ಕಾರಣ ಆ ವಿಫಲತೆ ಇರಬೇಕು ಎಂದು ಅವನ ಉದ್ದೇಶವಿರುತ್ತದೆ. ಕೂಡಲೇ ಆಗುವ ನಮ್ಮಳವಿನಲ್ಲಿಯ ಪೂರ್ಣಯಶಸ್ಸಿಗಿಂತ ನಮ್ಮ ವಿಫಲತೆ, ರೋಗಿಷ್ಟ–ಪರಿಣಾಮ ಹೆಚ್ಚು ಸತ್ಯವಾದ ವಿಷಯಕ್ಕೆ ಸರಿಯಾದ ಮಾರ್ಗವಾಗಿರುತ್ತದೆ. ನಾವು ವೇದನೆಗೊಳಗಾದರೆ ನಮ್ಮೊಳಗಿರುವ ಏನೋ ಒಂದನ್ನು ಹೆಚ್ಚು ಅಪರೂಪದ ದಿವ್ಯಾನಂದದ ಸಾಧ್ಯತೆಗಾಗಿ ತಯಾರು ಮಾಡುವುದಿರುತ್ತದೆ. ನಾವು ಎಡವಿದರೆ ಕೊನೆಗೆ ಹೆಚ್ಚು ಪರಿಪೂರ್ಣವಾದ ನಡೆದಾಟದ ರಹಸ್ಯವನ್ನು

ಕಲಿತುಕೊಳ್ಳುವುದಿರುತ್ತದೆ. ಶಾಂತಿ, ಪರಿಶುದ್ಧತೆ ಹಾಗೂ ಪರಿಪೂರ್ಣತೆ ಇವುಗಳನ್ನು ದೊರಕಿಸಲು ರೋಷಾವೇಶದ ಅವರಸರದಲ್ಲಿರುವುದು ಬೇಡ. ಶಾಂತಿ ನಮ್ಮದಾಗಿರಬೇಕು, ಆದರೆ ಆ ಶಾಂತಿ ಬರಿದಾದ, ಹಾಳುಗೆಡವಿದ ಸ್ವಭಾವದ ಇಲ್ಲವೆ ಹತವಾದ ಇಲ್ಲವೆ ಊನ ಕ್ಷಮತೆಗಳುಳ್ಳ, ತಳಮಳವನ್ನು ಸಹಿಸಿಕೊಳ್ಳಲು ಕ್ಷಮತೆ ಇಲ್ಲದ್ದಾಗಿರಬಾರದು, ಏಕೆಂದರೆ ಅವು ಗಾಢತೆ, ಜ್ವಾಲೆ ಹಾಗೂ ಶಕ್ತಿ ಹೊಂದಲು ಕ್ಷಮತೆ ಇಲ್ಲದವುಗಳಂತೆ ನಾವು ಮಾಡಿದ್ದೇವೆ. ಪರಿಶುದ್ಧತೆ ನಮ್ಮ ಗುರಿಯಾಗಿರಭೇಕು, ಆ ಪರಿಶುದ್ಧತೆ ಶೂನ್ಯದ್ದಾಗಿರಬಾರದು, ನಿರಾಶಾದಯಕ ಮತ್ತು ಕಟ್ಟುನಿಟ್ಟಿನ ಔದಾಶೀನ್ಯದ್ದಾಗಿರಬಾರದು. ನಮ್ಮಿಂದ ಪರಿಪೂರ್ಣತೆಯನ್ನು ಒತ್ತಾಯದಿಂದ ಬೇಡಲಾಗಿದೆ, ಆದರೆ ಆ ಪರಿಪೂರ್ಣತೆ ತನ್ನ ವ್ಯಾಪ್ತಿಯನ್ನು ಸಂಕುಚಿತ ಮಿತಿಗಳಿಗೆ ಸೀಮಿತಗೊಳಿಸುವುದರಿಂದ ಮಾತ್ರ ಅಸ್ತಿತ್ವದಲ್ಲಿರುವಂತಹದಾಗಿರಬಾರದು ಇಲ್ಲವೆ ದೈವೀ ಅನಂತನ ಎಂದೆಂದಿಗೂ ಸ್ವ–ವಿಸ್ತರಿಸಿಕೊಳ್ಳುವ ಸುರುಳಿ ವಿನ್ಯಾಸ(croll)ಕ್ಕೆ ಒಂದು ಸ್ವೇಚ್ಛಾನುಸಾರ ಪೂರ್ಣಬಿಂದುವನ್ನು ಇರಿಸಬಾರದು. ನಮ್ಮ ಉದ್ದೇಶ ದೈವೀ ಸ್ವಭಾವದಲ್ಲಿ ಬದಲಾಗುವುದಾಗಿದೆ, ಆದರೆ ದೈವೀ ಸ್ವಭಾವ ಮಾನಸಿಕವಾದದ್ದಲ್ಲ, ನೈತಿಕವಾದದ್ದಲ್ಲ, ಆದರೆ ಆಧ್ಯಾತ್ಮಿಕ ಸ್ಥಿತಿಯದಾಗಿರುತ್ತದೆ; ಸಿದ್ಧಿಸಿಕೊಳ್ಳಲು ಕಠಿಣವಾದದ್ದು, ನಮ್ಮ ಬುದ್ಧಿಮತ್ತೆಯಿಂದ ಕಲ್ಪಿಸಿಕೊಳ್ಳುವುದು ಕೂಡ ಕಠಿಣವಾದದ್ದು. ನಮ್ಮ ಕಾರ್ಯಗಳ ದೈವೀ ಹಾಗೂ ಯೋಗದ ಪ್ರಭು ಕೈಕೊಳ್ಳಬೇಕಾದ ಕಾರ್ಯವನ್ನು ತಿಳಿದುಕೊಂಡಿರುತ್ತಾನೆ ಮತ್ತು ಅವನು ತನ್ನದೇ ಸಾಧನದಿಂದ, ಅವನದೇ ರೀತಿಯಿಂದ ಅದನ್ನು ಕೈಕೊಳ್ಳಲು ನಾವು ಅನುವು ಮಾಡಿಕೊಡಬೇಕು.

**(CWSA, 23/246–47) – ಶ್ರೀ ಅರವಿಂದರು**

*

**ದೀರ್ಘಮಾರ್ಗದಲ್ಲಿ ಮೊದಲ ಕೆಲವು ಹೆಜ್ಜೆಗಳು**

ಈ ದೀರ್ಘ ಮಾರ್ಗದ ಮೇಲೆ ಮೊದಲ ಹೆಜ್ಜೆ ನಮ್ಮ ಎಲ್ಲ ಕರ್ಮಗಳನ್ನು ಭಗವಂತನಿಗೆ ಯಜ್ಞಾಹುತಿಯೆಂದು ಮುಡುಪಾಗಿರಿಸುವುದಾಗಿದೆ, ಇದು ಮನಸ್ಸಿನ ಹಾಗೂ ಹೃದಯದ ಮನೋಭಾವ, ಪ್ರಾರಂಭ ಮಾಡಲು ಕಠಿಣವಾಗಿರುವುದಿಲ್ಲ, ಆದರೆ ಅದನ್ನು ಪರಿಪೂರ್ಣವಾದ ನಿಷ್ಕಪಟ–

ತನದ್ದಾಗುವಂತೆ, ಎಲ್ಲವನ್ನೂ ವ್ಯಾಪಿಸಿಕೊಳ್ಳುವಂತೆ ಮಾಡುವುದು ಬಹಳ ಕಠಿಣವಾದದ್ದು. ಎರಡನೆಯ ಹೆಜ್ಜೆ ನಮ್ಮ ಕರ್ಮಗಳ ಫಲಕ್ಕೆ ಅಂಟಿಕೊಳ್ಳುವುದನ್ನು ತ್ಯಾಗಮಾಡುವುದಾಗಿದೆ, ಏಕೆಂದರೆ ಒಂದು ನಿಜವಾದ, ಅತ್ಯಗತ್ಯದ್ದಾದ ಮತ್ತು ಅತ್ಯಂತ ಇಷ್ಟಪಡಬಹುದಾದ ಯಜ್ಞಾಹುತಿಯ ಫಲ– ಅವಶ್ಯವಾದ ಒಂದು ವಿಷಯ– ನಮ್ಮಲ್ಲಿ ದೈವೀ ಸಾನ್ನಿಧ್ಯ, ದೈವೀ ಪ್ರಜ್ಞೆ ಹಾಗೂ ದೈವೀ ಸಾಮರ್ಥ್ಯ ಹೊಂದಿರುವುದಾಗಿದೆ, ಮತ್ತು ಅದನ್ನು ಗಳಿಸಬಹುದಾದರೆ, ಉಳಿದೆಲ್ಲವೂ ಅದಕ್ಕೆ ಅಧಿಕವಾಗಿ ಕೂಡಿಕೊಳ್ಳುತ್ತದೆ. ಇದು ನಮ್ಮ ಪ್ರಾಣಿಕ ಸತ್ತೆಯಲ್ಲಿರುವ, ಆಸೆಯ ಆತ್ಮದಲ್ಲಿರುವ, ಆಸೆಯ ಸ್ವಭಾವದಲ್ಲಿರುವ ಅಹಂಭಾವದ ಸಂಕಲ್ಪ, ಇದನ್ನು ತೆಗೆದು ಹಾಕುವುದು ಆ ಇನ್ನೊಂದಕ್ಕಿಂತ ಹೆಚ್ಚು ಕಠಿಣವಾದದ್ದು. ಮೂರನೆಯ ಹೆಜ್ಜೆ ಕೇಂದ್ರದಲ್ಲಿರುವ ಅಹಂಭಾವವನ್ನು ಮತ್ತು ಕಾರ್ಯಕರ್ತನಲ್ಲಿರುವ ಅಹಂಕಾರದ ಭಾವನೆಯನ್ನು ತೊಡೆದುಹಾಕುವುದಾಗಿದೆ. ಅದು ಎಲ್ಲ ಪರಿವರ್ತನೆಗಳಲ್ಲಿ ಅತ್ಯಂತ ಕಠಿಣವಾದ ಪರಿವರ್ತನೆ ಮತ್ತು ಅದನ್ನು ಅದರ ಪರಿಪೂರ್ಣತೆಗಾಗಿ ಮೊದಲ ಎರಡು ಹೆಜ್ಜೆಗಳನ್ನು ಇರಿಸದೆ ಕೈಕೊಳ್ಳಲಾಗುವುದಿಲ್ಲ, ಆದರೆ ಈ ಮೊದಲ ಹೆಜ್ಜೆಗಳು ಮೂರನೆಯದು ಚಲನೆಗಳಿಗೆ ಕಿರೀಟಪ್ರಾಯವಾಗಿ ತೊಡಿಸಲು ಬರುವವರೆಗೆ ಪೂರ್ಣಗೊಳ್ಳಲಾರವು ಮತ್ತು ಅಹಂಕಾರದ ನಿರ್ಮೂಲನ ಆಸೆಯ ಮೂಲವನ್ನೇ ಬೇರುಸಹಿತ ಕಿತ್ತುಹಾಕುತ್ತದೆ.

**(CWSA, 23/247–48)** **– ಶ್ರೀ ಅರವಿಂದರು**

*

**ಉಪಕರಣದ ಅಹಂಭಾವದ ಬಗ್ಗೆ ಎಚ್ಚರದಿಂದಿರಬೇಕು**

ಪ್ರತಿಯೊಬ್ಬ ಮನುಷ್ಯ ತಿಳಿದೋ, ತಿಳಿಯದೆಯೋ ವಿಶ್ವಂಭರ ದೈವೀ ಸಾಮರ್ಥ್ಯದ ಉಪಕರಣವಾಗಿರುತ್ತಾನೆ. ಆಂತರಿಕ ದೈವೀ ಸಾನ್ನಿಧ್ಯದ ಹೊರತಾಗಿ, ಅಲ್ಲಿ ಒಂದು ಕ್ರಿಯೆ ಇನ್ನೊಂದು ಕ್ರಿಯೆಯಿಂದ ಸಾರಭೂತ ವ್ಯತ್ಯಾಸವನ್ನು ಹೊಂದಿರುವುದಿಲ್ಲ. ಒಂದು ಬಗೆಯ ಉಪಕರಣವಾಗುವಿಕೆ ಇನ್ನೊಂದು ಬಗೆಯ ಉಪಕರಣವಾಗುವುದಕ್ಕೆ ಅಹಂಭಾವದ ಗರ್ವದ ಮೂರ್ಖತನ ಸಮರ್ಥನೆ ನೀಡುವುದಿಲ್ಲ. ಜ್ಞಾನ ಹಾಗೂ ಅಜ್ಞಾನ ಇವುಗಳ

ನಡುವೆ ಇರುವ ವ್ಯತ್ಯಾಸ ದಿವ್ಯಾತ್ಮನ ಕೃಪೆಯಿಂದಿರುತ್ತದೆ. ಭಗವಂತನ ದೈವೀ ಸಾಮರ್ಥ್ಯ ಅದು ಯಾದಿ ಮಾಡಿದುದರತ್ತ ಬೀಸುತ್ತದೆ ಮತ್ತು ಶಬ್ದದಿಂದ ಇಲ್ಲವೆ ಅಧಿಕಬಲದಿಂದ ಇಂದಿನ ದಿನ ಒಂದನ್ನು ಇನ್ನೊಂದನ್ನು ನಾಳೆ ತುಂಬುತ್ತದೆ. ಕುಂಬಾರ ಒಂದು ಗಡಿಗೆಗೆ ಇನ್ನೊಂದಕ್ಕಿಂತ ಹೆಚ್ಚು ಪರಿಪೂರ್ಣ ಆಕಾರ ನೀಡಿದರೆ ಅದರ ಯೋಗ್ಯತೆ (Merit)ಗಡಿಗೆಗಲ್ಲ, ಅದಕ್ಕೆ ಆಕಾರ ನೀಡಿದವನಿಗೆ ಸೇರುತ್ತದೆ. "ಒಂದು ದೈವೀ ಸಾಮರ್ಥ್ಯ ಈ ಮನಸ್ಸಿನಲ್ಲಿ ಹಾಗೂ ದೇಹದಲ್ಲಿ ಕಾರ್ಯಕೈಕೊಳ್ಳುತ್ತದೆ. ನಮ್ಮ ಮನಸ್ಸಿನ ಭಾವನೆ "ಇದು ನನ್ನ ಬಲ" ಇಲ್ಲವೆ "ನನ್ನಲ್ಲಿ ದೈವೀ ಸಾಮರ್ಥ್ಯವನ್ನು ನೋಡಿರಿ" ಎಂದು ಹೇಳುವುದಾಗಿರಬಾರದು, ಅದಕ್ಕೂ ಹೆಚ್ಚಾಗಿ ಮತ್ತು ಅದು ಎಲ್ಲ ಜನರಲ್ಲಿ, ಪಶುವಿನಲ್ಲಿ, ಸಸ್ಯದಲ್ಲಿ, ಲೋಹದಲ್ಲಿ, ಪ್ರಜ್ಞಾಪೂರ್ಣ ಹಾಗೂ ಜೀವಿಸುವವುಗಳಲ್ಲಿ ಮತ್ತು ತೋರಿಕೆಗೆ ಅಚೇತನದವು ಹಾಗೂ ನಿರ್ಜೀವವಾದವುಗಳಲ್ಲಿ ಕಾರ್ಯ ಮಾಡುತ್ತದೆ." ದೈವೀ ಏಕೈಕನಾದವನು ಎಲ್ಲರಲ್ಲಿ ಮತ್ತು ದೈವೀ ಕ್ರಿಯೆಯ ಹಾಗೂ ಕ್ರಮೇಣ ಆಗುವ ಸ್ವ–ಅಭಿವ್ಯಕ್ತಿಯಲ್ಲಿ ಇಡೀ ಜಗತ್ತಿನ ಸಮನಾಗಿರುವ ಉಪಕರಣ ಎಂಬ ವಿಶಾಲ ದೃಷ್ಟಿಕೋನ, ಅದು ನಮ್ಮ ಇಡಿಯಾದ ಅನುಭವವಾದರೆ, ನಮ್ಮಿಂದ ಎಲ್ಲ ರಾಜಸಿಕ ಅಹಂಭಾವವನ್ನು ನಿರ್ಮೂಲ ಮಾಡಲು ಸಹಾಯಕವಾಗುತ್ತದೆ ಮತ್ತು ಸಾತ್ವಿಕ ಅಹಂಕಾರದ ಭಾವನೆ ನಮ್ಮ ಸ್ವಭಾವದಿಂದ ದಾಟಿ ಹೋಗುವುದನ್ನು ಪ್ರಾರಂಭಿಸುತ್ತದೆ.

**(CWSA, 23/250)** **– ಶ್ರೀ ಅರವಿಂದರು**

*

**ದೈವೀ ಪ್ರಭು ನಮ್ಮೊಡನೆ ನಡೆದಾಡುತ್ತಾನೆ**

ಆದರೆ ಅದು ದೀರ್ಘ ಹಾಗೂ ಕಠಿಣ ಪ್ರಯಾಣದ ನಂತರದ ಕೊನೆ ಮತ್ತು ಕರ್ಮಗಳ ಪ್ರಭು ಯೋಗದ ಮಾರ್ಗದಲ್ಲಿ ಅರಸುವವನನ್ನು ಭೇಟಿಮಾಡಲು ಅದು ಬರುವವರೆಗೆ ಕಾದುಕೊಂಡಿರುವುದಿಲ್ಲ ಮತ್ತು ಅವನ ರಹಸ್ಯ, ಇಲ್ಲವೆ ಅರ್ಥ ತೋರಿಸಿಕೊಡುವ ದೈವೀ ಹಸ್ತವನ್ನು ಅವನ ಜೀವನ ಹಾಗೂ ಕ್ರಿಯೆಗಳ ಮೇಲೆ ಇರಿಸಿರುತ್ತಾನೆ. ಅದಾಗಲೇ ಅವನು ಜಗತ್ತಿನಲ್ಲಿ ಅಚೇತನದ ದಟ್ಟ ಪರದೆಗಳ ಹಿಂದೆ ಕರ್ಮಗಳನ್ನು ಸೃಷ್ಟಿಸುವವನಾಗಿ ಹಾಗೂ ಸ್ವೀಕರಿಸುವವನಾಗಿ, ಜೀವನದ ಶಕ್ತಿಯಲ್ಲಿ ಮುಸುಕು ಹಾಕಿಕೊಂಡವನಾಗಿ ಸಾಂಕೇತಿಕ

ದೇವಪ್ರಮುಖರು ಹಾಗೂ ಆಕಾರಗಳಲ್ಲಿ ಮನಸ್ಸಿಗೆ ಗೋಚರವಾಗುತ್ತಿದ್ದ. ಸಮಗ್ರಯೋಗದ ಮಾರ್ಗದಲ್ಲಿ ನಡೆದುಹೋಗುವ ಅದೃಷ್ಟವಿರುವ ಆತ್ಮವನ್ನು ಈ ಮುಸುಕುಗಳಲ್ಲಾದರೂ ಸರಿ, ಅವನು ಮೊದಲು ಭೇಟಿ ಮಾಡುತ್ತಾನೆ. ಇಲ್ಲವೆ ಇನ್ನೂ ಹೆಚ್ಚು ಅಸ್ಪಷ್ಟ ಮುಸುಕುಗಳನ್ನು ಧರಿಸಿ ಅವನು ಒಂದು ಆದರ್ಶವೆಂದು ಇಲ್ಲವೆ ಪ್ರೇಮ, ಒಳ್ಳೆಯದು, ಸೌಂದರ್ಯ ಇಲ್ಲವೆ ಜ್ಞಾನ ಎಂದು ನಾವು ಮಾನಸಿಕವಾಗಿ ಕಲ್ಪನೆ ಮಾಡಿಕೊಳ್ಳಬಹುದು, ಇಲ್ಲವೆ ನಾವು ದೈವೀ ಮಾರ್ಗದತ್ತ ನಮ್ಮ ಹೆಜ್ಜೆಗಳನ್ನು ಹೊರಳಿಸಬಹುದು, ಅವನು ಮನುಕುಲದ ಕರೆಯೆಂದು ಇಲ್ಲವೆ ವಿಷಯಗಳ ಸಂಕಲ್ಪವೆಂದು ನಮ್ಮ ಬಳಿ ಬರಬಹುದು, ಈ ಕರೆ ಹಾಗೂ ಸಂಕಲ್ಪ ಇವು ಜಗತ್ತನ್ನು ಅವಿದ್ಯೆಯ ಕಾಲು ಭಾಗವಾದ ಅಂಧಕಾರ, ಮಿಥ್ಯೆ ಮತ್ತು ವೇದನೆ ಇವುಗಳ ಹಿಡಿತದಿಂದ ಹೊರತರುವತ್ತ ಎಳೆಯುತ್ತವೆ. ನಂತರ ನಾವು ಮಾರ್ಗದ ಮೇಲೆ ಪ್ರವೇಶಿಸಿದಾಗ ಅವನು ನಮ್ಮನ್ನು ಅವನ ವಿಸ್ತಾರವಾದ, ಅಧಿಕಬಲದ, ಮುಕ್ತಗೊಳಿಸುವ ದೈವೀ ಅವ್ಯೆಯಕ್ತತೆಯೆಂದು ನಮ್ಮನ್ನು ಆವರಿಸುತ್ತಾನೆ ಇಲ್ಲವೆ ವ್ಯಕ್ತಿಗತ ದೇವನ ಮುಖ ಹಾಗೂ ರೂಪಗಳೊಂದಿಗೆ ನಮ್ಮ ಬಳಿ ಚಲಿಸುತ್ತಾನೆ. ನಮ್ಮಲ್ಲಿ ಹಾಗೂ ನಮ್ಮ ಸುತ್ತಲೂ ನಮ್ಮನ್ನು ಎತ್ತಿಹಿಡಿಯುವ, ರಕ್ಷಿಸುವ ಹಾಗೂ ಒಲವು ತೋರಿಸುವ ದೈವೀ ಸಾಮರ್ಥ್ಯದ ಭಾವನೆ ನಮಗೆ ಬರುತ್ತದೆ, ಮಾರ್ಗದರ್ಶನ ಮಾಡುವ ದೈವೀ ಧ್ವನಿಯೊಂದನ್ನು ಕೇಳುತ್ತೇವೆ, ನಮ್ಮದಕ್ಕಿಂತ ಹೆಚ್ಚು ಶ್ರೇಷ್ಠವಾದ ಸಂಕಲ್ಪ ನಮ್ಮ ಮೇಲೆ ಆಳಿಕೆ ನಡೆಸುತ್ತದೆ, ಆಜ್ಞಾರ್ಥಕ ದೈವೀ ಶಕ್ತಿ ನಮ್ಮ ಯೋಚನೆ, ಕ್ರಿಯೆ ಹಾಗೂ ದೇಹ ಕೂಡ ಚಲಿಸುವಂತೆ ಮಾಡುತ್ತದೆ, ಎಂದೆಂದಿಗೂ ವಿಸ್ತರಿಸಿಕೊಳ್ಳುತ್ತಿರುವ ದೈವೀ ಪ್ರಜ್ಞೆ ನಮ್ಮದನ್ನು ಅರಗಿಸಿಕೊಳ್ಳುತ್ತದೆ, ಜೀವಂತವಿರುವ ಜ್ಞಾನದ ದೈವೀ ಪ್ರಕಾಶ ಅಂತರಂಗದಲ್ಲಿರುವುದೆಲ್ಲವನ್ನೂ ಬೆಳಗುತ್ತದೆ, ಇಲ್ಲವೆ ದಿವ್ಯಾನಂದವೊಂದು ನಮ್ಮ ಮೇಲೆ ಮುತ್ತಿಗೆ ಹಾಕುತ್ತದೆ, ಮೂರ್ತರೂಪದ್ದಾದ, ಸ್ಥೂಲವೂ ಭಾರದ್ದೂ ಆದ ಮತ್ತು ತೀವ್ರ ಪ್ರಭಾವದಿಂದ ಕುಂದಿಸುವ ದೈವೀ ಅಧಿಕಬಲ ಮೇಲಿನಿಂದ ಒತ್ತುತ್ತದೆ, ನಮ್ಮ ಸ್ವಭಾವದ ದ್ರವ್ಯದಲ್ಲಿಯೇ ಒಳನುಗ್ಗುತ್ತದೆ, ತನ್ನನ್ನು ಸುರಿಯುತ್ತದೆ, ದೈವೀ ಪ್ರಕಾಶ, ದಿವ್ಯಾನಂದ, ಬಲ ಹಾಗೂ ಶ್ರೇಷ್ಠತೆ ಇವುಗಳಿಂದ ಕೂಡಿಕೊಂಡ ಶಾಂತಿ ಅಲ್ಲಿ ಆಸೀನವಾಗಿರುತ್ತದೆ. ಇಲ್ಲವೆ ಅಲ್ಲಿ ವೈಯಕ್ತಿಕ ಜೀವನದ ಹಾಗೆ ಆಪ್ತವಾಗಿರುವ,

ಪ್ರೇಮದ ಹಾಗೆ ಮಧುರವಾಗಿರುವ, ಆಕಾಶದ ಹಾಗೆ ಸುತ್ತುವರಿದಿರುವ, ಆಳವಾದ ಜಲಗಳ ಹಾಗೆ ಆಳವಾಗಿರುತ್ತವೆ. ಒಬ್ಬ ಮಿತ್ರ ನಮ್ಮ ಬದಿಯಲ್ಲಿ ನಡೆದಾಡುತ್ತಾನೆ, ನಮ್ಮ ಹೃದಯದ ರಹಸ್ಯದಲ್ಲಿ ಪ್ರೇಮಿಯೊಬ್ಬ ನಮ್ಮ ಜೊತೆಗಿದ್ದಾನೆ; ಕರ್ಮಗಳ ಹಾಗೂ ಉಗ್ರ ಪರೀಕ್ಷೆಯ ಪ್ರಭು ನಮ್ಮ ಮಾರ್ಗ ತೋರಿಸುತ್ತಾನೆ, ವಸ್ತು–ವಿಷಯಗಳ ಸೃಷ್ಟಿಕರ್ತ ನಮ್ಮನ್ನು ಅವನ ಉಪಕರಣದ ರೂಪದಲ್ಲಿ ಉಪಯೋಗಿಸುತ್ತಾನೆ; ನಾವು ಸನಾತನ ದೈವೀಮಾತೆಯ ತೋಳುಗಳೊಳಗಿದ್ದೇವೆ.

**(CWSA, 23/261–62)** **– ಶ್ರೀ ಅರವಿಂದರು**

*

**ವೈಯಕ್ತಿಕ ಮೋಕ್ಷಕ್ಕಾಗಿರುವ ಆಸೆಯಿಂದಾಚೆಗೆ ಮೇಲೆದ್ದು ಬರಬೇಕು**

ವೈಯಕ್ತಿಕ ಮೋಕ್ಷಕ್ಕಾಗಿರುವ ಆಸೆ, ಅದರ ರೂಪ ಎಷ್ಟೇ ಉಚ್ಚವಾಗಿರಲಿ, ಅದು ಅಹಂಕಾರದ ಪರಿಣಾಮ. ಅದು ನಮ್ಮದೇ ವೈಯಕ್ತಿಕತೆ ಮತ್ತು ವೈಯಕ್ತಿಕ ಒಳ್ಳೆಯದಕ್ಕಾಗಿ ಇಲ್ಲವೆ ಯೋಗಕ್ಷೇಮಕ್ಕಾಗಿ ಇರುವ ಆಸೆ; ವೇದನೆಯಿಂದ ಬಿಡುಗಡೆ ಹೊಂದುವುದಕ್ಕಾಗಿ ಅದರ ಹಾತೊರೆತ, ಯೋಗ್ಯತೆಯಿಂದ ಇರುವುದಕ್ಕಾಗಿರುವ ತೊಂದರೆ ನಿರ್ಮೂಲನೆಗಾಗಿ ಕೂಗು ಇವೆಲ್ಲದರ ಆಧಾರ ಪಡೆದಿರುತ್ತದೆ ಮತ್ತು ಅದನ್ನು ನಮ್ಮ ಅಸ್ತಿತ್ವದ ಪರಮೋಚ್ಚ ಗುರಿಯನ್ನಾಗಿ ಮಾಡುತ್ತದೆ. ಅಹಂಕಾರದ ಈ ಆಧಾರವನ್ನು ಸಂಪೂರ್ಣವಾಗಿ ತಿರಸ್ಕರಿಸುವುದಕ್ಕಾಗಿ ವೈಯಕ್ತಿಕ ಮೋಕ್ಷದ ಆಸೆಯಾಚೆಗೆ ಮೇಲೆದ್ದು ಬರುವುದು ಅವಶ್ಯವಾಗಿರುತ್ತದೆ. ನಾವು ಭಗವಂತನನ್ನು ಅರಸುತ್ತಿದ್ದರೆ ಅದು ಅವನ ಸಲುವಾಗಿಯೇ ಇರಬೇಕು, ಬೇರೆ ಯಾವುದಕ್ಕಾಗಿಯೂ ಅಲ್ಲ. ಅದು ನಮ್ಮ ಸತ್ತೆಯ ಪರಮೋಚ್ಚ ಕರೆ, ಆತ್ಮದ ಅತ್ಯಂತ ಆಳವಾದ ಸತ್ಯ.

ಬಹಳಷ್ಟು ಸಲ ವೈಯಕ್ತಿಕ ಮುಕ್ತಿಗಾಗಿ ಇರುವ ಈ ಆಸೆಯನ್ನು ಇನ್ನೊಂದು ಆಕರ್ಷಣೆ ಜಯಿಸಿದ್ದನ್ನು ನಾವು ನೋಡುತ್ತೇವೆ, ಅದು ಕೂಡ ನಮ್ಮ ಸ್ವಭಾವದ ಉಚ್ಚತರ ಹೊರಳುವಿಕೆಗೆ ಸೇರಿರುತ್ತದೆ ಮತ್ತು ಅದು ಮುಕ್ತ ಆತ್ಮ ಬೆಂಬತ್ತಬೇಕಾದ ಸಾರಭೂತ ಗುಣಲಕ್ಷಣವನ್ನು ತಿಳಿಯಪಡಿಸುತ್ತದೆ. ಅದರದೇ ಸತ್ಯಾಂಶವನ್ನು ಅಮಿತಾಬ ಬುದ್ಧನ ಪುರಾಣದಲ್ಲಿ ಸೂಚಿಸಲಾಗಿದೆ, ಅವನ ಆತ್ಮ

ನಿರ್ವಾಣದ ಹೊಸ್ತಿಲಲ್ಲಿ ಇದ್ದಾಗ ಅವನು ಬೇರೆಡೆ ಹೊರಳಿದ ಹಾಗೂ ಅವನು ಆಗ ಮಾಡಿದ ಪ್ರತಿಜ್ಞೆ (ಆಣೆ) ಹೀಗಿದೆ: "ಏಕೈಕ ಸತ್ತೆ ಮಾತ್ರವೂ ಕೂಡ ವೇದನೆಯಲ್ಲಿ ಹಾಗೂ ಅವಿದ್ಯೆಯಲ್ಲಿ ಉಳಿದುಕೊಂಡಿರುವವರೆಗೆ ನಾನು ಆ ಹೊಸ್ತಿಲನ್ನು ದಾಟಿ ನಿರ್ವಾಣದತ್ತ ಎಂದಿಗೂ ಹೋಗುವುದಿಲ್ಲ." ಅದೇ ಭಾಗವತ ಪುರಾಣದ ಶ್ಲೋಕವನ್ನು ಕುರಿತು ಒತ್ತಿಹೇಳುತ್ತದೆ; "ನನಗೆ ಅಷ್ಟಸಿದ್ಧಿಗಳಿರುವ ಪರಮೋಚ್ಚ ಸ್ಥಿತಿ ಬೇಡ, ಮರುಜನ್ಮ ತಾಳುವುದು ನಿಂತುಹೋಗುವಂತಾಗಬಾರದು. ವೇದನೆ ಪಡುತ್ತಿರುವ ಎಲ್ಲ ಜೀವಿಗಳ ದುಃಖವನ್ನು ನಾನು ಧಾರಣಮಾಡುವಂತಾಗಲಿ, ಅದರಿಂದಾಗಿ ಅವರನ್ನು ದುಃಖದಿಂದ ಮುಕ್ತರನ್ನಾಗಿ ಮಾಡಬಹುದು."

**(CWSA, 23/269–70)** **– ಶ್ರೀ ಅರವಿಂದರು**

*



## ಶ್ರೀಮಾತೆಯವರ ನುಡಿಗಳು

**ಮೊದಲ ಹೆಜ್ಜೆ**

**ಪ್ರಶ್ನೆ:** *"ಯೋಗದ ವಿಧಾನ ಬಾಹ್ಯ ತೋರಿಕೆಗಳಲ್ಲಿ ಮಗ್ನವಾಗಿರುವ ಅಹಂಮನ್ಯತೆಯ ಪ್ರಜ್ಞೆಯ ಸ್ಥಿತಿಯಿಂದ ಮಾನವ ಆತ್ಮ ಹೊರಳುವುದಾಗಿದೆ....."*

*ನಾನು "ಬಾಹ್ಯತೋರಿಕೆಗಳಲ್ಲಿ ಮಗ್ನವಾಗಿರುವ ಅಹಂಮನ್ಯತೆಯ ಪ್ರಜ್ಞೆಯ ಸ್ಥಿತಿ" ಎಂಬುದನ್ನು ತಿಳಿದುಕೊಳ್ಳಲಾಗಲಿಲ್ಲ.*

**ಶ್ರೀಮಾತೆ:** ಜನರು ಬಾಹ್ಯ ವಿಷಯಗಳಲ್ಲಿ ತೊಡಗಿಕೊಂಡಿರುತ್ತಾರೆ, ಅದರರ್ಥ ಪ್ರಜ್ಞೆ ಬಾಹ್ಯ ವಿಷಯಗಳತ್ತ ಹೊರಳಿರುತ್ತದೆ, ಅಷ್ಟೇ...– ಎಂದರೆ ಜೀವನದಲ್ಲಿ ಮನುಷ್ಯ ನೋಡುವ, ತಿಳಿದುಕೊಳ್ಳುವ ಹಾಗೂ ಕಾರ್ಯಕೈಕೊಳ್ಳುವ ಎಲ್ಲ ವಿಷಯಗಳು– ಬದಲಾಗಿ ದೈವೀ ಸಾನ್ನಿಧ್ಯವಾದ, ಆಳಾತಿಆಳದ ಸತ್ಯವನ್ನು ಕಂಡುಕೊಳ್ಳುವತ್ತ ಹೊರಳಿರಬೇಕು. ಇದು ಮೊದಲ ಚಲನೆ. ನೀವು ಕೈಕೊಳ್ಳುವುದರೊಂದಿಗೆ, ನಿಮ್ಮ ಸುತ್ತಲಿರುವ ಜನರೊಂದಿಗೆ, ನೀವು ಉಪಯೋಗಿಸುವ ವಸ್ತುಗಳೊಂದಿಗೆ, ಮತ್ತು ನಂತರ ಜೀವನ; ನಿದ್ರೆ ಮಾಡುವುದು, ಆಹಾರ ಸೇವಿಸುವುದು, ಮಾತನಾಡುವುದು, ಸ್ವಲ್ಪ ಕಾರ್ಯಕೈಕೊಳ್ಳುವುದು, ಸ್ವಲ್ಪ ಮೋಜನ್ನೂ ಕೂಡ ಹೊಂದಿರುವುದು ಮತ್ತು ನಂತರ ಮತ್ತೆ ಪ್ರಾರಂಭ ಮಾಡುವುದು. ಮತ್ತು ನಂತರ ಈ ಮನುಷ್ಯ ಏನು ಹೇಳಿದ, ಆ ಮನುಷ್ಯ ಏನು ಕೈಕೊಂಡ, ಮನುಷ್ಯ ಕೈಕೊಳ್ಳಬೇಕಾದುದೇನು, ಕಲಿತುಕೊಳ್ಳಬೇಕಾದ ಪಾಠ ಯಾವುದು, ಅಭ್ಯಾಸಕ್ಕಾಗಿ ಯಾವ ತಯಾರಿ ಮಾಡಿಕೊಳ್ಳಬೇಕು, ನಂತರ ಮತ್ತೆ ಮನುಷ್ಯನ ಆರೋಗ್ಯ ಸರಿಯಾಗಿದೆಯೋ, ಅವನಿಗೆ ಯೋಗ್ಯನಾಗಿರುವ ಭಾವನೆ ಬರುತ್ತದೆಯೇ ಇತ್ಯಾದಿ.

ಸಾಮಾನ್ಯವಾಗಿ ಮನುಷ್ಯ ಇದನ್ನೇ ಕುರಿತು ಯೋಚಿಸುತ್ತಾನೆ.

ಅದೆಲ್ಲವೂ ಹಿಂಬದಿಗೆ ಸಾಗಿ ಹೋಗುವಂತೆ ಮಾಡುವುದು ಮೊದಲ ಚಲನೆ ಮತ್ತು ಮಹತ್ವದ್ದಾದ ಒಂದು ವಿಷಯ ಅಂತರಂಗದೊಳಗೆ ಹಾಗೂ ಪ್ರಜ್ಞೆಯ ಎದುರಿಗೆ ಬರಲು ಅನುವು ಮಾಡಿಕೊಡುವುದಾಗಿದೆ: ಅದು ಅಷ್ಟೊಂದು ಸುಲಭವಾದದ್ದಲ್ಲ. ಅಂತರಂಗದಲ್ಲಿ ಅಸ್ತಿತ್ವದ, ಜೀವನದ ಉದ್ದೇಶವನ್ನು, ಮನುಷ್ಯ ಏನಾಗಿದ್ದಾನೆ ಎಂಬುದನ್ನು ಕಲಿತುಕೊಳ್ಳುವುದನ್ನು, ಅವನು ಏಕೆ ಜೀವಿಸುತ್ತಾನೆ ಹಾಗೂ ಇದೆಲ್ಲದರ ಹಿಂದೆ ಏನಿದೆ ಎಂಬುದನ್ನು ಶೋಧ ಮಾಡುವುದಿರುತ್ತದೆ. ಇದು ಮೊದಲ ಹೆಜ್ಜೆ: ಅದು ಪ್ರಕಟಣೆಯಲ್ಲಿರುವುದಕ್ಕಿಂತ ಕಾರಣ ಹಾಗೂ ಗುರಿ ಇವುಗಳಲ್ಲಿ ಹೆಚ್ಚು ಆಸಕ್ತಿ ಹೊಂದಿರುವುದಾಗಿದೆ ಎಂದರೆ ಮೊದಲ ಚಲನೆ ಬಾಹ್ಯ ಹಾಗೂ ತೋರಿಕೆಯ ವಿಷಯಗಳೊಡನೆ ಇಡಿಯಾಗಿ

ಗುರುತಿಸಿಕೊಳ್ಳುವುದರಿಂದ ಹಿಂದೆಗೆಯುವುದಿರುತ್ತದೆ ಮತ್ತು ಅಂತರಂಗದಲ್ಲಿ ಒಂದು ಬಗೆಯ ಏಕಾಗ್ರತೆಯನ್ನು ಮನುಷ್ಯ ದೈವೀ ಸತ್ಯವನ್ನು ಶೋಧಿಸುವುದರ ಮೇಲೆ ಕೈಕೊಳ್ಳಬೇಕು.

ಇದು ಮೊದಲ ಚಲನೆ.

**(CWM, 7/348)** **– ಶ್ರೀಮಾತೆ**

*

**ತೋರಿಕೆಗಳ ಹಿಂದೆ ನೋಡಿರಿ**

**ಪ್ರಶ್ನೆ:** *ಇಲ್ಲಿ ಶ್ರೀ ಅರವಿಂದರು ಹೀಗೆ ಹೇಳುತ್ತಾರೆ:* "*ಅಹಂಮನ್ಯತೆ ಇರುವ ಮನಸ್ಸು ಆಸೆಪಡುವ ಇಲ್ಲವೆ ಒಪ್ಪಿಗೆ ನೀಡುವ ಕಾರ್ಯಗತಿ ದೈವೀ ಕಾರ್ಯಗತಿಯಾಗಿರು–ವುದಿಲ್ಲ, ಏಕೆಂದರೆ ಮನಸ್ಸು ದೈವೀಸತ್ಯದತ್ತ ತಲುಪಲು ದೋಷವನ್ನು, ದಿವ್ಯಾನಂದತ್ತ ತಲುಪಲು ವೇದನೆಯನ್ನು, ಪರಿಪೂರ್ಣತೆಯತ್ತ ತಲುಪಲು ಅಪರಿಪೂರ್ಣತೆಯನ್ನು ಉಪಯೋಗಿಸುತ್ತದೆ, ಹೇಗೆ?*

**ಶ್ರೀಮಾತೆ:** ಅದು ಸಂಭವಿಸುತ್ತಿದ್ದ ರೀತಿಯಲ್ಲಿ ಸಂಭವಿಸುತ್ತದೆ, ಅದು ಸರಳವಾಗಿ ರೂಢಿಯ ಒಂದು ವಿಷಯ, ಏಕೆಂದರೆ ನಾವು ಪೃಥ್ವಿಯ ಮೇಲೆ ಮೊದಲು ಎಳೆದುಕೊಂಡ ಉಸಿರಿನಿಂದ ವಿಷಯಗಳನ್ನು ಈ ರೀತಿ ಕಂಡುಕೊಳ್ಳುವುದಕ್ಕೆ ಒಗ್ಗಿಕೊಂಡಿದ್ದೇವೆ, ಹಾಗಾಗಿ ಅದು ನಮಗೆ ಬಹಳ ಸರ್ವಸಾಧಾರಣವಾದದ್ದು ಎಂದು ತೋರಿಬರುತ್ತದೆ, ಏಕೆಂದರೆ ಅದು ಈ ರೀತಿ ಸಂಭವಿಸುತ್ತದೆ. ಆದರೆ ನಾವು ಈ ರೂಢಿಯಿಂದ ಹೊರಬರಲು ಶಕ್ತರಾದರೆ, ವಿಷಯಗಳನ್ನು ಬೇರೆ ದೃಷ್ಟಿಯಿಂದ ನೋಡಲು ಶಕ್ತರಾದರೆ ಕೂಡಲೆ ಪವಾಡ ಸದೃಶ ಅಭಿಪ್ರಾಯವನ್ನು ಭಾವನೆಗೆ ತಂದುಕೊಳ್ಳಲು ಶಕ್ತರಾಗುತ್ತೇವೆ, ಏಕೆಂದರೆ ನಾವು ಇನ್ನು ಮುಂದೆ ಘಟನೆಗಳ ತರ್ಕವನ್ನು ರೂಢಿಗತ ಅರ್ಥದಲ್ಲಿ ನೋಡುವುದಿಲ್ಲ.

ಕಾರಣ ಹಾಗೂ ಪರಿಣಾಮಗಳ, ಎಲ್ಲ ವಿಷಯಗಳಿಂದಾಗುವ ಪರಿಣಾಮಗಳ, ಚಲನೆಗಳ ನಡುವಿರುವ ಸಂಬಂಧದ ಒಂದು ವಿಶಿಷ್ಟ ತರ್ಕವನ್ನು ರೂಢಿಸಿಕೊಂಡಿರುವುದನ್ನು ಕುರಿತು ಒಂದು ವಿಶಿಷ್ಟ ಬಗೆಯ ರೂಢಿಯಿದೆ. ಅದು ಯೋಚನೆ ಕೂಡ ಮಾಡದೆ ನಾವು ಒಪ್ಪಿಕೊಂಡ ಒಂದು ವಾಸ್ತವತೆ, ಏಕೆಂದರೆ

ನಾವು ಯಾವಾಗಲೂ ಅದರೊಳಗೇ ಜೀವಿಸಿದ್ದೇವೆ. ಮತ್ತು ನಾವು ಯಾವಾಗಲೂ ಅದರೊಳಗೇ ಜೀವಿಸದೆ ಹೋಗಿದ್ದರೆ ನಾವದನ್ನು ಇನ್ನೊಂದು ರೀತಿಯಲ್ಲಿ ನೋಡುತ್ತೇವೆ. ಮನುಷ್ಯ ಈ ಪ್ರಯೋಗವನ್ನು ಮಾಡಬಲ್ಲ; ಸದ್ಯ ಜಗತ್ತಿರುವ ಹಾಗೆ ಮನುಷ್ಯ ನಿಯಂತ್ರಣವಾದ (determinism) ದಿಂದ ಹೊರಗೆ ಹೋದರೆ– ಈ ಜಗತ್ತು ಭೌತಿಕ, ಪ್ರಾಣಿಕ, ಮಾನಸಿಕ, ಆಧ್ಯಾತ್ಮಿಕ ಪ್ರಭಾವದ ಇಲ್ಲವೆ ಒಳಸೇರಿಸಿದುದೆಲ್ಲದರ (ಬಹಳ ಪರದೆಯ ಹಿಂದಿರುವ) ಇವುಗಳೆಲ್ಲವುಗಳ ಮಿಶ್ರಣವಾಗಿದೆ, ಸಂಭವಿಸುವ ಪ್ರತಿಯೊಂದೂ ಇದೆಲ್ಲದರ ಸಂಯೋಜನೆಯಾಗಿದೆ– ಅದೆಲ್ಲದರಿಂದ ನಾವು ಹೊರಗೆ ಹೋದರೆ (ಅದನ್ನು ನಾವು ಮಾಡಬಲ್ಲೆವು) ಅದಿದ್ದ ಹಾಗಿರುವ ಭೌತಿಕ ಹಾಗೂ ಪ್ರಾಪಂಚಿಕ ಜಗತ್ತಿನ ಮೇಲ್ಗಡೆಗೆ ಏರಿ ಹೋದರೆ ಮತ್ತು ಇನ್ನೊಂದು ಪ್ರಜ್ಞೆಯಲ್ಲಿ ಪ್ರವೇಶಿಸಿದರೆ ನಾವು ವಿಷಯಗಳನ್ನು ಇಡಿಯಾಗಿ ಭಿನ್ನ ರೀತಿಯಲ್ಲಿ ಗ್ರಹಿಸುತ್ತೇವೆ.

ಮತ್ತು ಆಗ ಪರಿಪೂರ್ಣವಾಗಿ ತರ್ಕಬದ್ಧ, ಅತ್ಯಂತ ಸ್ವಾಭಾವಿಕ ಮತ್ತು ಬಹುಶಃ ಅವಶ್ಯವಾದವುಗಳು ಎಂದು ತೋರಿಬರುವುದರ ಹಿಂದೆ ಒಂದು ಕ್ರಿಯೆಯಿದೆ, ಅದನ್ನು ಮನುಷ್ಯನ ಸರ್ವಸಾಧಾರಣ ಪ್ರಜ್ಞೆಯಿಂದ ನೋಡಿದರೆ ಎಲ್ಲ ಕಾಲದಲ್ಲಿ ಪವಾಡ ಸದೃಶ ಎಂದು ತೋರಿಬರುವುದು. ಅಲ್ಲಿ ಶಕ್ತಿಗಳ, ಪ್ರಜ್ಞೆಗಳ, ಚಲನೆಗಳ, ಪ್ರಭಾವಗಳ ಮಧ್ಯಸ್ಥಿಕೆ ಇದೆ, ಅದು ನಮ್ಮ ಸರ್ವಸಾಧಾರಣ ಪ್ರಜ್ಞೆಗೆ ಗೋಚರಿಸದಂತಹದು, ಗ್ರಹಿಸಲಾಗದಂತಹದು ಮತ್ತು ಪರಿಸ್ಥಿತಿಗಳ ಇಡೀ ಮುನ್ನಡೆಯನ್ನು ಬದಲು ಮಾಡುತ್ತದೆ.

**(CWM, 7/376)** **– ಶ್ರೀಮಾತೆ**

*

**ಒಂದು ಪ್ರಾತಿನಿಧಿಕ ಗುಂಪು**

**ಪ್ರಶ್ನೆ:** *ಶ್ರೀಮಾತೆಯವರು "ಯೋಗ ಸಮನ್ವಯ" ಪುಸ್ತಕದ ಪುಟಗಳನ್ನು ಓದುತ್ತಾರೆ. "ಸ್ವ–ಮುಡಿಪಾಗಿರಿಸುವಿಕೆ". "ಬಹಳಷ್ಟು ಸಲ ಅವನು (ಸಾಧಕ) ತನ್ನ ವೈಯಕ್ತಿಕ ಸಮರವನ್ನು ಹಲವಾರು ಸಲ ಪಟ್ಟು ಹಿಡಿದು ಗೆದ್ದುಕೊಂಡಿದ್ದಾನೆ ಎಂಬುದನ್ನು ಕಂಡುಕೊಂಡಾಗ್ಯೂ ಅದನ್ನು ಮತ್ತೆ ಮತ್ತೆ ಗೆದ್ದುಕೊಳ್ಳಬೇಕಾಗುತ್ತದೆ.*

**ಶ್ರೀಮಾತೆ:**ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತೀರೋ ಎಂಬುದು ನನಗೆ ತಿಳಿಯದು. ಮನುಷ್ಯ ಆಂತರಿಕವಾಗಿ ತನ್ನಲ್ಲಿ ಪರಿಪೂರ್ಣ ಹಾಗೂ ಅನಂತನಾಗಬಲ್ಲ. ಆದರೆ ಬಾಹ್ಯ ಸಿದ್ಧಿ ಅವಶ್ಯವಾಗಿ ಸೀಮಿತವಾಗಿರುತ್ತದೆ ಮತ್ತು ಮನುಷ್ಯ ಸರ್ವಸಾಧಾರಣ ಕ್ರಿಯೆಯನ್ನು ಬಯಸಿದರೆ ಕನಿಷ್ಠಪಕ್ಷ ಕಡಿಮೆ ಸಂಖ್ಯೆಯಲ್ಲಿರುವ ಭೌತಿಕ ಸತ್ತೆಗಳು ಅವಶ್ಯವಾಗಿರುತ್ತವೆ.

ಅದು ಹಳೆಯ ಸಂಪ್ರದಾಯ, ಹನ್ನೆರಡು ಜನರು ಸಾಕಷ್ಟಾಗುತ್ತಾರೆ ಎಂದು ಹೇಳಲಾಗಿತ್ತು, ಆದರೆ ಆಧುನಿಕ ಜೀವನದ ಸಂಕೀರ್ಣತೆಯಲ್ಲಿ ಅದು ಸಾಧ್ಯವಿದೆ ಎಂದು ತೋರಿಬರುವುದಿಲ್ಲ. ಒಂದು ಪ್ರಾತಿನಿಧಿಕ ಗುಂಪು ಇರಲೇಬೇಕು. ಅದರರ್ಥ ನಿಮಗೆ ಅದರ ಬಗ್ಗೆ ಏನೂ ತಿಳಿದಿಲ್ಲ ಇಲ್ಲವೆ ಅದನ್ನು ಕುರಿತು ನೀವು ಸರಿಯಾಗಿ ಕಲ್ಪನೆ ಮಾಡಿಕೊಂಡಿಲ್ಲ, ಆದರೆ ಪರಿವರ್ತನೆಗಾಗಿ ಪ್ರತಿಯೊಬ್ಬನೂ ಜಯಿಸಬೇಕಾದ ಕಠಿಣ ವಿಷಯಗಳಲ್ಲಿ ಒಂದನ್ನು ನೀವು ಪ್ರತಿನಿಧಿಸುತ್ತೀರಿ. ಇದು ಕಠಿಣ ವಿಷಯಗಳು ಹಲವಾರು ಆಗುವಂತೆ ಮಾಡುತ್ತದೆ. (ಶ್ರೀಮಾತೆಯವರು ನಗುತ್ತಾರೆ). ನಾನು ಒಂದೆಡೆ ಎಲ್ಲಿಯೋ ಬರೆದಿಟ್ಟಿದ್ದೇನೆ. ನಾನು ಹೇಳಿದ್ದೇನೆಂದರೆ ಪ್ರತಿಯೊಬ್ಬನೂ ಕಠಿಣ ವಿಷಯಕ್ಕಿಂತ ಹೆಚ್ಚಾಗಿ ಒಂದು ಪರಿಹರಿಸಬೇಕಾದ ಒಂದು ಅಸಾಧ್ಯತೆಯನ್ನು ಪ್ರತಿನಿಧಿಸುತ್ತಾನೆ. ಅಸಾಧ್ಯತೆಗಳ ಇಡೀ ಒಂದು ಕಟ್ಟನ್ನು ದೈವೀ ಕಾರ್ಯವೆಂದು ಹಾಗೂ ದೈವೀ ಸಿದ್ಧಿಯೆಂದು ಪರಿವರ್ತಿಸಬಹುದು. ಪ್ರತಿಯೊಬ್ಬರ ಸಂದರ್ಭದಲ್ಲಿ ಪರಿಹರಿಸಬೇಕಾದ ಅಸಾಧ್ಯತೆಯಿದೆ ಮತ್ತು ಈ ಎಲ್ಲ ಅಸಾಧ್ಯತೆಗಳಿಗೆ ಪರಿಹಾರ ಕಂಡುಕೊಂಡಾಗ ದೈವೀ ಕಾರ್ಯವನ್ನು ಸಿದ್ಧಿಸಿಕೊಳ್ಳಲಾಗಿರುತ್ತದೆ. ಆದರೆ ಈಗ ನಾನು ಹೆಚ್ಚು ವಿನಮ್ರಳಾಗಿದ್ದೇನೆ. "ಅಸಾಧ್ಯತೆ" ಶಬ್ದದ ಸ್ಥಾನದಲ್ಲಿ "ತೊಂದರೆ" ಶಬ್ದವನ್ನಿರಿಸುತ್ತೇನೆ. ಬಹುಶಃ ಅವು ಇನ್ನು ಮುಂದೆ ಅಸಾಧ್ಯತೆಗಳಾಗಿರುವುದಿಲ್ಲ.

ಕೇವಲ ಪ್ರಾರಂಭದಿಂದ ಮತ್ತು ಇನ್ನೂ ಹೆಚ್ಚಾಗಿ ಈಗ ನಮ್ಮ ಗುಂಪು ಗಮನಾರ್ಹವಾಗಿ ಬೆಳೆದಿದೆ, ಎಂದರೆ ಪ್ರತಿಯೊಂದು ಸಲ ಯಾರೋ ಒಬ್ಬರು ಬರುತ್ತಾರೆ, "ನಾನು ಯೋಗಕ್ಕಾಗಿ ಬರುತ್ತಿದ್ದೇನೆ" ಎಂದು ನನಗೆ ಹೇಳುತ್ತಾರೆ "ಓಹ್! ಬೇಡ, ಯೋಗಕ್ಕಾಗಿ ಇಲ್ಲಿಗೆ ಬರುವುದು ಬೇಡ" ಅದು ಇಲ್ಲಿ ಬೇರೆಡೆಯಲ್ಲಿ ಇರುವುದಕ್ಕಿಂತ ಹೆಚ್ಚು ಕಠಿಣವಾಗಿದೆ ಎಂದು ನಾನು ಹೇಳುತ್ತೇನೆ.

ಅದಕ್ಕೆ ಕಾರಣ ಶ್ರೀ ಅರವಿಂದರು ಇಲ್ಲಿ ಬರೆದದ್ದು ಹೀಗಿದೆ: "ನಾನು ಕಾರ್ಯಕೈಕೊಳ್ಳಲು ಬರುತ್ತೇನೆ, ನಾನು ಉಪಯೋಗಕ್ಕೆ ಬರುವಂತಾಗಲು ಬರುತ್ತೇನೆ", ಆಗ ಅದು ಸರಿಯಾಗಿರುತ್ತದೆ. ಯಾರೋ ಒಬ್ಬರು ಬಂದು ನನಗೆ ಬಾಹ್ಯದಲ್ಲಿ ಹಲವಾರು ತೊಂದರೆಗಳಿವೆ, ಅವುಗಳನ್ನು ನಿಭಾಯಿಸಲು ನನಗೆ ಆಗುತ್ತಿಲ್ಲ. ನಾನು ಇಲ್ಲಿಗೆ ಬರಲು ಬಯಸುತ್ತೇನೆ ಏಕೆಂದರೆ ಅದು ನನಗೆ ಸಹಾಯ ಮಾಡುವುದು, ಇಲ್ಲ, ಇಲ್ಲ ಇಲ್ಲಿ ಅದು ಇನ್ನೂ ಹೆಚ್ಚು ಕಠಿಣವಾದದ್ದಾಗುತ್ತದೆ, ನಿನ್ನ ತೊಂದರೆಗಳು ಗಮನಾರ್ಹವಾಗಿ ಹೆಚ್ಚಾಗುತ್ತವೆ. ಮತ್ತು ಅದರರ್ಥ ಅದೇ ಆಗಿರುತ್ತದೆ, ಏಕೆಂದರೆ ಅವು ಇನ್ನು ಮುಂದೆ ಪ್ರತ್ಯೇಕಗೊಳಿಸಿದ ತೊಂದರೆಗಳಾಗಿರುವುದಿಲ್ಲ, ಅವು ಸಾಮೂಹಿಕ ತೊಂದರೆಗಳಾಗಿರುತ್ತವೆ.

ಹಾಗಾಗಿ ನಿಮ್ಮ ವೈಯಕ್ತಿಕ ತೊಂದರೆಗೆ ಅಧಿಕವಾಗಿ ನಿಮಗಾಗಿ ಎಲ್ಲ ತಿಕ್ಕಾಟಗಳಿರುತ್ತವೆ, ಎಲ್ಲ ಸಂಪರ್ಕಗಳಿರುತ್ತವೆ, ಎಲ್ಲ ಪ್ರತಿಕ್ರಿಯೆಗಳಿರುತ್ತವೆ, ಹೊರಗಿನಿಂದ ಬರುವ ಎಲ್ಲ ವಿಷಯಗಳಿರುತ್ತವೆ. ಅದು ನಿಮ್ಮನ್ನು ಪರೀಕ್ಷೆಗೆ ಒಳಪಡಿಸುವುದಕ್ಕಾಗಿರುತ್ತದೆ. ನಿಖರವಾಗಿ ದುರ್ಬಲ ಬಿಂದುವಿನ ಮೇಲೆ, ಪರಿಹರಿಸಲು ಅತ್ಯಂತ ಕಠಿಣವಾದ ತೊಂದರೆಯ ಮೇಲೆ, ಆ ಪರೀಕ್ಷೆ ಇರುತ್ತದೆ. ಅಲ್ಲಿ ನೀವು ಕೇಳಲು ಬಯಸದಂತಹ ಒಂದು ಪದಗುಚ್ಛವನ್ನು ಯಾರೋ ಒಬ್ಬರಿಂದ ಕೇಳುತ್ತೀರಿ, ನಿಮಗೆ ನಿಖರವಾಗಿ ಆಘಾತ ನೀಡುವಂತಹ ಸಂಜ್ಞೆಯನ್ನು ಯಾರೋ ಒಬ್ಬರು ನಿಮ್ಮತ್ತ ಮಾಡುತ್ತಾರೆ. "ಇದು ಸಂಭವಿಸದೆ ಇರುವುದನ್ನು ನಾನು ಎಷ್ಟೊಂದು ಇಷ್ಟಪಡುತ್ತಿದ್ದೆ" ಎಂದು ನೀವು ಹೇಳುವ ವಿಷಯಗಳೇ ಎಂದರೆ ಒಂದು ಪರಿಸ್ಥಿತಿ, ಒಂದು ಚಲನೆ, ಒಂದು ವಾಸ್ತವಿಕತೆ, ಒಂದು ವಸ್ತು, ಅಂತಹದೇನೇ ಆಗಿರಲಿ ಅದನ್ನು ಎದುರಿಸುತ್ತಿರುವುದನ್ನು ನೀವು ಕಂಡುಕೊಳ್ಳುತ್ತೀರಿ. ಸಂಭವಿಸುವುದು ಅದೇ ಆಗಿರುತ್ತದೆ. ಇನ್ನೂ ಹೆಚ್ಚು ಹೆಚ್ಚಾಗಿ ಹಾಗಾಗುತ್ತದೆ. ಏಕೆಂದರೆ ನಿಮ್ಮ ಯೋಗವನ್ನು ನಿಮಗಾಗಿ ಮಾತ್ರ ಆಚರಿಸುವುದಿಲ್ಲ. ನೀವು ಯೋಗವನ್ನು ಪ್ರತಿಯೊಬ್ಬನಿಗಾಗಿ ಆಚರಿಸುತ್ತೀರಿ– ಬಯಸದೆ, ಸ್ವಯಂಚಾಲಿತರಾಗಿ ಕೈಕೊಳ್ಳುತ್ತೀರಿ. ಹಾಗಾಗಿ ಜನರು ನನ್ನಲ್ಲಿಗೆ ಬಂದು "ನಾನು ಇಲ್ಲಿಗೆ ಶಾಂತಿಗಾಗಿ, ಸ್ಥಿರತೆಗಾಗಿ, ವಿರಾಮಕ್ಕಾಗಿ, ನನ್ನ ಯೋಗವನ್ನು ಕೈಕೊಳ್ಳುವುದಕ್ಕಾಗಿ ಬರುತ್ತೇನೆ" ಎಂದು ಹೇಳಿದರೆ ನಾನು "ಇಲ್ಲ,

ಇಲ್ಲ! ಕೂಡಲೆ ಇಲ್ಲಿಂದ ಬೇರೆಡೆಗೆ ಎಲ್ಲಿಯೋ ಹೊರಟು ಹೋಗಿರಿ, ನೀವು ಇಲ್ಲಿಗಿಂತ ಬೇರೆಡೆ ಎಲ್ಲಿಯೋ ಹೆಚ್ಚು ಶಾಂತಿಯಿಂದ ಇರುತ್ತೀರಿ" ಎಂದು ನಾನು ಹೇಳುತ್ತೇನೆ.

ಯಾರೋ ಒಬ್ಬರು ಬಂದು "ಸರಿ, ನಾನಿಲ್ಲಿದ್ದೇನೆ, ದೈವೀ ಕಾರ್ಯಕ್ಕೆ ನನ್ನನ್ನು ಮುಡುಪಾಗಿರಿಸಿಕೊಳ್ಳಬೇಕೆಂಬ ಭಾವನೆ ನನ್ನಲ್ಲಿದೆ, ನೀವು ಕೊಡುವ ಯಾವುದೇ ಕಾರ್ಯವನ್ನು ನಾನು ಕೈಕೊಳ್ಳಲು ನಾನು ತಯಾರಾಗಿದ್ದೇನೆ" ಎಂದು ಹೇಳುತ್ತಾನೆ, ಆಗ ನಾನು "ಒಳ್ಳೆಯದು, ಅದು ಸರಿಯಾಗಿದೆ" ಎಂದು ಹೇಳುತ್ತೇನೆ. "ನಿಮ್ಮಲ್ಲಿ ಸದ್ಭಾವನೆಯಿದ್ದರೆ, ತಾಳ್ಮೆಯಿದ್ದರೆ, ಸ್ವಲ್ಪ ಕ್ಷಮತೆಯಿದ್ದರೆ ಅದು ಸರಿಯಾಗಿರುತ್ತದೆ. ಆದರೆ ನಿಮ್ಮ ಆಂತರಿಕ ಅಭಿವೃದ್ಧಿಗೆ ಅವಶ್ಯವಾದ ಏಕಾಂತವನ್ನು ಕಂಡುಕೊಳ್ಳುವುದಕ್ಕೆ ಎಲ್ಲಿಯೋ ಬೇರೆಯೆಡೆಗೆ ಹೋಗುವುದು ಒಳ್ಳೆಯದು, ಆದರೆ ಇಲ್ಲಿ ಅಲ್ಲ" ಎಂದು ಹೇಳುತ್ತೇನೆ.

**(CWM, 7/410–11)** **– ಶ್ರೀಮಾತೆ**

*

### ವೈಯಕ್ತಿಕ ಪ್ರಯತ್ನ ಹಾಗೂ ಪ್ರಗತಿ

**ಪ್ರಶ್ನೆ:** *ಶ್ರೀಮಾತೆಯವರೆ "ವೈಯಕ್ತಿಕ ಪ್ರಯತ್ನ ಹಾಗೂ ಅಭೀಪ್ಸೆ ಕುರಿತು ನಮ್ಮ ಭಾವನೆ ದೈವೀ ಶಕ್ತಿಯ ಕಾರ್ಯಗತಿಗಳೊಂದಿಗೆ ಅಹಂಮನ್ಯತೆಯಿರುವ ಮನಸ್ಸು ತನ್ನನ್ನು ತಪ್ಪಾದ ಹಾಗೂ ಅಪರಿಪೂರ್ಣವಾದ ರೀತಿಯಲ್ಲಿ ಗುರುತಿಸಿಕೊಳ್ಳಲು ಕೈಕೊಳ್ಳುವ ಪ್ರಯತ್ನದಿಂದ ಬರುತ್ತದೆ" ಇದರ ಅರ್ಥ ನನಗಾಗುತ್ತಿಲ್ಲ.*

**ಶ್ರೀಮಾತೆ:** ಅದನ್ನು ಪರಿಚಿತ ಶಬ್ದಗಳಲ್ಲಿರಿಸಬಹುದು. ವ್ಯಕ್ತಿಗತ ಸತ್ತೆಗೆ, ವಿಶೇಷವಾಗಿ ಅದರಲ್ಲಿರುವ ಪರಿಚಿತ ಶಬ್ದಗಳಲ್ಲಿರಿಸಬಹುದು. ವ್ಯಕ್ತಿಗತ ಸತ್ತೆಗೆ, ವಿಶೇಷವಾಗಿ ಅದರಲ್ಲಿರುವ ಮನಸ್ಸಿಗೆ ತನ್ನದೇ ವೈಯಕ್ತಿಕ ಶಕ್ತಿಗಿಂತ ಇನ್ನಾವುದೋ ಶಕ್ತಿ ಕಾರ್ಯಮಾಡುತ್ತದೆ ಎಂಬುದನ್ನು ಒಪ್ಪಿಕೊಳ್ಳಲು ಹುಟ್ಟುಗುಣದ ಜುಗುಪ್ಸೆ ಇರುತ್ತದೆ. ಅಲ್ಲಿ ಒಂದು ಬಗೆಯ ಹುಟ್ಟುಗುಣವಿದೆ, ಅದು ನಿಮ್ಮದೇ ಹಕ್ಕಿನಿಂದ ಅಭೀಪ್ಸೆಗಾಗಿ ಪ್ರಯತ್ನ, ಪ್ರಗತಿಗಾಗಿ ಸಂಕಲ್ಪ. ಇವು ನಿಮಗೇ ಸೇರಿವೆ ಎಂದು ಪರಿಪೂರ್ಣವಾಗಿ ಮನವರಿಕೆ ಮಾಡಿಕೊಡುತ್ತದೆ, ಹಾಗಾಗಿ ಎಲ್ಲ ಸುಕೃತ (Merit) ನಿಮ್ಮದೇ ಆಗಿರುತ್ತದೆ.

ಕಲೆ, ಸಾಹಿತ್ಯ ಇಲ್ಲವೆ ವಿಜ್ಞಾನ ಇವುಗಳಲ್ಲಿ ನೈಪುಣ್ಯತೆ ಇರುವ ಮನುಷ್ಯನಿಂದ ಹಿಡಿದು, ಏನನ್ನೋ ಉತ್ಪಾದನೆ ಮಾಡುವ, ಏನನ್ನೋ ಅಭ್ಯಾಸ ಮಾಡುವವನಿಂದ ಹಿಡಿದು ತಾನೇ ಸ್ವತಃ ಕೈಕೊಳ್ಳುವವನು ಎಂಬುದರ ಬಗ್ಗೆ ಪರಿಪೂರ್ಣವಾಗಿ ಮನವರಿಕೆ ಮಾಡಿಕೊಂಡಿರುತ್ತಾನೆ, ಅಭೀಪ್ಸೆ ಪಡುವ ಯೋಗಿಯೂ ಕೂಡ, ತನ್ನದೇ ಅಭೀಪ್ಸೆ, ಸಿದ್ಧಿಗಾಗಿ ತನ್ನ ವೈಯಕ್ತಿಕ ಆವಶ್ಯಕತೆ ಇವುಗಳಿಗಾಗಿರುವ ಅತ್ಯುತ್ಸಾಹ ತನ್ನನ್ನು ಮುಂದೂಡುತ್ತದೆ ಎಂದು ತಿಳಿದುಕೊಂಡಿರುತ್ತಾನೆ. ಸ್ವಲ್ಪ ಬೇಗನೆ ಯಾರಾದರೂ ಅವರಿಗೆ (ನನಗೆ ಇದರ ಅನುಭವ ಇದೆ) “ಅದು ಹಾಗಲ್ಲ, ನಿಮ್ಮಲ್ಲಿ ಅಭೀಪ್ಸೆಪಡುವವನು ಭಗವಂತ, ನಿಮ್ಮಿಂದ ಉತ್ಪಾದನೆ ಮಾಡಿಸುವವನು ಭಗವಂತ” ಎಂದು ಹೇಳಿದರೆ ಅವರು ಇನ್ನು ಮುಂದೆ ಏನನ್ನೂ ಕೈಕೊಳ್ಳುವುದಿಲ್ಲ, ಅಂಗಾತ ಬಿದ್ದುಕೊಂಡು ಬಿಡುತ್ತಾರೆ, ಇನ್ನು ಮುಂದೆ ಅದರಲ್ಲಿರುವ ಆಸಕ್ತಿ ಕಳೆದುಕೊಂಡಿರುತ್ತಾರೆ, ಅವರು ಹೇಳುತ್ತಾರೆ: “ಒಳ್ಳೆಯದು, ನಾನಿನ್ನು ಕೈಕೊಳ್ಳುವುದು ಏನೂ ಇಲ್ಲ, ಭಗವಂತ ಅದನ್ನು ಕೈಕೊಳ್ಳಲಿ”, ಶ್ರೀ ಅರವಿಂದರು ಹೇಳಿದುದರ ಅರ್ಥ ಇದೇ ಆಗಿದೆ– ಮನಸ್ಸು ಎಷ್ಟೊಂದು ಅಹಂಕಾರದಿಂದ, ಎಷ್ಟೊಂದು ಗರ್ವದಿಂದ ತುಂಬಿಕೊಂಡಿರುವ ಏನೋ ಒಂದು ಆಗಿರುತ್ತದೆ, ಅದರಿಂದ ಅದು ಅರಸುತ್ತಿರುವ ತೃಪ್ತಿಯನ್ನು ತೆಗೆದು ಹಾಕಿದರೆ ಇನ್ನು ಮುಂದೆ ಸಹಕಾರ ನೀಡುವುದಿಲ್ಲ, ಪ್ರಾಣಿಕವೂ ಕೂಡ ಸಹಕಾರ ನೀಡುವುದಿಲ್ಲ. ಪ್ರಾಣಿಕಕ್ಕೆ ಹಾಗೂ ಮಾನಸಿಕವಾದದ್ದಕ್ಕೆ ಭೌತಿಕ ಬಹಳ ವಿಧೇಯವಾಗಿರುವುದರಿಂದ, ಅದೂ ಕೂಡ ಇನ್ನು ಮುಂದೆ ಸಹಕಾರ ನೀಡುವುದಿಲ್ಲ. ಆಗ ಮನಸ್ಸು ಜಡತ್ವವಿರುವ ಮೊತ್ತದ ಎದುರಿಗಿರುತ್ತದೆ, ಅದು “ಒಳ್ಳೆಯದು, ನಾನಲ್ಲದಿದ್ದರೆ ಸರಿ, ಭಗವಂತ ತನಗೆ ಇಷ್ಟವಾದದ್ದನ್ನು ಕೈಕೊಳ್ಳಲಿ, ಇನ್ನು ಮುಂದೆ ನಾನು ಏನನ್ನೂ, ಎಳ್ಳಷ್ಟೂ ಕೈಕೊಳ್ಳುವುದಿಲ್ಲ” ಎಂದು ಹೇಳುತ್ತದೆ.

ನಿಜವಾಗಿ ಹೆಚ್ಚಿನ ಪ್ರಗತಿ ಸಾಧಿಸಿದ ಜನರ ಪರಿಚಯ ನನಗಿತ್ತು, ಅವರು ವಿಷಯಗಳ ಸತ್ಯ ಹೊರಹೊಮ್ಮುವ ಕ್ಷಣಕ್ಕೆ ಬಹಳ ಹತ್ತಿರವಾಗಿದ್ದರು, ಕೇವಲ ಇದು ಅವರನ್ನು ಹಿಡಿದಿಟ್ಟಿತು, ಏಕೆಂದರೆ ಕ್ರಿಯೆಯ ಮೂಲವಾಗಿರಬೇಕೆಂಬ, ಪ್ರಯತ್ನದ ಮಹತ್ವಕ್ಕೆ ಕಾರಣವಾಗಿರಬೇಕೆಂಬ ಈ ಆವಶ್ಯಕತೆ ಎಷ್ಟೊಂದು ಆಳವಾಗಿ ಬೇರೂರಿತ್ತೆಂದರೆ ಅವರು ಕೊನೆಯ ಹೆಜ್ಜೆಯನ್ನು ಇರಿಸಲಾರದಂತಹರು

ಆದರು. ಕೆಲವೊಮ್ಮೆ ಅದಕ್ಕೆ ವರ್ಷಾನುಗಟ್ಟಲೆ ಸಮಯ ಬೇಕಾಗುತ್ತದೆ. ಅವರಿಗೆ "ಇಲ್ಲ ಅದು ನೀವಲ್ಲ, ಅದು ನಿಮ್ಮೊಳಗಿರುವ ಚೈತನ್ಯ, ಸಂಕಲ್ಪ, ಜ್ಞಾನ ಇದೆಲ್ಲವೂ ಭಗವಂತ ಅದು ನೀವೆಂದು ಕರೆದುಕೊಳ್ಳುವ ನೀವಲ್ಲ, ಇದು ಅವರನ್ನು ಎಷ್ಟೊಂದು ದುಃಖಿತರನ್ನಾಗಿ ಮಾಡುತ್ತದೆಂದರೆ ಅವರು ಇನ್ನೂ ಹೆಚ್ಚಿನ ಏನನ್ನೂ ಕೈಕೊಳ್ಳುವುದಿಲ್ಲ. ಈ ವಾಕ್ಯದಲ್ಲಿ ಅದನ್ನೇ ಶ್ರೀ ಅರವಿಂದರು ಹೇಳಲು ಬಯಸುತ್ತಾರೆ.

ಕೆಲವು ಜನರಿದ್ದಾರೆ, ಅವರಿಗೆ ತಮ್ಮ ಪ್ರತ್ಯೇಕ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬರುವ ಎಷ್ಟೊಂದು ಆವಶ್ಯಕತೆ ಇರುತ್ತದೆ ಎಂದರೆ, ಮೇಲ್ಗಡೆಗೆ ಜಿಗಿದು ಹೋಗುವುದೆಲ್ಲವೂ ಭಗವಂತನ ಸ್ಫೂರ್ತಿಗೊಳಗಾಗಿರುತ್ತದೆ ಇಲ್ಲವೆ ಅವನಿಂದ ಕೈಕೊಳ್ಳಲಾಗಿರುತ್ತದೆ ಎಂದು ಅವರು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಿದರೆ, ಅವರು ತಮ್ಮ ಚಿಕ್ಕ ವ್ಯಕ್ತಿತ್ವಕ್ಕಾಗಿ ಕೊರತೆಗಳ, ದೋಷಗಳ ಇಡೀ ಬದಿಯನ್ನು ಕಾಪಾಡಿಕೊಂಡು ಬರುತ್ತಾರೆ, ತಮ್ಮ ಕೊರತೆಗಳ ಬಗ್ಗೆ ಮೆಚ್ಚುಗೆಯನ್ನು ಹೊಂದಿರುತ್ತಾರೆ, ಅದರಿಂದಾಗಿ, ಕನಿಷ್ಠ ಪಕ್ಷ, ಅವರದೆನಿಸುವ ಏನೋ ಒಂದು ಉಳಿದುಕೊಳ್ಳುತ್ತದೆ, ಅದು ನಿಜವಾಗಿ ಅವರದೇ, ಅವರ ವೈಯಕ್ತಿಕ ಆಸ್ತಿ: "ಸುಂದರವಾದ, ಪ್ರಕಾಶಮಯವಾದ ಎಲ್ಲವೂ ಭಗವಂತ, ಎಲ್ಲ ಭೀಕರ ವಿಷಯಗಳು– ಅದು ಸ್ವತಃ ನಾನೇ" ಆದರೆ ಅದು ದೊಡ್ಡ ಆತ್ಮ, ಮನುಷ್ಯ ಅದನ್ನು ಸ್ಪರ್ಶಿಸಬಾರದು!

**(CWM, 7/357–58)** **– ಶ್ರೀಮಾತೆ**

*

**ಅತ್ಯಂತ ಹೆಚ್ಚಿನ ವಿಷಯಗಳೆಂದು ತಯಾರು ಮಾಡುವ ಎರಡು ವಿಷಯಗಳು**

**ಪ್ರಶ್ನೆ:** *ಇಲ್ಲಿ ಹೀಗೆ ಬರೆದಿದ್ದು ಇದೆ: "ನಮ್ಮ ಉದಿಷ್ಟ ವಿಷಯ ಸ್ವತಃ ಭಗವಂತನೇ ಆಗಿರಬೇಕು, ತಿಳಿದೋ, ತಿಳಿಯದೆಯೋ ನಮ್ಮ ರಹಸ್ಯ ಸ್ವಭಾವದಲ್ಲಿ ಏನೋ ಒಂದು ಯಾವಾಗಲೂ ಅಭೀಪ್ಸೆ ಪಡುತ್ತದೆ" ಮಧುರ ಮಾತೆಯವರೆ, ಈ ಅಭೀಪ್ಸೆಪಡುವ ಏನೋ ಒಂದು ಯಾವುದು?*

**ಶ್ರೀಮಾತೆ:** ಅದು ಸತ್ತೆಯ ಒಂದು ಭಾಗ, ಎಲ್ಲರಲ್ಲಿ ಅದೇ ಆಗಿರುವುದಿಲ್ಲ ಮತ್ತು ಅದು ಹುಟ್ಟುಗುಣದಿಂದ ಚೈತ್ಯದ ಪ್ರಭಾವಕ್ಕೆ ತೆರೆದುಕೊಂಡಿರುತ್ತದೆ.

ಅಲ್ಲಿ ಯಾವಾಗಲೂ ಒಂದು ಭಾಗವಿರುತ್ತದೆ– ಕೆಲವೊಮ್ಮೆ ನಿಜವಾಗಿ ದಟ್ಟ ಪರದೆ ಅದನ್ನು ಆವರಿಸಿಕೊಂಡಿರುತ್ತದೆ, ಅದರ ಬಗ್ಗೆ ನಮಗರಿವಿರುವುದಿಲ್ಲ– ಅದು ಸತ್ತೆಯಲ್ಲಿ ಚೈತ್ಯದತ್ತ ಹೊರಳಿಕೊಂಡಿರುತ್ತದೆ ಹಾಗೂ ಅದರ ಪ್ರಭಾವವನ್ನು ಸ್ವೀಕರಿಸುತ್ತದೆ. ಇದು ಚೈತ್ಯಪ್ರಜ್ಞೆ ಹಾಗೂ ಬಾಹ್ಯಪ್ರಜ್ಞೆ ಇವುಗಳ ನಡುವೆ ಮಧ್ಯಸ್ಥಿಕೆ ವಹಿಸುತ್ತದೆ.

ಪ್ರತಿಯೊಬ್ಬನಲ್ಲಿ ಅದೇ ವಿಷಯವಾಗಿರುವುದಿಲ್ಲ, ಪ್ರತಿಯೊಬ್ಬನಲ್ಲಿ ಅದು ಭಿನ್ನ ವಾಗಿರುತ್ತದೆ. ಅದು ಅವನ ಸ್ವಭಾವದಲ್ಲಿರುವ ಇಲ್ಲವೆ ಚಾರಿತ್ರ್ಯದಲ್ಲಿರುವ ಬಿಂದು, ಅದರ ಮೂಲಕ ಅವನು ಚೈತ್ಯವನ್ನು ಮತ್ತು ಚೈತ್ಯದ ಪ್ರಭಾವವನ್ನು ಸ್ವೀಕರಿಸುವ ಸ್ಥಳವನ್ನು ಸ್ಪರ್ಶಿಸಬಲ್ಲನು, ಅದು ಜನರ ಮೇಲೆ ಅವಲಂಬಿಸಿರುತ್ತದೆ, ಏಕೆಂದರೆ ಪ್ರತಿಯೊಬ್ಬನೂ ಭಿನ್ನನಾಗಿರುತ್ತಾನೆ, ಪ್ರತಿಯೊಬ್ಬನಲ್ಲಿ ಇದರಂತಹ ಬಿಂದುವಿರುತ್ತದೆ.

ನಿಮ್ಮನ್ನು ಹಠಾತ್ತನೇ ಮುಂದೂಡುವ ವಿಷಯಗಳ ಬಗ್ಗೆ ಕೂಡ ಭಾವನೆ ತಂದುಕೊಳ್ಳಬಹುದು, ಅವೆಂದರೆ ನಿಮ್ಮನ್ನು ಮೇಲಕ್ಕೆತ್ತಲಾದ ಭಾವನೆ ಹಾಗೂ ಶ್ರೇಷ್ಠತರವಾದ ಏನೋ ಒಂದರ ದ್ವಾರ ತೆರೆದಿರಿಸುವ ಭಾವನೆ. ಅದು ಹಲವಾರು ವಿಷಯಗಳಿಂದ ಕೂಡಿರಬಹುದು, ಅದು ಪ್ರತಿಯೊಬ್ಬನ ಸ್ವಭಾವದ ಮೇಲೆ ಅವಲಂಬಿಸಿರುತ್ತದೆ. ಯಾವುದೊಂದು ವಿಷಯದ ಮೇಲೆ ಉತ್ಸಾಹ ತುಂಬುವ ಸತ್ತೆಯ ಒಂದು ಭಾಗ ಅದಾಗಿರುತ್ತದೆ, ಅದು ಉತ್ಸಾಹಕ್ಕಾಗಿ ಕ್ಷಮತೆಯುಳ್ಳದ್ದು. ಎರಡು ಪ್ರಧಾನ ವಿಷಯಗಳಿವೆ: ಉತ್ಸಾಹಕ್ಕಾಗಿ ಇರುವ ಈ ಕ್ಷಮತೆ, ಅದು ಹೆಚ್ಚಿನ ಇಲ್ಲವೆ ಕಡಿಮೆ ಮಟ್ಟದ ಜಡತ್ವದಿಂದ ಹೊರಬರುವಂತೆ ಮಾಡುತ್ತದೆ, ಅದರಿಂದಾಗಿ ಮನುಷ್ಯನನ್ನು ಎಚ್ಚರಗೊಳಿಸುವ ಆ ವಿಷಯದಲ್ಲಿ ತನ್ನನ್ನು ಇಡಿಯಾಗಿ ಚೆಲ್ಲಿಕೊಡುವಂತಾಗುತ್ತದೆ. ಉದಾಹರಣೆಗೆ ಕಲಾಕಾರನನ್ನು ಅವನ ಕಲೆಗೆ, ವಿಜ್ಞಾನಿಯನ್ನು ಅವನ ವಿಜ್ಞಾನದತ್ತ ಎಚ್ಚರಗೊಳಿಸುವಂತಾಗುತ್ತದೆ. ಸರ್ವಸಾಧಾರಣವಾಗಿ ಸೃಷ್ಟಿಸುವ ಇಲ್ಲವೆ ನಿರ್ಮಾಣ ಮಾಡುವ ಪ್ರತಿಯೊಬ್ಬ ಮನುಷ್ಯನಿಗೆ ಒಂದು ತೆರೆದಿರಿಸಿಕೊಳ್ಳುವಿಕೆ ಇರುತ್ತದೆ, ಆ ತೆರೆದಿರಿಸಿಕೊಳ್ಳುವಿಕೆ ವಿಶಿಷ್ಟ ಕಾರ್ಯವಿಧಾನಕ್ಕಾಗಿ, ವಿಶಿಷ್ಟ ಸಾಧ್ಯತೆಗಾಗಿ ಅವನಲ್ಲಿ ಉತ್ಸಾಹವನ್ನು ಸೃಷ್ಟಿಸುವುದಕ್ಕಾಗಿ ಇರುತ್ತದೆ. ಇದು ಕ್ರಿಯಾಶೀಲವಾಗಿದ್ದಾಗ ಸತ್ತೆಯಲ್ಲಿಯ

ಏನೋ ಒಂದು ಎಚ್ಚತ್ತುಕೊಳ್ಳುತ್ತದೆ ಮತ್ತು ಕಾರ್ಯಕೈಕೊಳ್ಳುತ್ತಿರುವುದರಲ್ಲಿ ಬಹುಮಟ್ಟಿಗೆ ಇಡೀ ಸತ್ತೆಯ ಭಾಗವಹಿಸುವಿಕೆ ಇರುತ್ತದೆ.

ಅಲ್ಲಿ ಇದಿದೆ. ಮತ್ತು ಕೃತಜ್ಞತೆಯನ್ನು ಕುರಿತು ಜನ್ಮಸಿದ್ಧ (ಸ್ವಾಭಾವಿಕ) ಕಾರ್ಯವಿಧಾನವಿರುವ ಜನರಿರುತ್ತಾರೆ, ಅವರಿಗೆ ಪ್ರತಿಸ್ಪಂದಿಸುವ ಅತ್ಯುತ್ಸಾಹದ ಆವಶ್ಯಕತೆ ಇರುತ್ತದೆ, ಅವರು ಏನೋ ಒಂದಕ್ಕೆ ಸಹಾನುಭೂತಿ, ಭಕ್ತಿ, ಸಂತೋಷ ಇವುಗಳೊಡನೆ ಪ್ರತಿಸ್ಪಂದಿಸುತ್ತಾರೆ, ಆ ಏನೋ ಒಂದನ್ನು ಕುರಿತು ಅದು ಇಡೀ ಜೀವನದ ಹಿಂದೆ, ಅತ್ಯಂತ ಚಿಕ್ಕ ಅಂಶದ ಹಾಗೂ ಜೀವನದ ಅತ್ಯಂತ ಚಿಕ್ಕ ಘಟನೆಯ ಹಿಂದೆ ಒಂದು ಅದ್ಭುತವಿರುವ ಭಾವನೆ ತಂದುಕೊಳ್ಳುತ್ತಾರೆ. ಎಲ್ಲ ವಿಷಯಗಳ ಹಿಂದಿರುವ ಅನಂತ ದೈವೀ ಕೃಪೆಯ ಈ ಸಾರ್ವಭೌಮ ಸೌಂದರ್ಯದ ಭಾವನೆ ತಂದುಕೊಳ್ಳುತ್ತಾರೆ.

ಯಾವುದರ ಬಗೆಗೂ ಜ್ಞಾನವಿಲ್ಲದ ಜನರ ಪರಿಚಯ ನನಗಿತ್ತು, ಅವರು ಅತಿ ಕಡಿಮೆ ಶಿಕ್ಷಣ ಪಡೆದಿದ್ದರು, ಅವರ ಮನಸ್ಸುಗಳು ಒಟ್ಟಿನಲ್ಲಿ ಸರ್ವಸಾಧಾರಣ ಬಗೆಯವಾಗಿದ್ದವು, ಅವರಲ್ಲಿ, ಕೃತಜ್ಞತೆ, ಸಹಾನುಭೂತಿಗಳಿಗಾಗಿ ಕ್ಷಮತೆಯಿತ್ತು, ಈ ಕ್ಷಮತೆ ತನ್ನನ್ನು ಕೊಟ್ಟುಕೊಳ್ಳುತ್ತದೆ ಅರ್ಥಮಾಡಿಕೊಳ್ಳುತ್ತದೆ, ಧನ್ಯವಾದಗಳನ್ನು ಅರ್ಪಿಸುತ್ತದೆ.

ಸರಿ, ಅವರಿಗೆ ಚೈತ್ಯದೊಡನೆ ಸಂಪರ್ಕ ಮೇಲಿಂದ ಮೇಲೆ ಆಗುತ್ತಿತ್ತು, ಬಹುಮಟ್ಟಿಗೆ ಸತತ ಇರುತ್ತಿತ್ತು, ಅವರಲ್ಲಿ ಕ್ಷಮತೆ ಇರುವಷ್ಟರ ಮಟ್ಟಿಗೆ ಅವರು ಪ್ರಜ್ಞೆಯುಳ್ಳವರಾಗಿದ್ದರು– ಬಹಳಷ್ಟು ಪ್ರಜ್ಞೆಯಿದ್ದವರಲ್ಲ– ಯಾವ ಅರ್ಥದಲ್ಲಿ ಎಂದರೆ ಅವರು ತಮ್ಮನ್ನು ಕೊಂಡೊಯ್ಯಲಾಗುತ್ತಿದೆ, ತಮಗೆ ಸಹಾಯ ನೀಡಲಾಗುತ್ತದೆ, ತಮ್ಮ ಮೇಲ್ಗಡೆಗೆ ತಮ್ಮನ್ನು ಎತ್ತಿ ಹಿಡಿಯಲಾಗುತ್ತಿದೆ ಎಂಬ ಭಾವನೆ ಅವರಿಗೆ ಬರುತ್ತಿತ್ತು.

ಇವೆರಡು ವಿಷಯಗಳು ಜನರನ್ನು ಹೆಚ್ಚಿನ ರೀತಿಯಲ್ಲಿ ತಯಾರು ಮಾಡುತ್ತವೆ. ಅವರು ಒಂದರಿಂದ ಇಲ್ಲವೆ ಇನ್ನೊಂದರಿಂದ ಜನ್ಮ ತಾಳಿರುತ್ತಾರೆ, ಅವರು ತೊಂದರೆ ತೆಗೆದುಕೊಂಡರೆ ಅದು ಕ್ರಮೇಣ ಅಭಿವೃದ್ಧಿ ಹೊಂದುತ್ತದೆ, ಹೆಚ್ಚಾಗುತ್ತದೆ. ನಾವು ಹೇಳುತ್ತೇವೆ. ಉತ್ಸಾಹಕ್ಕಾಗಿ ಧಾರಣ ಶಕ್ತಿ (capacity) ನಿಮ್ಮ ದುಃಖಿತ ಸ್ಥಿತಿ ಹಾಗೂ ಕೀಳು ಚಿಕ್ಕ ಅಹಂಕಾರ ಇವುಗಳಿಂದ ನಿಮ್ಮನ್ನು

ಹೊರ ಹಾಕುತ್ತದೆ, ಮತ್ತು ಔದಾರ್ಯವಿರುವ ಕೃತಜ್ಞತೆ, ಕೃತಜ್ಞತೆಯ ಔದಾರ್ಯ ಇದು ಕೂಡ ತನ್ನನ್ನು ಚಿಕ್ಕ ಅಹಂಕಾರದಿಂದ ಹೊರಗೆ ಎಸೆಯಲಾಗಿದ್ದುದನ್ನು ಕುರಿತು ಧನ್ಯವಾದದ ಭಾವನೆ ಹೊಂದುತ್ತದೆ. ಇವೆರಡು ಅತ್ಯಂತ ಸಾಮರ್ಥ್ಯಪೂರ್ಣ ಸನ್ನೆಕೋಲುಗಳ ಹಾಗಿವೆ, ಅವು ಮನುಷ್ಯನ ಚೈತ್ಯ ಸತ್ತೆಯಲ್ಲಿರುವ ಭಗವಂತನೊಂದಿಗೆ ಸಂಪರ್ಕದಲ್ಲಿ ಪ್ರವೇಶಿಸಲು ಸಹಾಯ ಮಾಡುತ್ತವೆ. ಚೈತ್ಯ ಸತ್ತೆಯೊಡನೆ ಸಂಪರ್ಕ ಕೊಂಡಿಯ ಹಾಗೆ ಸೇವೆ ಸಲ್ಲಿಸುತ್ತದೆ– ಅದು ಅತ್ಯಂತ ನಿಶ್ಚಿತವಾದ ಸಂಪರ್ಕ ಕೊಂಡಿ.

**(CWM, 7)** **– ಶ್ರೀಮಾತೆ**

*

**ರೆಕ್ಕೆಗಳನ್ನು ಧರಿಸಿದ್ದು ಶಿರವಲ್ಲ, ಹೃದಯ**

ಹೃದಯ ರೆಕ್ಕೆಗಳನ್ನು ಧರಿಸಿದರೆ, ಶಿರವಲ್ಲ. ಹೌದು ಇದು ಅತ್ಯಗತ್ಯದ್ದಾದ ಆವಶ್ಯಕತೆ, ಉಳಿದದ್ದಾವುದೂ ಲೆಕ್ಕಕ್ಕೆ ಬರುವುದಿಲ್ಲ. ಅದು ಎಲ್ಲವೂ ಆಗಿದೆ. ಕೇವಲ ಅದು.

ಮತ್ತು ಹಾಗಾಗಿ ಮನುಷ್ಯ ಅಡೆತಡೆಗಳನ್ನು ಹಾಗೂ ತೊಂದರೆಗಳನ್ನು ಕುರಿತು ಎಳ್ಳಷ್ಟೂ ಕಾಳಜಿ ಮಾಡುವುದಿಲ್ಲ. ಅದು ನಿಮಗೇನು ಮಾಡುತ್ತದೆ. ಅದು ಲೆಕ್ಕಕ್ಕೆ ಬರುವುದಿಲ್ಲ. ಕೆಲವೊಮ್ಮೆ ಮನುಷ್ಯ ನಗುತ್ತಾನೆ. ಅದು ದೀರ್ಘಕಾಲ ತೆಗೆದುಕೊಂಡರೆ ಅದು ನಿಮಗೆ ಮಹತ್ವದ ವಿಷಯವಾಗುವುದಿಲ್ಲ. ಅದರಿಂದ ಏನಾಗುವುದಿದೆ? ಬಹಳ ದೀರ್ಘಕಾಲದವರೆಗೆ ಅಭೀಪ್ಸೆಯ ಮುಡುಪಾಗಿರಿಸಿ–ಕೊಳ್ಳುವಿಕೆಯ ಹಾಗೂ ಸ್ವ–ಸಮರ್ಪಣೆಯ ಸಂತೋಷವಿರುತ್ತದೆ.

ಏಕೆಂದರೆ ಇದು ಒಂದು ನಿಜವಾದ ಸಂತೋಷ ಮತ್ತು ಈ ಸಂತೋಷ, ಅಲ್ಲಿ ಅಹಂಭಾವದ ಏನೋ ಒಂದಿದ್ದರೆ, ಮಸುಕಾಗುತ್ತ ಹೋಗುತ್ತದೆ ಮತ್ತು ಅಲ್ಲಿ ಒತ್ತಾಯದ ಬೇಡಿಕೆ ಇರುತ್ತದೆ– ಅದನ್ನು ಮನುಷ್ಯ ಆವಶ್ಯಕತೆ ಎಂದು ಕರೆಯುತ್ತಾನೆ ಹಾಗಿರದಿದ್ದರೆ ಆ ಸಂತೋಷ ಎಂದಿಗೂ ಮಾಯವಾಗುವುದಿಲ್ಲ.

ಇದು ಮನುಷ್ಯ ದೊರಕಿಸುವ ಮೊದಲನೆಯ ವಿಷಯ, ಕೊನೆಯದು ಸಿದ್ಧಿಪಡೆಯುವುದಾಗಿರುತ್ತದೆ.

ಮತ್ತು ಇದು ದೈವೀ ವಿಜಯದ ಕುರುಹು.

ಎಲ್ಲಿಯವರೆಗೆ ಸ್ಥಿರವಾದ, ಶಾಂತಿಯುತ, ಪ್ರಕಾಶಮಯ, ವ್ಯತ್ಯಾಸಕ್ಕೊಳಗಾಗದ ಸಂತೋಷದಲ್ಲಿ ನೀವಿರುವುದಿಲ್ಲವೋ ಅದರರ್ಥ ನಿಮ್ಮನ್ನು ಪರಿಶುದ್ಧಗೊಳಿಸಲು ನೀವಿನ್ನೂ ಕಾರ್ಯಕೈಕೊಳ್ಳಬೇಕಾಗಿರುತ್ತದೆ, ಕೆಲವೊಮ್ಮೆ ಹೆಚ್ಚು ಕಷ್ಟಪಟ್ಟು ಕಾರ್ಯ ಮಾಡಬೇಕಾಗುತ್ತದೆ.

ಪ್ರತ್ಯೇಕಗೊಳಿಸುವ ಭಾವನೆಯೊಂದಿಗೆ ನೋವು, ವೇದನೆ, ದುಃಖ, ಅಜ್ಞಾನ ಹಾಗೂ ಎಲ್ಲ ಅಸಮರ್ಥತೆಗಳು ಬಂದಿವೆ. ಪರಿಪೂರ್ಣ ಸ್ವ–ಸಮರ್ಪಣೆ, ಇಡಿಯಾದ ಮುಡಿಪಾಗಿರಿಸಿಕೊಳ್ಳುವಿಕೆಯಲ್ಲಿ ಸ್ವ–ಮರೆತುಬಿಡುವಿಕೆ ಇವುಗಳಲ್ಲಿ ವೇದನೆ ಮಾಯವಾಗುತ್ತದೆ, ಅದರ ಸ್ಥಾನದಲ್ಲಿ ಸಂತೋಷ, ಬರುತ್ತದೆ, ಅದರ ಮೇಲೆ ಯಾವುದೂ ಪರದೆಯನ್ನಿರಿಸಲಾರದು. ಮತ್ತು ಕೇವಲ ಈ ಜಗತ್ತಿನಲ್ಲಿ ಈ ಸಂತೋಷ ಸ್ಥಾಪಿತಗೊಂಡಾಗ ಅದು ನಿಜವಾಗಿ ಪರಿವರ್ತನೆಗೊಳಗಾಗಬಲ್ಲದು ಮತ್ತು ಅಲ್ಲಿ ಹೊಸ ಜೀವನ, ಹೊಸ ಸೃಷ್ಟಿ, ಹೊಸ ಸಿದ್ಧಿ ಇವುಗಳಿರಬಲ್ಲವು. ಆ ಸಂತೋಷವನ್ನು ಮೊದಲು ಪ್ರಜ್ಞೆಯಲ್ಲಿ ಸ್ಥಾಪಿಸಬೇಕು ಮತ್ತು ನಂತರ ಭೌತಿಕ ಪರಿವರ್ತನೆ ಬರುತ್ತದೆ, ಅದಕ್ಕಿಂತ ಮೊದಲಲ್ಲ.

ನಿಜ ಹೇಳುವುದಾದರೆ ಭವ್ಯ ಅಸುರನ ಶಕ್ತಿಯೊಂದಿಗೆ ಜಗತ್ತಿನಲ್ಲಿ ವೇದನೆ ಪ್ರವೇಶಿಸಿತು. ಕೇವಲ ಸಂತೋಷ ಮಾತ್ರ ಅವನನ್ನು ಸೋಲಿಸಬಹುದು, ಬೇರೆ ಯಾವುದೂ ಅಲ್ಲ – ನಿಶ್ಚಿತವಾಗಿ ಕೊನೆಗೆ ಸೋಲಿಸಬಲ್ಲದು.

ದಿವ್ಯಾನಂದ ಸೃಷ್ಟಿ ಮಾಡಿತು, ದಿವ್ಯಾನಂದವೇ ಸಿದ್ಧಿಸಿಕೊಳ್ಳುವುದು. ಜನರು ಸಂತೋಷ ಎಂದು ಕರೆಯುವುದನ್ನು ಕುರಿತು ನಾನು ಮಾತನಾಡುತ್ತಿಲ್ಲ ಎಂಬುದನ್ನು ನೀವು ಗಮನಿಸಬೇಕು, ಅದು ಅಣಕು ಚಿತ್ರಣ ಕೂಡ ಅಲ್ಲ. ಸೈತಾನನಿಂದ ಹುಟ್ಟಿ ಬಂದದ್ದು, ಅದರಿಂದಾಗಿ ಮನುಷ್ಯ ಮಾರ್ಗವನ್ನು ಕಳೆದುಕೊಳ್ಳುವಂತಾಗುತ್ತದೆ. ಆ ಸಂತೋಷ ಹರ್ಷದಿಂದ, ಮರೆತುಬಿಡುವಿಕೆ–ಯಿಂದ, ಉದಾಸೀನತೆಯಿಂದ ಬರುವಂತಹದು.

ಪರಿಪೂರ್ಣ ಶಾಂತಿ, ಛಾಯೆರಹಿತ ಪ್ರಕಾಶ, ಸಾಮರಸ್ಯ, ಇಡಿಯಾದ ಸೌಂದರ್ಯ ಮತ್ತು ವಿರೋಧಿಸಲಾಗದ ಸಾಮರ್ಥ್ಯ ಇವುಗಳಿಂದಾಗುವ

ಸಂತೋಷ ಕುರಿತು ಮಾತನಾಡುತ್ತಿದ್ದೇನೆ, ಅದು ಸಾರದಲ್ಲಿ, ಅದರ ಸಂಕಲ್ಪದಲ್ಲಿ ಹಾಗೂ ಸಿದ್ಧಿಯಲ್ಲಿ ದೈವೀ ಸಾನ್ನಿಧ್ಯವೇ ಆಗಿರುತ್ತದೆ.

**(CWM, 7/396–97)** **– ಶ್ರೀಮಾತೆ**

*

## ವಾರ್ತಾಪತ್ರ

## ಶ್ರೀ ಅರವಿಂದೋ ಸೊಸೈಟಿ ಕೇಂದ್ರ

ಹಲಸಂಗಿ (KC-16)

ದಿನಾಂಕ 15–7–2018ರಂದು ಹಲಸಂಗಿಯ ಶ್ರೀ ಅರವಿಂದ ಮಂಡಳದ 75ನೆಯ ವಾರ್ಷಿಕ ಕಾರ್ಯಕ್ರಮವನ್ನು ವಿಶೇಷವಾದ ರೀತಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಕಾರ್ಯಕ್ರಮಕ್ಕೆ ಪಾಂಡಿಚೇರಿಯ ಆಶ್ರಮದ ಹಿರಿಯ ಸಾಧಕರನ್ನು ಆಮಂತ್ರಿಸಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲ ಗುರು–ಬಂಧುಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ ಪುರುಷೋತ್ತಮ ಗಲಗಲಿಯವರನ್ನು ಸಂಪರ್ಕಿಸಬಹುದು. **ಮೊಬೈಲ್ ನಂ.: 94821 04365**



*For thyself it is greater to be
a good shoemaker than a luxurious
and incompetent king.*

- Sri Aurobindo

**RNI No. 22511/1971**
No. of Pages **72 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು–ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**

ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು – 560 078.
ದೂರವಾಣಿ: 080 – 22339882, 22459628

Ed. Dr. K.S. Amur, M.sc., PhD, Pub: Dr. Ajit S. Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.